# ಇಸ್ಲಾಮ್
# ಮತ್ತು
# ಮನಸ್ಸಾಕ್ಷಿ ಸ್ವಾತಂತ್ರ್ಯ

ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್
ಜಾಗತಿಕ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಇಮಾಮ್
ಖಲೀಫತುಲ್ ಮಸೀಹ್ V

ಪ್ರಕಾಶಕರು:
ನಝಾರತ್ ನಶ್ರೊ ಇಶಾಅತ್
ಖಾದಿಯಾನ್

Islam Matthu Manasakshi Swathanthrya

Kannada rendering of

Islam Aur Azadi - e - Zameer (Urdu)

By : **HAZRAT MIRZA MASROOR AHMAD**

Imam Jama'at Ahmadiyya

KHALIFATUL MASIH V


| | |
|---|---|
| Translated by : | M.Ubeidullah |
| Revised by : | Muhammad Yusuf |
| Assisted by : | Moulavi Inamullah |
| Type Setting : | U.Basheer Ahmed |
| Published by : | Nazarat Nashro - Isha'at, Qadian, Distt. Gurdaspur, Punjab -143516 |
| First Edition : | 2016 |
| Copies : | 1000 |
| Printed at : | Fazl-e-Umar Printing Press, Qadian |

**بسم الله الرّحمٰن الرّحيم**

# ಮುನ್ನುಡಿ

ಲೋಕದ ಸೃಷ್ಟಿಯ ಆರಂಭದಿಂದಲೇ ಅಲ್ಲಾಹನ ಸಂದೇಶವಾಹಕರ ವಿರುದ್ಧ ನಿರಾಧಾರ ಆರೋಪಗಳನ್ನು ಮಾಡಿ ಕಲಹ ಮತ್ತು ಅಸ್ತವ್ಯಸ್ತತೆ ಉಂಟಾಗಲು ಪ್ರಯತ್ನಿಸುತ್ತಾ ಇರುವ ಒಂದು ವಿಭಾಗ ಇರುತ್ತಾರೆ ಎಂಬುದು ಯಾವಾಗಲೂ ಜಾರಿಯಾಗಿರುವ ಒಂದು ಕ್ರಮವಾಗಿದೆ. ಅಲ್ಲಾಹನು ವಿವಿಧ ಪ್ರವಾದಿಗಳ ಬಗ್ಗೆ ಪವಿತ್ರ ಖುರ್‌ಆನ್‌ನಲ್ಲಿ ಪ್ರಸ್ತಾಪಿಸಿರುವನು ಮತ್ತು ಅವರ ವಿರೋಧಿಗಳ ಚಟುವಟಿಕೆಗಳನ್ನೂ ವಿವರಿಸಿ ಅವರ ಅಂತಿಮ ದುರ್ಗತಿಯ ಬಗ್ಗೆ ಸ್ಪಷ್ಟವಾಗಿ ವಿವರಿಸಿರುವನು. ಹಿಂದಿನ ಕಾಲದಲ್ಲಿ ಆಗಮಿಸಿದ ಪ್ರವಾದಿಗಳು ಒಂದು ನಿರ್ದಿಷ್ಟ ಕಾಲಘಟ್ಟಕ್ಕೆ ಕಳುಹಿಸಲ್ಪಟ್ಟ ಕಾರಣ ಅವರ ವಿರುದ್ಧ ವಿರೋಧಿಗಳ ಯೋಜನೆಗಳು ಆ ಕಾಲಘಟ್ಟಕ್ಕೆ ಸೀಮಿತವಾಗಿದ್ದವು. ಆದರೆ ಹಝ್ರತ್ ಮುಹಮ್ಮದ್ ಪೈಗಂಬರ್ ﷺ ಎಲ್ಲ ಜನಾಂಗಗಳಿಗೋಸ್ಕರ ಮತ್ತು ಎಲ್ಲ ಕಾಲಘಟ್ಟಗಳಿಗೋಸ್ಕರ ಪ್ರವಾದಿಯಾಗಿ ಕಳುಹಿಸಲ್ಪಟ್ಟ ಕಾರಣ ಅವರ ವಿರುದ್ಧ ರಹಸ್ಯ ಕಾರಸ್ಥಾನಗಳು ಮತ್ತು ಕಲಹಗೊಂದಲಗಳು ಭೂಮಿಯು ಇರುವ ತನಕ ತಲೆ ಎತ್ತುತ್ತಾ ಇರುತ್ತಿವೆ. ಅವು ಕೆಲವು ಸಾರಿ ಮುಸೈಲಿಮ ಕಝ್ಝಾಬಿನ ರೂಪದಲ್ಲಿ ಕಾಣಿಸಿಕೊಂಡವು. ಕೆಲವು ಸಾರಿ "ರಂಗೀಲಾ ರಸೂಲ್" ಮೊದಲಾದ ಪುಸ್ತಕ ರೂಪದಲ್ಲಿ ಅಥವಾ "ಸ್ಯಾಟನಿಕ್ ವರ್ಸಸ್" ಪುಸ್ತಕದ ರೂಪದಲ್ಲಿ ಕಾಣಿಸಿಕೊಂಡವು. ಕೆಲವು ಸಾರಿ ವಿರೋಧಿಗಳು ಹೃದಯಕ್ಕೆ ನೋವುಂಟುಮಾಡುವ ವ್ಯಂಗ್ಯ ಚಿತ್ರಗಳ ಮೂಲಕ ನಿಂದಾತ್ಮಕ ಕೆಲಸ ಮಾಡಿದರು. ಈಗ "ಇನ್ನೊಸೆನ್ಸ್ ಆಫ್ ಮುಸ್ಲಿಮ್ಸ್" ಎಂಬ ಚಲಚ್ಚಿತ್ರ ನಿರ್ಮಾಣದ ಮೂಲಕ ಹಝ್ರತ್ ಪೈಗಂಬರರನ್ನು ﷺ ಅಪಮಾನಿಸಲು ಪ್ರಯತ್ನಿಸಲಾಗಿದೆ.

ಅಲ್ಲಾಹನು ಇಂತಹ ಸಂದರ್ಭಗಳಲ್ಲಿ ಸತ್ಯವಿಶ್ವಾಸಿಗಳನ್ನು ಪರೀಕ್ಷಿಸುತ್ತಾನೆ; ಅವರು ಹೇಗೆ ಪ್ರತಿಕ್ರಿಯೆ ನೀಡುತ್ತಾರೆಂದು ನೋಡುತ್ತಾನೆ. ಅಹ್ಮದಿಯಾ ಜಮಾಅತ್ ಇಮಾಮರೂ ಪಂಚಮ ಖಲೀಫತುಲ್ ಮಸೀಹರೂ ಆಗಿರುವ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್

(ಅಯ್ಯದಹುಲ್ಲಾಹು ತಆಲಾ ಬಿನಸ್‌ರಿಹಿಲ್ ಅಝೀಝ್) ಪವಿತ್ರ ಖುರ್‌ಆನ್, ಹಝ್ರತ್ ಮುಹಮ್ಮದ್ ಪೈಗಂಬರರ ﷺ ನುಡಿಮುತ್ತುಗಳು, ಅಹ್ಮದಿಯಾ ಜಮಾಅತಿನ ಸ್ಥಾಪಕರಾದ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಅಲೈಹಿಸ್ಸಲಾಮರ ಉಪದೇಶಗಳು ಮೊದಲಾದವುಗಳ ಬೆಳಕಿನಲ್ಲಿ ಈ ಪರಿಸ್ಥಿತಿಗಳನ್ನು ಪರಿಶೀಲಿಸಿ ತಮ್ಮ ಪ್ರತಿಕ್ರಿಯೆಗಳನ್ನು ತಮ್ಮ ಖುತ್‌ಬಗಳಲ್ಲೂ ಭಾಷಣಗಳಲ್ಲೂ ನೀಡಿದ್ದಾರೆ. ಅವುಗಳನ್ನು ನಿಮ್ಮ ಮುಂದಿರಿಸಲಾಗುವುದು. ಹಝ್ರತ್ ಖಲೀಫತುಲ್ ಮಸೀಹ್ ಅವರು 2012 ಸೆಪ್ಟೆಂಬರ್ ದಿನಾಂಕ 21ರಂದು ಶುಕ್ರವಾರದ ಜುಮುಅ ಖುತ್‌ಬ ನೀಡಿದ ನಂತರ ಪತ್ರಿಕೆಗಳ ಮತ್ತು ಇತರ ಮಾಧ್ಯಮಗಳ ಪ್ರತಿನಿಧಿಗಳನ್ನು ಭೇಟಿಯಾದರು. ಆ ಸಂಪರ್ಕ ಮಾಧ್ಯಮಗಳು ಪ್ರಕಟಿಸಿದ ವಿಮರ್ಶೆಗಳಲ್ಲಿ ಕೆಲವನ್ನು ಈ ಪುಸ್ತಕದ ಕೊನೆಯ ಭಾಗದಲ್ಲಿ ನೀಡಲಾಗಿದೆ.

ಈ ವಾಸ್ತವಿಕ ಪ್ರಕಾಶವನ್ನು ಲೋಕದ ವಿವಿಧ ಭಾಗಗಳಿಗೆ ನಾವು ಬೇಗನೆ ತಲಪಿಸುವವರಾಗಲಿ ಎಂದು ಅಲ್ಲಾಹನನ್ನು ಪ್ರಾರ್ಥಿಸುತ್ತೇವೆ. ಅದರ ಮೂಲಕ ಲೋಕವು ಬೆಳಗಿಸಲ್ಪಡಲಿ; ಎಲ್ಲ ಕಡೆಗಳಲ್ಲೂ ಶಾಂತಿ ಮತ್ತು ನೆಮ್ಮದಿ ವ್ಯಾಪಿಸಲಿ ಮತ್ತು ಈ ಭೂಮಿಯಲ್ಲಿಯೂ ವಾಸ್ತವಿಕ ಸ್ವರ್ಗದ ದೃಶ್ಯವನ್ನು ಕಾಣಲು ಸಾಧ್ಯವಾಗಲಿ – ಆಮೀನ್.

ಡಿಸೆಂಬರ್ 2012.

**ಮುನೀರುದ್ದೀನ್ ಶಮ್ಸ್**
ಎಡಿಶನಲ್ ವಕೀಲುತ್ತಸ್‌ನೀಫ್
ಲಂಡನ್.

بسم الله الرّحمٰن الرّحيم

ಅಹ್ಮದಿಯಾ ಜಮಾಅತ್ ಇಮಾಮ್ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್, ಖಲೀಫತುಲ್ ಮಸೀಹ್ ಖಾಮಿಸ್ (ಅಯ್ಯದಹುಲ್ಲಾಹು ತಆಲಾ) 2012 ಸೆಪ್ಟೆಂಬರ್ ದಿನಾಂಕ 28ರಂದು ಲಂಡನ್, ಮೋರ್ಡನ್ ಸರ್‍ರೆ ಯು.ಕೆ.ಯಲ್ಲಿರುವ ಬೈತುಲ್ ಫುತೂಹ್ ಮಸ್‌ಜಿದ್‌ನಲ್ಲಿ ನೀಡಿದ ಖುತ್‌ಬ ಪ್ರವಚನದಲ್ಲಿ ಹೀಗೆ ಹೇಳಿದರು:

ಕಳೆದ ವಾರ ನಾನು ಜುಮುಅ ನಮಾಝ್‌ಗೋಸ್ಕರ ಇಲ್ಲಿಗೆ ಬಂದಾಗ ನಾನು ಕಾರಿನಿಂದ ಇಳಿದ ಕೂಡಲೆ ಪತ್ರಿಕೆಗಳ ವರದಿಗಾರರು ದೊಡ್ಡ ಸಂಖ್ಯೆಯಲ್ಲಿ ಅಲ್ಲಿ ನನ್ನೆದುರಿಗೆ ನಿಂತಿರುವುದಾಗಿ ನಾನು ಕಂಡೆನು. ನಾನು ಅಮೀರ್ ಸಾಹೇಬರನ್ನು ವಿಚಾರಿಸಿದಾಗ ಅವರು ಹೇಳಿದರು: "ಹಝ್ರತ್ ಮುಹಮ್ಮದ್ ಪೈಗಂಬರರ ﷺ ಬಗ್ಗೆ ಅಮೇರಿಕದಲ್ಲಿ ನಿರ್ಮಿಸಲಾದ, ಹೃದಯಕ್ಕೆ ಅತ್ಯಂತ ಹೆಚ್ಚು ನೋವನ್ನುಂಟುಮಾಡುವ ಚಲಚ್ಚಿತ್ರದ ವಿರುದ್ಧ ಮುಸ್ಲಿಮರು ಪ್ರತಿಭಟಿಸುತ್ತಾ ಇದ್ದಾರೆ. ಇದಕ್ಕೆ ಸಂಬಂಧಿಸಿ ಅಹ್ಮದಿಯರ ಪ್ರತಿಕ್ರಿಯೆ ಹೇಗಿದೆ ಎಂಬುದನ್ನು ತಿಳಿಯಲು ಪತ್ರಿಕೆಗಳ ವರದಿಗಾರರು ಆಗಮಿಸಿದ್ದಾರೆ." ಆಗ ನಾನು ಹೇಳಿದೆ: "ಈ ದಿನ ಜುಮುಅ ಖುತ್‌ಬದಲ್ಲಿ ಈ ವಿಷಯದ ಬಗ್ಗೆಯೇ ನಾನು ಪ್ರಸ್ತಾಪಿಸಲಿರುವೆನು ಮತ್ತು ಅಹ್ಮದಿಯರ ಪ್ರತಿಕ್ರಿಯೆ ಹೇಗಿರಬೇಕೆಂದು ವಿವರಿಸುವೆನು ಎಂದು ಅವರೊಂದಿಗೆ ಹೇಳಿರಿ ."

ಇಷ್ಟು ದೊಡ್ಡ ಸಂಖ್ಯೆಯಲ್ಲಿ ಮಾಧ್ಯಮಗಳ ವರದಿಗಾರರನ್ನು ಇಲ್ಲಿಗೆ ಬರುವಂತೆ ಮಾಡಿದುದು ಮತ್ತು ಈ ವಿಷಯಕ್ಕೆ ಸಂಬಂಧಿಸಿ ಖುತ್‌ಬ ನೀಡಲು ನನ್ನ ಹೃದಯದಲ್ಲಿ ಯೋಚನೆ ಉಂಟು ಮಾಡಿದುದು ಅಲ್ಲಾಹನ ಕೆಲಸವೇ ಆಗಿದೆ.

ಪತ್ರಿಕೆಗಳ ವರದಿಗಾರರು ಮಾತ್ರವಲ್ಲ ಟಿ.ವಿ. ಚ್ಯಾನಲ್‌ಗಳ ವರದಿಗಾರರೂ ಆಗಮಿಸಿದ್ದರು. ಬಿ.ಬಿ.ಸಿ.ಯ ಅಧೀನದಲ್ಲಿರುವ ನ್ಯೂಸ್ ನೈಟ್, ಬಿ.ಬಿ.ಸಿ., ನ್ಯೂಜಿಲೇಂಡ್ ನೇಶನಲ್ ಟೆಲಿವಿಶನ್, ಫ್ರೆಂಚ್ ಟೆಲಿವಿಶನ್ ಮತ್ತು ಅನೇಕ ಇತರ ಟಿ.ವಿ. ಪ್ರತಿನಿಧಿಗಳು ಆಗಮಿಸಿದ್ದರು.

ಖುತ್‌ಬ ನೀಡಿದ ನಂತರ ವರದಿಗಾರರನ್ನು ಭೇಟಿಯಾದಾಗ ನ್ಯೂಜಿಲೇಂಡ್ ಪ್ರತಿನಿಧಿ ನನ್ನ ಬಲ ಬದಿಗೆ ಕುಳಿತಿದ್ದರು. ಅವರಿಗೆ ಪ್ರಶ್ನೆ ಕೇಳಲು ಮೊದಲು ಸಂದರ್ಭ ಲಭಿಸಿತು. ಅವರು ವಿಚಾರಿಸಿದರು: "ನೀವು

ಯಾವ ಸಂದೇಶ ನೀಡಲು ಬಯಸುತ್ತೀರಿ?" ನಾನು ಹೇಳಿದೆ: "ನನ್ನ ಸಂದೇಶ ನೀವು ಆಲಿಸಿರುವಿರಿ." ಅವರು ಖುತ್‌ಬದ ಭಾಷಾಂತರವನ್ನು ಆಲಿಸುತ್ತಿದ್ದರು. ಹಝ್ರತ್ ಮುಹಮ್ಮದ್ ಪೈಗಂಬರರ ﷺ ಉನ್ನತ ಸ್ಥಾನದ ಬಗ್ಗೆ ನಾನು ಖುತ್‌ಬದಲ್ಲಿ ವಿವರಿಸಿದ್ದೇನೆ. ಅವರ ಪದವಿ ಬಹಳ ಉನ್ನತವಾಗಿದೆ. ಅವರ ಅತ್ಯುತ್ತಮ ನಡೆವಳಿಕೆ ಪ್ರತಿಯೊಬ್ಬ ಮುಸ್ಲಿಮನಿಗೆ ಅನುಕರಣೀಯವಾಗಿದೆ. ಮುಸ್ಲಿಮರು ಪ್ರಕಟಿಸಿದ ದುಃಖ ಮತ್ತು ಕೋಪದ ಪ್ರತಿಕ್ರಿಯೆ ಒಂದು ರೀತಿಯಲ್ಲಿ ಸರಿಯಾಗಿಯೇ ಇದೆ. ಇಂತಹ ಪ್ರತಿಕ್ರಿಯೆ ಉಂಟಾಗಬೇಕಾದುದೇ ಆಗಿದೆ. ಆದರೆ ಕೆಲವು ಸ್ಥಳಗಳಲ್ಲಿ ಪ್ರತಿಭಟನೆ ತಪ್ಪಾದ ರೀತಿಯಲ್ಲಿ ನಡೆಯುತ್ತಿದೆ. ನಮ್ಮ ಹೃದಯಗಳಲ್ಲಿ ಹಝ್ರತ್ ಮುಹಮ್ಮದ್ ಪೈಗಂಬರರಿಗೆ ﷺ ಇರುವ ಸ್ಥಾನವೇನೆಂದು ಲೌಕಿಕ ದೃಷ್ಟಿಯ ಜನರು ಮನವರಿಕೆ ಮಾಡಿಕೊಳ್ಳಲಾರರು. ಆದುದರಿಂದ ಇಂತಹ ವಿಷಯಗಳು ನಮಗೆ ಎಷ್ಟು ನೋವು ಮತ್ತು ದುಃಖವನ್ನುಂಟುಮಾಡುತ್ತವೆ ಎಂದು ಲೌಕಿಕ ಮನೋಭಾವದ ಜನರಿಗೆ ಅರ್ಥವಾಗದು. ಇಂತಹ ವರ್ತನೆಗಳು ಲೋಕದ ಶಾಂತಿಯನ್ನು ಕೆಡಿಸುತ್ತವೆ. ನ್ಯೂಜಿಲೇಂಡ್ ದೇಶದ ಒಬ್ಬ ಪ್ರತಿನಿಧಿ, "ನೀವು ಬಹಳ ಕಠಿಣ ಶಬ್ದಗಳನ್ನು ಬಳಸಿದ್ದೀರಿ. ಆ ಜನರು ನರಕಕ್ಕೆ ಹೋಗುವರೆಂದು ನೀವು ಹೇಳಿದಿರಿ. ನೀವು ಸಹ ಕಠಿಣ ಶಬ್ದಗಳನ್ನು ಬಳಸಿ ತಪ್ಪಾಗಿ ಪ್ರತಿಭಟಿಸುವವರ ಜೊತೆ ಸೇರಿರುವಿರಿ" ಎಂದು ಸೂಚಿಸುತ್ತಾ ಒತ್ತಿ ಹೇಳಿದ್ದನು. ಅವನು ಇದೇ ರೀತಿ ಶಬ್ದ ಬಳಸಿಲ್ಲವಾದರೂ ಅವನು ಪದೇ ಪದೇ ಇದೇ ಪ್ರಶ್ನೆ ಕೇಳುತ್ತಾ ಇದ್ದುದರಿಂದ ಅವನ ಧ್ವನಿಯಿಂದ ಇದೇ ರೀತಿ ಭಾಸವಾಗುತ್ತಿತ್ತು. ನಾನು ಅವನೊಂದಿಗೆ ಹೇಳಿದೆ: ಅಲ್ಲಾಹನಿಗೆ ಪ್ರಿಯರಾದ ಬಗ್ಗೆ ಇಂತಹ ಅನುಚಿತ ರೀತಿಯಲ್ಲಿ ವರ್ತಿಸಿದರೆ, ಅವರನ್ನು ಅಪಮಾನಿಸಲು ಪ್ರಯತ್ನಿಸಿದರೆ ಮತ್ತು ಅವರಿಗೆ ಎಷ್ಟು ಉಪದೇಶಿಸಿದರೂ ಅದರಿಂದ ಹಿಂದೆ ಸರಿಯದಿದ್ದರೆ ಮತ್ತು ಅಪಹಾಸ್ಯವನ್ನು ಮುಂದುವರಿಸುತ್ತಾ ಇದ್ದರೆ, ಆಗ ಅಲ್ಲಾಹನ ವಿಧಿ ನಿರ್ಣಯ ಜಾರಿಗೊಳ್ಳುತ್ತದೆ. ಶಿಕ್ಷೆ ಸಹ ಬರಬಹುದಾಗಿದೆ. ಅಲ್ಲಾಹನು ಅಂತಹ ಜನರನ್ನು ಹಿಡಿಗೂಡುತ್ತಾನೆ.....

ನಾವು ಹಿಂಸಾತ್ಮಕ ಪ್ರತಿಭಟನೆ ನಡೆಸಿ ವಿಧ್ವಂಸಕ ಕೆಲಸಗಳನ್ನು ಮಾಡುವುದಿಲ್ಲ. ಇಂತಹ ಹಿಂಸಾತ್ಮಕ ಕೆಲಸಗಳಲ್ಲಿ ಯಾವನೇ ಅಹ್ಮದಿ ಭಾಗವಹಿಸಿದುದನ್ನು ನೀವು ಕಾಣಲಾರಿರಿ.

ಟೆಲಿವಿಶನ್‌ನಲ್ಲಿ ವರದಿಗಾರನು ನನ್ನ ಉತ್ತರವನ್ನು ಬಿತ್ತರಿಸಿ ಹೀಗೆ ಹೇಳಿದನು: "ಅಹ್ಮದಿಯಾ ಜಮಾಅತ್ ಮುಸ್ಲಿಮ್ ಅಲ್ಪಸಂಖ್ಯಾತ

ಜಮಾಅತಾಗಿದೆ. ಅವರೊಂದಿಗೆ ಕೂಡ ಮುಸ್ಲಿಮರು ಉತ್ತಮವಾಗಿ ವರ್ತಿಸುವುದಿಲ್ಲ. ಈ ಜಮಾಅತಿನ ಖಲೀಫರು ನೀಡಿದ ಸಂದೇಶ ಅಹ್ಮದಿ ಮುಸ್ಲಿಮರ ಮೇಲೆ ಪ್ರಭಾವ ಬೀರುವ ಹಾಗೆ ಅಹ್ಮದಿಯೇತರ ಮುಸ್ಲಿಮರ ಮೇಲೆ ಪ್ರಭಾವ ಬೀರುತ್ತದೆಯೋ ಇಲ್ಲವೋ ಎಂದು ನೋಡಬೇಕಿದೆ....."

"ನ್ಯೂಸ್ ನೈಟ್" ಇಲ್ಲಿನ ಟಿ.ವಿ. ಚ್ಯಾನಲ್ ಆಗಿದೆ. ಅದರ ಪ್ರತಿನಿಧಿ ಹೇಳಿದರು: "ನಾನು ಈ ಚಲಚ್ಚಿತ್ರ ನೋಡಿದ್ದೇನೆ. ಆದರೆ ಇಷ್ಟು ಗುಲ್ಲೆಬ್ಬಿಸಿ ಮುಸ್ಲಿಮರು ಪ್ರತಿಭಟಿಸುವಂತೆ ಮಾಡುವ ಯಾವುದೂ ಅದರಲ್ಲಿಲ್ಲ. ನೀವು ಸಹ ಅದರ ಬಗ್ಗೆ ದೀರ್ಘ ಖುತ್‌ಬ ನೀಡಿದಿರಿ. ಕೆಲವು ಕಡೆ ಕೆಲವು ಕಠಿಣ ಶಬ್ದಗಳನ್ನು ಬಳಸಿ ಖಂಡಿಸಿರುವಿರಿ. ಅದೊಂದು ಹಗುರ ಹಾಸ್ಯ ಭರಿತ ಚಲಚ್ಚಿತ್ರವಾಗಿದೆ.

ಇದು ಅವರ ಸ್ವಭಾವ ಗುಣದ ಮಟ್ಟವಾಗಿದೆ. ನಾನು ಅವನೊಂದಿಗೆ ಹೇಳಿದೆ: "ನೀವು ಯಾವ ರೀತಿ ಆ ಚಲಚ್ಚಿತ್ರ ನೋಡಿರುವಿರಿ? ಅದರ ಬಗ್ಗೆ ನೀವು ಮಾಡುವ ಮೌಲ್ಯಮಾಪನ ಹೇಗೆ? ಎಂದು ಗೊತ್ತಿಲ್ಲ. ಆದರೆ ಹಝ್ರತ್ ಮುಹಮ್ಮದ್ ಪೈಗಂಬರರಿಗೆ(ಸ) ಮುಸ್ಲಿಮರ ದೃಷ್ಟಿಯಲ್ಲಿರುವ ಮತ್ತು ಹೃದಯದಲ್ಲಿರುವ ಗೌರವ, ಪ್ರೀತಿಗಳನ್ನು ನಿಮಗೆ ಮನವರಿಕೆ ಮಾಡಿಕೊಳ್ಳಲು ಸಾಧ್ಯವಿಲ್ಲ. ನಾನು ಆ ಚಲಚ್ಚಿತ್ರ ನೋಡಿಲ್ಲ. ಆದರೆ ಅದನ್ನು ನೋಡಿದವರು ಅದರಲ್ಲಿರುವ ಒಂದೆರಡು ವಿಷಯಗಳನ್ನು ನನಗೆ ತಿಳಿಸಿದ್ದಾರೆ. ಅವು ಸಹಿಸಲು ಅಸಾಧ್ಯವಾಗಿವೆ. ಆದರೆ ಅದರಲ್ಲಿ ಗಮನಾರ್ಹವಾದುದೇನೂ ಇಲ್ಲವೆಂದು ನೀವು ಹೇಳುತ್ತೀರಿ. ಆದರೆ ನನಗೆ ತಿಳಿಸಿದವರು ಹೇಳಿದ ಮಾತುಗಳನ್ನು ಆಲಿಸುವಾಗ ನನಗೆ ಆ ಚಲಚ್ಚಿತ್ರವನ್ನು ನೋಡಲು ಧೈರ್ಯ ಕೂಡ ಬರಲಿಕ್ಕಿಲ್ಲ. ಅದರಲ್ಲಿ ಹೇಳಲಾದ ವಿಷಯಗಳನ್ನು ಕೇಳುವಾಗಲೇ ರಕ್ತ ಕುದಿಯುತ್ತದೆ." ನಾನು ವರದಿಗಾರನೊಂದಿಗೆ ಹೇಳಿದೆ: "ನಿಮ್ಮ ತಂದೆಯನ್ನು ಯಾರಾದರೂ ಬೈದರೆ, ಕೆಟ್ಟಮಾತು ಹೇಳಿದರೆ, ಅವಿವೇಕದಿಂದ ಮಾತನಾಡಿದರೆ ಆತನ ಬಗ್ಗೆ ನಿಮ್ಮ ಪ್ರತಿಕ್ರಿಯೆ ಹೇಗಿರುವುದು? ನೀವು ಪ್ರತಿಭಟಿಸುವಿರೋ ಇಲ್ಲವೋ? ಸರಿಯಾಗಿ ಉತ್ತರ ಹೇಳಿರಿ. ಹಝ್ರತ್ ಮುಹಮ್ಮದ್ ಪೈಗಂಬರರ ﷺ ಸ್ಥಾನ ಮುಸ್ಲಿಮರ ದೃಷ್ಟಿಯಲ್ಲಿ ಅದಕ್ಕಿಂತ ಬಹಳ ಉನ್ನತವಾಗಿದೆ. ಆ ಸ್ಥಾನವನ್ನು ತಲಪಲು ಯಾರಿಗೂ ಸಾಧ್ಯವಿಲ್ಲ...."

ಈ ಜನರು ತಮ್ಮ ಚೇಷ್ಟೆಗಳನ್ನು ಬಿಡುವುದಿಲ್ಲ. ಮುಂದೆ ಸಹ ಬಿಡಲಾರರು. ಮುಸ್ಲಿಮರು ಮಾಡುತ್ತಿರುವ ಪ್ರತಿಭಟನೆಯನ್ನು ನೆಪವಾಗಿ

ತೆಗೆದುಕೊಂಡು ಈ ಜನರು ನಮ್ಮ ಹೃದಯಗಳನ್ನು ಇನ್ನಷ್ಟು ಗಾಯಗೊಳಿಸುವ ಸಿದ್ಧತೆಯಲ್ಲಿದ್ದಾರೆ ಎಂದು ತೋರುತ್ತದೆ. ಅವರು ತಮ್ಮ ನೀಚ ಕೃತ್ಯಗಳನ್ನು ಒಂದು ದೇಶದಿಂದ ಇನ್ನೊಂದು ದೇಶಕ್ಕೆ ಹರಡುತ್ತಾ ಹೋಗುತ್ತಿದ್ದಾರೆ. ಎರಡು ದಿನ ಹಿಂದೆ ಸ್ಪೈನ್ ದೇಶದ ಪತ್ರಿಕೆ ಸಹ ವ್ಯಂಗ್ಯ ಚಿತ್ರಗಳನ್ನು ರಚಿಸಿ ಪ್ರಕಟಿಸಿತು. ಅದು ಹೇಳಿತು: ಇದೊಂದು ಹಾಸ್ಯ ಕೃತ್ಯವೂ ಮುಸ್ಲಿಮರ ಪ್ರತಿಭಟನೆಗೆ ಉತ್ತರವೂ ಆಗಿದೆ.

ಇಂತಹ ಜನರ ಬಾಯಿ ಮುಚ್ಚಿಸಲು ಮತ್ತು ಕನಿಷ್ಠ ಪಕ್ಷ ಸಜ್ಜನರಾದ ವಿದ್ಯಾವಂತರಿಗೆ ಸತ್ಯವನ್ನು ತಿಳಿಸಲು ಹಾಗೂ ಈ ಜನರ ಕೆಲಸಗಳಿಂದ ಲೋಕದ ಶಾಂತಿಗೆ ಭಂಗವಾಗುತ್ತದೆ ಎಂದು ಮನವರಿಕೆ ಮಾಡಿಕೊಡಲು ತೀವ್ರ ಪ್ರಯತ್ನಗಳನ್ನು ಮಾಡಬೇಕು. ನಾವು ಈ ಜನರ ದೌರ್ಜನ್ಯಕರ ಕೆಲಸಗಳ ವಾಸ್ತವಿಕತೆ ಬಗ್ಗೆ ಲೋಕಕ್ಕೆ ತಿಳಿಸಲು ನಮಗೆ ಸಾಧ್ಯವಿರುವಷ್ಟು ಪ್ರಯತ್ನ ಮಾಡಬೇಕು.....

ವಿಕ್ಟೋರಿಯಾ ಮಹಾರಾಣಿಯ ವಜ್ರ ಜೂಬಿಲಿ ಸಮಾರಂಭದ ಸಂದರ್ಭದಲ್ಲಿ ಹಝ್ರತ್ ವಾಗ್ದತ್ತ ಮಸೀಹ್[ಅ] "ತುಹ್ಫ ಖೈಸರಿಯ್ಯ" ಎಂಬ ಶೀರ್ಷಿಕೆಯಲ್ಲಿ ಒಂದು ಪುಸ್ತಕ ಬರೆದು ಮಹಾರಾಣಿಗೆ ಕಳುಹಿಸಿದ್ದರು. ಅದರಲ್ಲಿ ಮಹಾರಾಣಿಯ ಸರಕಾರದ ನ್ಯಾಯ ಪ್ರಿಯತೆ ಬಗ್ಗೆ ಪ್ರಶಂಸಿಸುವುದರೊಂದಿಗೆ ಇಸ್ಲಾಮ್ ಧರ್ಮದ ಸಂದೇಶವನ್ನೂ ಅದರ ಮೂಲಕ ನೀಡಲಾಗಿತ್ತು. ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸಲು ವಿವಿಧ ಧರ್ಮಗಳು ಪರಸ್ಪರ ಸಂಬಂಧ ಸ್ಥಾಪಿಸಬೇಕೆಂದೂ ಧಾರ್ಮಿಕ ಮಹಾನುಭಾವರನ್ನೂ ಪ್ರವಾದಿಗಳನ್ನೂ ಗೌರವ ಭಾವನೆಯಿಂದ ಕಾಣಬೇಕಾದುದರ ಆವಶ್ಯಕತೆ ಬಗ್ಗೆ ಮಹಾರಾಣಿಯ ಗಮನವನ್ನು ಹರಿಸಲಾಗಿತ್ತು. ಶಾಂತಿ ಸ್ಥಾಪನೆಯನ್ನು ಹೇಗೆ ಮಾಡಬಹುದೆಂದು ವಿಶದವಾಗಿ ವಿವರಿಸಲಾಗಿತ್ತು.

ಈಗ ಎಲಿಝಬೆತ್ ಮಹಾರಾಣಿಯ ವಜ್ರ ಜೂಬಿಲಿ ಸಂದರ್ಭದಲ್ಲಿ "ತುಹ್ಫ ಖೈಸರಿಯ್ಯ"ದ ಇಂಗ್ಲಿಷ್ ಭಾಷಾಂತರವನ್ನು ಮುದ್ರಿಸಿ ಸುಂದರ ಚೌಕಟ್ಟಿನೊಂದಿಗೆ ಮಹಾರಾಣಿಗೆ ಕಳುಹಿಸಲಾಗಿತ್ತು. ಮಹಾರಾಣಿಗೆ ಸಂಬಂಧಿಸಿದ ವಿಭಾಗಕ್ಕೆ ಈ ಪುಸ್ತಕವನ್ನು ಪಾರಿತೋಷಿಕವಾಗಿ ನನ್ನ ಪತ್ರದೊಂದಿಗೆ ನೀಡಲಾಗಿತ್ತು. ಅವರಿಂದ ನನಗೆ ಕೃತಜ್ಞತೆ ಸೂಚಿಸುವ ಪತ್ರ ಸಹ ಬಂದಿದೆ. ಮಹಾರಾಣಿಯ ಗ್ರಂಥಾಲಯದಲ್ಲಿ ಅದನ್ನು ಇರಿಸಲಾಗಿದೆ ಎಂದೂ ಅದನ್ನು ಮಹಾರಾಣಿ ಓದುವರೆಂದೂ ಪತ್ರದಲ್ಲಿ ಬರೆಯಲಾಗಿತ್ತು.

ಮಹಾರಾಣಿ ಆ ಪುಸ್ತಕವನ್ನು ಓದಿದರೂ ಓದದಿದ್ದರೂ ನಾವು ನಮ್ಮ ಕರ್ತವ್ಯವನ್ನು ಈಡೇರಿಸಲು ಪ್ರಯತ್ನಿಸಿದ್ದೇವೆ.

ಹಝ್ರತ್ ವಾಗ್ದತ್ತ ಮಸೀಹರ(ಅ) ಕಾಲದಲ್ಲಿ ಲೋಕದಲ್ಲಿದ್ದ ಅಶಾಂತಿಯ ವಾತಾವರಣ ಈಗ ಸಹ ಇದೆ. ಈ ಅಶಾಂತಿ ಈಗ ವರ್ಧಿಸುತ್ತಲೂ ಇದೆ. ಈಗ ಈ ಜನರು ಇಸ್ಲಾಮಿನ ವಿರುದ್ಧ ಆಕ್ರಮಣ, ಹಝ್ರತ್ ಮುಹಮ್ಮದ್ ಪೈಗಂಬರರ ﷺ ವಿರುದ್ಧ ದೂಷಣೆ ಮಾಡುತ್ತಾ ಅವರನ್ನು ಪರಿಹಾಸ ಮಾಡುತ್ತಾ ಮುಂದುವರಿಯುತ್ತಿದ್ದಾರೆ. ಅವರು ಬಹಳ ಮುಂದೆ ಸಾಗುತ್ತಿದ್ದಾರೆ....

## ಲೋಕದಲ್ಲಿ ಶಾಂತಿ ಸ್ಥಾಪಿಸಲು ದೇವನಿಂದ ನೇಮಿಸಲ್ಪಟ್ಟ ಮಹಾತ್ಮರನ್ನು ಗೌರವಿಸುವುದು ಆವಶ್ಯಕವಾಗಿದೆ

ಪ್ರವಾದಿಗಳು ತಾವು ದೇವನಿಂದ ಕಳುಹಿಸಲ್ಪಟ್ಟವರು ಎಂದು ವಾದಿಸುವಾಗ ಮತ್ತು ಅವರು ಸ್ಥಾಪಿಸಿದ ಸಂಘಟನೆಗಳು ಅಭಿವೃದ್ಧಿ ಹೊಂದುವಾಗ ಆ ಪ್ರವಾದಿಗಳು ದೇವನ ಕಡೆಯಿಂದ ಬಂದವರೆಂದು ಸಾಬೀತಾಗುತ್ತದೆ. ಆದುದರಿಂದ ದೇವನಿಂದ ಕಳುಹಿಸಲ್ಪಟ್ಟವರನ್ನು ಗೌರವಿಸುವುದು ಲೋಕದಲ್ಲಿ ಶಾಂತಿಯನ್ನು ಸ್ಥಾಪಿಸಲು ಆವಶ್ಯಕವಾಗಿದೆ. ಹಝ್ರತ್ ವಾಗ್ದತ್ತ ಮಸೀಹ್(ಅ) ಶಾಂತಿಯನ್ನು ಹೇಗೆ ಸ್ಥಾಪಿಸಬಹುದು ಮತ್ತು ಪ್ರವಾದಿಗಳ ಸ್ಥಾನಮಾನಗಳೇನು ಎನ್ನುವುದರ ಬಗ್ಗೆ ಮಹಾರಾಣಿಗೆ ಬರೆದ ಪುಸ್ತಕದ ಒಂದು ಭಾಗವನ್ನು ನಿಮಗೆ ಓದಿ ಹೇಳುತ್ತೇನೆ. ಹಝ್ರತ್ ವಾಗ್ದತ್ತ ಮಸೀಹ್(ಅ) ಹೀಗೆ ಬರೆದಿದ್ದಾರೆ:

"ಇದೇ ನಿಯಮ ದೇವನ ಪುರಾತನ ನಡೆವಳಿಕೆಯಲ್ಲಿ ಸೇರಿದೆ." (ಎಂದರೆ ಒಂದು ಸರಕಾರ ತನ್ನ ಬಗ್ಗೆ ಒಂದು ಸುಳ್ಳು ಹೇಳಿಕೆ ನೀಡುವುದನ್ನು ಸಹಿಸದಿರುವ ಹಾಗೆಯೇ ಅಲ್ಲಾಹನ ಪ್ರತಿನಿಧಿ ತಾನೆಂದು ಸುಳ್ಳು ಹೇಳಿದವನ ಮಾತನ್ನು ಅಲ್ಲಾಹನೂ ಸಹಿಸುವುದಿಲ್ಲ.) ತಾನು ಪ್ರವಾದಿ ಎಂದು ಸುಳ್ಳು ವಾದ ಮಾಡಿದವನಿಗೆ ದೇವನು ಸಮಯಾವಕಾಶ ನೀಡುವುದಿಲ್ಲ. ಅವನು ಬೇಗನೆ ಹಿಡಿಗೂಡಲ್ಪಡುತ್ತಾನೆ ಮತ್ತು ಶಿಕ್ಷಿಸಲ್ಪಡುತ್ತಾನೆ. ಈ ನಿಯಮವನ್ನು ಪರಿಗಣಿಸಿ ಒಬ್ಬ ವ್ಯಕ್ತಿ ಯಾವುದಾದರೂ ಒಂದು ಕಾಲದಲ್ಲಿ ಪ್ರವಾದಿ ಎಂದು ವಾದಿಸಿದ ನಂತರ ಪ್ರವಾದಿಯ ವಾದವು ಬೇರೂರಿ ಪ್ರವಾದಿಯ ಧರ್ಮ ಲೋಕದಲ್ಲಿ ಹಬ್ಬಿದರೆ ಮತ್ತು ದೀರ್ಘಕಾಲ

ಬಾಳಿದರೆ ಅಂತಹ ಪ್ರವಾದಿಗಳನ್ನು ನಾವು ಗೌರವದಿಂದ ಕಾಣಬೇಕು ಮತ್ತು ಸತ್ಯವಂತರೆಂದು ಗ್ರಹಿಸಬೇಕು. ಇಂತಹ ಧರ್ಮಗಳ ಗ್ರಂಥಗಳಲ್ಲಿ ತಪ್ಪುಗಳನ್ನು ಕಂಡರೆ ಅಥವಾ ಧರ್ಮದ ಅನುಯಾಯಿಗಳನ್ನು ಕೆಟ್ಟ ನಡತೆಯವರಾಗಿ ಕಂಡರೆ ನಾವು ಆ ಧರ್ಮಗಳ ಸ್ಥಾಪಕರನ್ನು ನಿಂದಿಸಬಾರದು. ಏಕೆಂದರೆ ಧರ್ಮ ಗ್ರಂಥಗಳಲ್ಲಿ ಹಸ್ತಕ್ಷೇಪ ನಡೆದಿರಬಹುದಾಗಿದೆ. ವ್ಯಾಖ್ಯಾನ ಗ್ರಂಥಗಳಲ್ಲಿ ವ್ಯಾಖ್ಯಾನಗಾರನ ತಪ್ಪು ಭಾವನೆಗಳು ಪ್ರವೇಶಿಸಿರಬಹುದಾಗಿದೆ. ಆದರೆ ಒಬ್ಬನು ಸುಳ್ಳು ಸುಳ್ಳಾಗಿ ತಾನು ಪ್ರವಾದಿ ಎಂದು ವಾದಿಸಿ ತನ್ನ ಕೆಲವು ಮಾತುಗಳನ್ನು ದೇವವಾಣಿ ಎಂದು ಸುಳ್ಳು ಹೇಳಿದರೆ ಅವನು ಪ್ರವಾದಿಯಲ್ಲದ ಕಾರಣದಿಂದಲೂ ಅವನು ಸೂಚಿಸಿದ ವಚನಗಳು ದೇವ ವಚನಗಳಲ್ಲವಾದುದರಿಂದಲೂ ಅವನಿಗೆ ಖಂಡಿತವಾಗಿಯೂ ಸಮಯಾವಕಾಶ ಲಭಿಸಲಾರದು.

"ಒಬ್ಬ ಪ್ರವಾದಿಯ ಧರ್ಮ ಬೇರೂರಿ ದೀರ್ಘ ಕಾಲದಿಂದ ಜನರು ಆ ಧರ್ಮಕ್ಕೆ ಸೇರುತ್ತಾ ಇದ್ದರೆ, ಅಂತಹ ಎಲ್ಲ ಪ್ರವಾದಿಗಳನ್ನು ಸತ್ಯವಂತರೆಂದು ನಂಬುವುದು ಅತ್ಯಂತ ಸರಿಯಾದ ಮತ್ತು ಅನುಗ್ರಹಭರಿತ ಸಿದ್ಧಾಂತವಾಗಿದೆ ಹಾಗೂ ಅದು ಸೌಹಾರ್ದದ ಅಸ್ತಿಭಾರ ಹಾಕುವಂತಹದ್ದಾಗಿದೆ. ಇದು ಅತ್ಯಂತ ಉತ್ತಮ ಸಿದ್ಧಾಂತವಾಗಿದೆ. ಈ ಸಿದ್ಧಾಂತವನ್ನು ಲೋಕದ ಎಲ್ಲ ಜನರು ಅನುಸರಿಸುವರಾದರೆ ಸಾವಿರಾರು ಕಲಹಗಳು ನಿವಾರಣೆಗೊಳ್ಳುವುವು. ಜನರ ಮಧ್ಯೆ ಶಾಂತಿ ಸೌಹಾರ್ದಗಳನ್ನು ಕೆಡಿಸುವ ಧರ್ಮನಿಂದೆಯು ಕೊನೆಗೊಳ್ಳುವುವು. ಯಾವುದಾದರೂ ಧರ್ಮದ ಅನುಯಾಯಿಗಳ ಕುರಿತು ಕೆಲವರು ತಮ್ಮ ಅಭಿಪ್ರಾಯ ಪ್ರಕಾರ ಆ ಧರ್ಮದ ಅನುಯಾಯಿಗಳು ಒಬ್ಬ ಸುಳ್ಳುಗಾರನನ್ನು ನಂಬುತ್ತಾರೆಂದು ಭಾವಿಸುವುದಾದರೆ ಇದರಿಂದ ಅನೇಕ ಕಲಹಗಳಿಗೆ ಅಸ್ತಿಭಾರ ಹಾಕಲ್ಪಡುವುದು. ಅಂತಹ ಜನರು ಪ್ರವಾದಿನಿಂದೆಯ ಅಪರಾಧ ಮಾಡುತ್ತಾರೆ. ಅವರು ಪ್ರವಾದಿಯ ಬಗ್ಗೆ ಅತ್ಯಂತ ತಪ್ಪು ಮಾತುಗಳನ್ನು ಆಡುತ್ತಾರೆ ಮತ್ತು ಬೈಗಳನ್ನು ಬಳಸಿ ಸೌಹಾರ್ದವನ್ನೂ ಸಾರ್ವಜನಿಕ ಶಾಂತಿಯನ್ನೂ ಕೆಡಿಸುತ್ತಾರೆ. ಆದರೆ ಇಂತಹ ಜನರ ಭಾವನೆಗಳು ತಪ್ಪಾಗಿರುತ್ತವೆ. ಅವರು ತಮ್ಮ ನಿಂದಾತ್ಮಕ ಮಾತುಗಳ ಕಾರಣ ದೇವ ದೃಷ್ಟಿಯಲ್ಲಿ ದೌರ್ಜನ್ಯಗಾರರಾಗುತ್ತಾರೆ. ದಯಾಮಯನೂ ಕೃಪಾಳುವೂ ಆಗಿರುವ ದೇವನು ಒಬ್ಬ ಸುಳ್ಳುಗಾರನಿಗೆ ಅನರ್ಹವಾದ ಅಭಿವೃದ್ಧಿ ನೀಡಲು ಮತ್ತು ಅವನ ಧರ್ಮ ಬೇರೂರಿ ಜನರನ್ನು ವಂಚಿಸಲು ಖಂಡಿತವಾಗಿಯೂ ಇಷ್ಟಪಡಲಾರನು. ಒಬ್ಬನು ಸುಳ್ಳುಗಾರನಾಗಿದ್ದರೂ

ಲೋಕದ ದೃಷ್ಟಿಯಲ್ಲಿ ಅವನು ಸತ್ಯ ಪ್ರವಾದಿಗಳಿಗೆ ಸಮಾನವಾದ ಸ್ಥಾನವನ್ನು ಜನರ ದೃಷ್ಟಿಯಲ್ಲಿ ಗಳಿಸಲು ಖಂಡಿತವಾಗಿಯೂ ಬಿಡಲಾರನು.

"ಲೋಕಕ್ಕೆ ಆಗಮಿಸಿದ ಎಲ್ಲ ಪ್ರವಾದಿಗಳನ್ನು ಸತ್ಯವಂತರೆಂದು ಗಣಿಸಬೇಕು ಎನ್ನುವುದು ಅತ್ಯಂತ ಪ್ರಿಯವೂ ಶಾಂತಿದಾಯಕ, ಸೌಹಾರ್ದದ ಅಸ್ತಿಭಾರ ಹಾಕುವ ಮತ್ತು ಉತ್ತಮ ಸ್ವಭಾವಗುಣಗಳನ್ನು ಬೆಂಬಲಿಸುವ ಸಿದ್ಧಾಂತವಾಗಿದೆ. ಹಿಂದೂಸ್ಥಾನದಲ್ಲಿ, ಪರ್ಶಿಯಾದಲ್ಲಿ, ಚೀನದಲ್ಲಿ ಅಥವಾ ಬೇರೆ ಯಾವುದೇ ದೇಶದಲ್ಲಿ ಪ್ರವಾದಿಗಳು ಆಗಮಿಸಿದಾಗ ಕೋಟಿಗಟ್ಟಲೆ ಜನರ ಹೃದಯಗಳಲ್ಲಿ ಅವರ ಬಗ್ಗೆ ಗೌರವವನ್ನು ದೇವನು ಜನರ ಹೃದಯಗಳಲ್ಲಿ ಸ್ಥಾಪಿಸಿದನು. ಅವರ ಧರ್ಮಗಳ ಬೇರುಗಳನ್ನು ಬಲಪಡಿಸಿದನು ಮತ್ತು ಹಲವು ಶತಮಾನಗಳಿಂದ ಆ ಧರ್ಮಗಳು ಅನುಷ್ಠಿಸಲ್ಪಡುತ್ತಿದ್ದುವು. ಇದೇ ಸಿದ್ಧಾಂತವನ್ನು ಪವಿತ್ರ ಖುರ್‌ಆನ್ ನಮಗೆ ಕಲಿಸಿದೆ. ಈ ಸಿದ್ಧಾಂತಕ್ಕೆ ಅನುಸಾರವಾಗಿ ಮೇಲೆ ವಿವರಿಸಿದ ಗುಣ ವಿಶೇಷಗಳನ್ನು ಹೊಂದಿದ ಪ್ರವಾದಿಗಳನ್ನು ನಾವು ಗೌರವದ ದೃಷ್ಟಿಯಿಂದ ಕಾಣುತ್ತಿದ್ದೇವೆ. ಅವರು ಹಿಂದೂ ಧರ್ಮದ ನಾಯಕರಾಗಿದ್ದರೂ ಅಥವಾ ಫಾರ್ಸಿಗಳ ಧರ್ಮದ ನಾಯಕರಾಗಿದ್ದರೂ ಅಥವಾ ಚೀನೀಯರ ಧರ್ಮದ ನಾಯಕರಾಗಿದ್ದರೂ ಅಥವಾ ಯಹೂದಿ ಧರ್ಮದ ಅಥವಾ ಕ್ರೈಸ್ತ ಧರ್ಮದ ನಾಯಕರಾಗಿದ್ದರೂ ನಾವು ಗೌರವ ಭಾವನೆಯಿಂದ ಕಾಣುತ್ತೇವೆ. ಆದರೆ ದುಃಖಕರವಾದುದೇನೆಂದರೆ ನಮ್ಮ ವಿರೋಧಿಗಳು ನಮ್ಮೊಂದಿಗೆ ಈ ರೀತಿ ವರ್ತಿಸುವುದಿಲ್ಲ. ದೇವನ ಪವಿತ್ರ ಮತ್ತು ಬದಲಾವಣೆ ಹೊಂದಲಾರದ ನಿಯಮ ಅವರಿಗೆ ನೆನಪಿಲ್ಲ. ಅವನು ಸತ್ಯ ಪ್ರವಾದಿಗೆ ನೀಡುವಂತಹ ಅನುಗ್ರಹ ಮತ್ತು ಗೌರವ ಸುಳ್ಳುವಾದಿಗೆ ನೀಡುವುದಿಲ್ಲ. ಸುಳ್ಳು ಪ್ರವಾದಿಯ ಧರ್ಮ ಬೇರೂರುವುದಿಲ್ಲ ಮತ್ತು ದೀರ್ಘಕಾಲ ಬಾಳುವುದೂ ಇಲ್ಲ. ಸತ್ಯ ಪ್ರವಾದಿಯ ಧರ್ಮ ಬೇರೂರುತ್ತದೆ ಮತ್ತು ಆಯುಸ್ಸು ಗಳಿಸುತ್ತದೆ. ವಿವಿಧ ಜನಾಂಗಗಳ ಪ್ರವಾದಿಗಳನ್ನು ಸುಳ್ಳುವಾದಿಗಳೆಂದು ನಿಂದಿಸುವವರು ಯಾವಾಗಲೂ ಸೌಹಾರ್ದ ಮತ್ತು ಶಾಂತಿ ಪಾಲನೆಯ ಶತ್ರುಗಳಾಗಿರುತ್ತಾರೆ. ಜನಾಂಗಗಳ ಹಿರಿಯರನ್ನು ಬೈಯ್ಯುವುದಕ್ಕಿಂತ ಕಲಹಕಾರಕವಾದುದು ಬೇರೊಂದಿಲ್ಲ. ತನ್ನ ಧರ್ಮ ಸ್ಥಾಪಕರನ್ನು ನಿಂದಿಸುವುದಕ್ಕಿಂತ ಸಾಯುವುದೇ ಉತ್ತಮವೆಂದು ಮನುಷ್ಯರು ಕೆಲವು ಸಾರಿ ಭಾವಿಸುತ್ತಾರೆ. ನಮಗೆ ಯಾವುದಾದರೂ ಧರ್ಮದ ಉಪದೇಶಗಳ ಬಗ್ಗೆ ಆಕ್ಷೇಪವಿದ್ದರೆ ಆ ಧರ್ಮದ ಪ್ರವಾದಿಯ ಗೌರವಕ್ಕೆ ಕುಂದುಂಟಾಗುವಂತೆ ವರ್ತಿಸಬಾರದು ಮತ್ತು ಕೆಟ್ಟ ಶಬ್ದಗಳನ್ನು ಬಳಸಿ ದೂಷಿಸಬಾರದು. ಆ ಧರ್ಮದ ಇಂದಿನ

ಕಾಲದ ನಡತೆಯ ಬಗ್ಗೆ ಮಾತ್ರ ಆಕ್ಷೇಪಿಸಬಹುದಾಗಿದೆ. ಒಬ್ಬ ಪ್ರವಾದಿ ಕೋಟಿಗಟ್ಟಲೆ ಜನರ ಗೌರವಕ್ಕೆ ಪಾತ್ರನಾದರೆ ಮತ್ತು ನೂರಾರು ವರ್ಷಗಳಿಂದ ಆತನನ್ನು ಜನರು ಅಂಗೀಕರಿಸುತ್ತಾ ಇರುವರಾದರೆ ಆತನ ಸತ್ಯತೆಗೆ ಮತ್ತು ಆತನು ದೇವನಿಂದ ಕಳುಹಿಸಲ್ಪಟ್ಟವನು ಎನ್ನುವುದಕ್ಕೆ ಇದೇ ಸಾಕ್ಷ್ಯಾಧಾರವಾಗಿದೆ. ದೇವನಿಂದ ಅಂಗೀಕರಿಸಲ್ಪಟ್ಟಿಲ್ಲವಾದರೆ ಆತನು ಇಂತಹ ಗೌರವವನ್ನು ಗಳಿಸುತ್ತಿರಲಿಲ್ಲ. ಸುಳ್ಳುವಾದಿಗೆ ಗೌರವ ನೀಡುವುದು, ಲೋಕದಲ್ಲಿ ಮತ್ತು ಕೋಟಿಗಟ್ಟಲೆ ಅನುಯಾಯಿಗಳಲ್ಲಿ ಆತನ ಧರ್ಮವನ್ನು ಹರಡುವುದು ಮತ್ತು ದೀರ್ಘ ಕಾಲದ ತನಕ ಈ ಸುಳ್ಳು ಧರ್ಮವನ್ನು ರಕ್ಷಿಸುವುದು ದೇವನ ನಡೆವಳಿಕೆ ಕ್ರಮವಲ್ಲ. ಆದುದರಿಂದ ಯಾವ ಧರ್ಮ ಲೋಕದಲ್ಲಿ ಹರಡಿದೆಯೋ ಮತ್ತು ಸ್ಥಾಪಿತವಾಗಿದೆಯೋ ಗೌರವ ಮತ್ತು ಆಯುಸ್ಸನ್ನು ಗಳಿಸಿದೆಯೋ ಅಂತಹ ಧರ್ಮ ತನ್ನ ಮೂಲ ರೂಪದಲ್ಲಿ ಖಂಡಿತವಾಗಿಯೂ ಸುಳ್ಳಾಗಿರಲು ಸಾಧ್ಯವಿಲ್ಲ. ಒಂದು ಧರ್ಮದ ಉಪದೇಶಗಳು ಆಕ್ಷೇಪಾರ್ಹವಾಗಿ ಕಾಣಿಸುವುದಾದರೆ, (ಒಂದು ಧರ್ಮ ಈಗಿನ ಕಾಲದಲ್ಲಿ ಆಕ್ಷೇಪಾರ್ಹವಾಗಿ ಕಾಣಿಸುವುದಾದರೆ ಅದಕ್ಕೆ ಮೂರು ಕಾರಣಗಳಿವೆ.) ಒಂದನೆಯದಾಗಿ, ಆ ಧರ್ಮದ ಪ್ರವಾದಿ ಉಪದೇಶಿಸಿದ ತತ್ವಗಳ ಮೇಲೆ ಹಸ್ತಕ್ಷೇಪ ನಡೆಸಲಾಗಿದೆ. (ಎಂದರೆ ಪ್ರವಾದಿಯ ಉಪದೇಶಗಳನ್ನು ಬದಲಾಯಿಸಲಾಗಿದೆ.) ಎರಡನೆಯದಾಗಿ, ಪ್ರವಾದಿಯ ಉಪದೇಶಗಳನ್ನು ವ್ಯಾಖ್ಯಾನಿಸುವಾಗ ತಪ್ಪು ಮಾಡಲಾಗಿದೆ. (ಎಂದರೆ ತಪ್ಪಾದ ರೀತಿಯಲ್ಲಿ ವ್ಯಾಖ್ಯಾನಿಸಲಾಗಿದೆ.) ಮೂರನೆಯದಾಗಿ, ಆಕ್ಷೇಪ ಮಾಡುವವರೇ ತಪ್ಪುಗಾರರಾಗಿರಬಹುದು. (ಎಂದರೆ ಒಂದು ವಿಷಯ ಅರ್ಥವಾಗದ ಕಾರಣ ಆಕ್ಷೇಪ ಮಾಡುತ್ತಾರೆ. ಇದಕ್ಕೆ ಒಂದು ಉದಾಹರಣೆ ಹಝ್ರತ್ ಮುಹಮ್ಮದ್ ಪೈಗಂಬರರ ﷺ ವಿರುದ್ಧ ಮಾಡುವ ಆಕ್ಷೇಪಗಳಾಗಿವೆ. ಚರಿತ್ರೆ ಓದದೆ, ವಿವಿಧ ಘಟನೆಗಳ ಬಗ್ಗೆ ತಿಳುವಳಿಕೆ ಇಲ್ಲದೆ, ಪವಿತ್ರ ಖುರ್‌ಆನನ್ನು ಅರ್ಥ ಮಾಡಿಕೊಳ್ಳದೆ ಆಕ್ಷೇಪಿಸುತ್ತಾರೆ.) ಕೆಲವು ಪಾದರಿಗಳು ತಮ್ಮ ಅಲ್ಪಜ್ಞಾನದ ಕಾರಣದಿಂದ ಯಹೂದಿಯರ ತೌರಾತ್‌ನಲ್ಲಿ ಸರಿಯಾದ ಮತ್ತು ದೇವನಿಂದ ನಿರ್ದೇಶಿತವಾದ ಉಪದೇಶಗಳೆಂದು ಸಾಬೀತಾದ ಉಪದೇಶಗಳನ್ನು ಪವಿತ್ರ ಖುರ್‌ಆನ್‌ನಲ್ಲಿ ಕಾಣುವಾಗ ಅವುಗಳ ಬಗ್ಗೆ ಆಕ್ಷೇಪಿಸುತ್ತಾರೆ. ಇಂತಹ ಆಕ್ಷೇಪಗಳು ಆಕ್ಷೇಪಮಾಡುವವರ ತಪ್ಪು ಗ್ರಹಿಕೆಯಿಂದ ಅಥವಾ ಅವರು ಯೋಚಿಸದೆ ತ್ವರಿತವಾಗಿ ಆಕ್ಷೇಪಿಸಿದುದರ ಕಾರಣದಿಂದಾಗಿರುತ್ತದೆ.

“ಒಟ್ಟಿನಲ್ಲಿ, ಯಾವ ಪ್ರವಾದಿಗಳ ಬಗ್ಗೆ ಕೋಟಿಗಟ್ಟಲೆ ಜನರು ನೂರಾರು ವರ್ಷಗಳಿಂದ ಸತ್ಯವಂತರೆಂದು ಗಣಿಸುತ್ತಾರೋ ಮತ್ತು ದೇವಸಹಾಯವು ಪುರಾತನ ಕಾಲದಿಂದ ಅವರ ಜೊತೆಗೆ ಇರುವುದಾಗಿ ಕಾಣಿಸುತ್ತಿದೆಯೋ ಅಂತಹ ಪ್ರವಾದಿಗಳನ್ನು ಖಂಡಿತವಾಗಿಯೂ ಸುಳ್ಳುವಾದಿಗಳೆಂದು ಹೇಳಲಾರೆವು. ಲೋಕದ ಒಳಿತು, ಶಾಂತಿ, ಸೌಹಾರ್ದ ಮತ್ತು ದೇವಭಯ ಇದೇ ಸಿದ್ಧಾಂತದಲ್ಲಿ ಅಡಕವಾಗಿದೆ. ಸತ್ಯಾನ್ವೇಷಿಯಾದ ಮನುಷ್ಯನು ಏಶಿಯಾದವನಾದರೂ ಯುರೋಪಿಯನ್ ಆದರೂ ನಮ್ಮ ಈ ಸಿದ್ಧಾಂತವನ್ನು ಇಷ್ಟಪಡುವನು ಮತ್ತು ಪಶ್ಚಾತ್ತಾಪಗೊಂಡು ಹೇಳುವನು: ‘ಹಾ, ನಮ್ಮ ಸಿದ್ಧಾಂತ ಹೀಗೆ ಏಕೆ ಆಗಲಿಲ್ಲ?’

“ಹಿಂದುಸ್ಥಾನ ಮತ್ತು ಇಂಗ್ಲೆಂಡ್‌ನ ಗೌರವಾನ್ವಿತ ಮಹಾರಾಣಿಯವರ ಸಮಕ್ಷಮ ಈ ಸಿದ್ಧಾಂತವನ್ನು ಇರಿಸುತ್ತೇನೆ. ಲೋಕದಲ್ಲಿ ಶಾಂತಿಯನ್ನು ಹರಡಲು ಸಾಧ್ಯವಾಗುವುದು ಈ ಒಂದು ಸಿದ್ಧಾಂತದ ಮೂಲಕವಾಗಿದೆ. ಇಂತಹ ಪ್ರಿಯ ಮತ್ತು ಆಕರ್ಷಕ ಸಿದ್ಧಾಂತ ಇಸ್ಲಾಮ್‌ನಲ್ಲಿದೆ ಎಂದು ಅದು ಅಭಿಮಾನಿಸಬಹುದಾಗಿದೆ. ದೇವಾನುಗ್ರಹದಿಂದ ಲೋಕದ ಜನರನ್ನು ತನ್ನ ಅನುಯಾಯಿಗಳನ್ನಾಗಿ ಮಾಡಿದಂತಹ ಮತ್ತು ನೂರಾರು ವರ್ಷಗಳಿಂದ ಅರಸರ ಕೊರಳುಗಳು ಯಾರ ಮುಂದೆ ಬಾಗುತ್ತಾ ಇವೆಯೋ ಅಂತಹ ಮಹಾನುಭಾವರನ್ನು ಅಪಮಾನಿಸುವುದು ನಮಗೆ ಯೋಗ್ಯವಾಗಿದೆಯೋ? ಸುಳ್ಳುಗಾರರಿಗೆ ಸತ್ಯವಂತರ ವೈಭವವನ್ನು ನೀಡಿ ಸತ್ಯವಾದಿಗಳನ್ನು ನಂಬುವ ಹಾಗೆ ಕೋಟಿಗಟ್ಟಲೆ ಜನರು ಅವರನ್ನು ನಂಬುವಂತೆ ಮಾಡುವನೆಂದೂ ಅವರ ಧರ್ಮಕ್ಕೆ ಬೆಂಬಲ ನೀಡಿ ದೃಷ್ಟಾಂತಗಳನ್ನು ಪ್ರಕಟಿಸಿ ಲೋಕದ ಜನರಿಗೆ ಮೋಸ ಮಾಡಲು ಬಯಸುತ್ತಾನೆಂದೂ ದೇವನ ಬಗ್ಗೆ ಕೆಟ್ಟ ಸಂಶಯವನ್ನು ಹೊಂದಲು ಸಾಧ್ಯವೇ? ದೇವನೇ ನಮಗೆ ಮೋಸಮಾಡಲು ಬಯಸುವನಾದರೆ ನಾವು ಸರಿ ಯಾವುದು, ತಪ್ಪು ಯಾವುದು ಎನ್ನುವುದರ ಬಗ್ಗೆ ವ್ಯತ್ಯಾಸ ಮಾಡುವುದಾದರೂ ಹೇಗೆ!

“ಒಂದು ಆವಶ್ಯಕವಾದ ವಿಷಯವೇನೆಂದರೆ, ಸುಳ್ಳು ಪ್ರವಾದಿಯ ವೈಭವ ಮತ್ತು ಅಂಗೀಕಾರವು ಸತ್ಯ ಪ್ರವಾದಿಯ ವೈಭವ ಮತ್ತು ಅಂಗೀಕಾರದ ಹಾಗೆ ಹಬ್ಬಲಾರದು. ಸುಳ್ಳುವಾದಿಗಳ ಯೋಜನೆಗಳಲ್ಲಿ ಸತ್ಯ ಪ್ರವಾದಿಯ ಕಾರ್ಯನಿರ್ವಹಣೆಯಲ್ಲಿ ಇರುವಂತಹ ಹೊಳಪು ಇರಲಾರದು. ಆದುದರಿಂದ ಸತ್ಯವಾದಿಯ ಪ್ರಥಮ ಚಿಹ್ನೆ ಏನೆಂದರೆ, ಸತ್ಯವಾದಿಗೆ ದೇವನ ಸ್ಥಿರವಾದ ಬೆಂಬಲಗಳ ಶೃಂಖಲೆ ಅವನ ಜೊತೆಗಿರುತ್ತದೆ. ಅವನು ಧರ್ಮದ ಗಿಡವನ್ನು ಕೋಟಿಗಟ್ಟಲೆ ಜನರ ಹೃದಯಗಳಲ್ಲಿ ನೆಡುತ್ತಾನೆ ಮತ್ತು ಧರ್ಮಕ್ಕೆ

ಆಯುಸ್ಸನ್ನು ನೀಡುತ್ತಾನೆ. ಆದುದರಿಂದ ಯಾವ ಪ್ರವಾದಿಯ ಧರ್ಮದಲ್ಲಿ ಮೇಲೆ ವಿವರಿಸಿದ ಚಿಹ್ನೆಗಳು ಕಾಣುತ್ತವೆಯೋ ನಾವು ನಮ್ಮ ಮೃತ್ಯುವನ್ನೂ ಪರಲೋಕದ ವಿಚಾರಣೆಯ ದಿನವನ್ನೂ ನೆನಪಿಸಿಕೊಂಡು ಅಂತಹ ಧಾರ್ಮಿಕ ನಾಯಕರನ್ನು ಅಪಮಾನಿಸಬಾರದು. ಅಂತಹವರನ್ನು ಸತ್ಯವಾಗಿ ಗೌರವಿಸಿ ಸತ್ಯವಾಗಿ ಪ್ರೀತಿಸಬೇಕು. ಇದು ದೇವನು ನಮಗೆ ಕಲಿಸಿದ ಪ್ರಥಮ ಸಿದ್ಧಾಂತವಾಗಿದೆ. ಅದರ ಮೂಲಕ ನಾವು ಸದ್ಗುಣಗಳಲ್ಲಿ ಉನ್ನತಿಯನ್ನು ಗಳಿಸುವವರಾಗುವೆವು."

(ತುಹ್‌ಫ ಖೈಸರಿಯ್ಯ, ರೂಹಾನೀ ಖಝಾಇನ್– ಸಂಪುಟ 14

ಪುಟ 258 – 262)

ಹಝ್ರತ್ ವಾಗ್ದತ್ತ ಮಸೀಹ್(ಅ) ಹೀಗೆ ಸಹ ಹೇಳಿರುವರು: "ವಿವಿಧ ಧರ್ಮಗಳಿಗೆ ಸೇರಿದವರು ತಮ್ಮ ಧರ್ಮಗಳ ಒಳಿತುಗಳನ್ನು ವಿವರಿಸುವ ಸರ್ವಧರ್ಮ ಸಮ್ಮೇಳನಗಳನ್ನು ಜರಗಿಸಬೇಕು."

(ತುಹ್‌ಫ ಖೈಸರಿಯ್ಯದಿಂದ ಸಂಕ್ಷಿಪ್ತವಾಗಿ ಉಲ್ಲೇಖಿಸಲ್ಪಟ್ಟದ್ದು. ರೂಹಾನೀ ಖಝಾಇನ್– ಸಂಪುಟ 12 ಪುಟ 279)

ಈಗಿನ ಕಾಲಘಟ್ಟವನ್ನು ನೋಡುವುದಾದರೆ, ಜನರಿಂದ ಅನುಷ್ಠಿಸಲ್ಪಡುವ ಧರ್ಮಗಳಲ್ಲಿ ಇಸ್ಲಾಮ್ ಪ್ರಥಮ ಸ್ಥಾನದಲ್ಲಿದೆ. ಲೋಕದಲ್ಲಿ ಈ ಧರ್ಮವನ್ನು ಅವಲಂಬಿಸುವವರ ಸಂಖ್ಯೆಯನ್ನು ನೋಡುವುದಾದರೆ, ಇಸ್ಲಾಮ್ ದ್ವಿತೀಯ ಸ್ಥಾನದಲ್ಲಿದೆ. ಆದುದರಿಂದ ಅನ್ಯ ಧರ್ಮಗಳಿಗೆ ಸೇರಿದವರು ಮುಸ್ಲಿಮರನ್ನು ಗೌರವಿಸಬೇಕು. ಹಝ್ರತ್ ಮುಹಮ್ಮದ್ ಪೈಗಂಬರರನ್ನು ﷺ ಅವರು ಗೌರವಿಸಬೇಕು. ಹಾಗೆ ಮಾಡದಿದ್ದರೆ ಲೋಕದಲ್ಲಿ ಕಲಹಗಳೂ ಅಶಾಂತಿಯೂ ತಲೆದೋರುವುವು. ನಾವು ಲೋಕದ ಧರ್ಮಗಳನ್ನು ಗೌರವದಿಂದ ಕಾಣುತ್ತಿರುವುದು, ಅವುಗಳ ಮಹಾತ್ಮರನ್ನು ದೇವನಿಂದ ಕಳುಹಿಸಲ್ಪಟ್ಟವರೆಂದು ಗಣಿಸುವುದು ಪವಿತ್ರ ಖುರ್‌ಆನಿನ ಸುಂದರ ಉಪದೇಶಗಳ ಕಾರಣದಿಂದ ಮತ್ತು ಹಝ್ರತ್ ಮುಹಮ್ಮದ್ ಪೈಗಂಬರರು ﷺ ನಮಗೆ ಕಲಿಸಿದ ಕಾರಣದಿಂದಲೂ ಆಗಿದೆ. ಇಸ್ಲಾಮಿನ ಶತ್ರುಗಳು ಹಝ್ರತ್ ಮುಹಮ್ಮದ್ ಪೈಗಂಬರರ ﷺ ಬಗ್ಗೆ ಅನುಚಿತ ಪದಗಳನ್ನು ಬಳಸುತ್ತಿದ್ದರೂ ನೀಚ ವ್ಯಂಗ್ಯ ಚಿತ್ರಗಳನ್ನು ರಚಿಸಿದರೂ ನಾವು ಯಾವುದೇ ಧರ್ಮದ ಪ್ರವಾದಿಯನ್ನಾಗಲೀ ಮಹಾಪುರುಷರನ್ನಾಗಲೀ ಕೆಟ್ಟ ಶಬ್ದಗಳನ್ನು ಬಳಸಿ ನಿಂದಿಸಿ ಶತ್ರುಗಳಿಗೆ

ಉತ್ತರ ನೀಡುವುದಿಲ್ಲ. ಹೀಗಿದ್ದರೂ ಮುಸ್ಲಿಮರ ಮೇಲೆ ಶಾಂತಿಭಂಗ ಮಾಡುವವರೆಂದು ಆರೋಪಿಸಲಾಗುತ್ತಿದೆ. ಇಸ್ಲಾಮಿನ ಶತ್ರುಗಳು ಶಾಂತಿ ಕೆಡಿಸುವ ಕೆಲಸ ಮೊದಲು ಮಾಡುತ್ತಾರೆ. ಅವರು ಮುಸ್ಲಿಮರ ಭಾವನೆಗಳನ್ನು ಉದ್ರೇಕಿಸಲು ಪ್ರಯತ್ನಿಸುತ್ತಾರೆ. ಆದರೆ ಮುಸ್ಲಿಮರ ಭಾವನೆಗಳು ರೊಚ್ಚಿಗೆಬ್ಬಿಸಲ್ಪಟ್ಟರೆ ಶತ್ರುಗಳು ಹೇಳುತ್ತಾರೆ: ಮುಸ್ಲಿಮರು ಭೀಕರವಾದಿಗಳಾಗಿದ್ದಾರೆ. ಅವರ ವಿರುದ್ಧ ಎಲ್ಲ ರೀತಿಯ ಕ್ರಮಗಳನ್ನು ಕೈಗೊಳ್ಳಿರಿ.

ಹಝ್ರತ್ ವಾಗ್ದತ್ತ ಮಸೀಹರ(ಅ) ಸಂದೇಶವನ್ನು ವಿಸ್ತೃತವಾಗಿ ಪ್ರಕಟಿಸಿರಿ. ನೈಜ ಇಸ್ಲಾಮ್ ತತ್ವಗಳೇನೆಂದು ಲೋಕದ ಜನರು ಅರಿತುಕೊಳ್ಳಲಿ. ಹಝ್ರತ್ ಮುಹಮ್ಮದ್ ಪೈಗಂಬರರಿಗೆ ﷺ ನಮ್ಮ ಮತ್ತು ನಿಜವಾದ ಮುಸ್ಲಿಮರ ಹೃದಯಗಳಲ್ಲಿ ಎಂತಹ ಉನ್ನತ ಸ್ಥಾನವಿದೆ ಎಂದು ಲೌಕಿಕರಿಗೆ ತಿಳಿಯದು. ಹಝ್ರತ್ ಪೈಗಂಬರರ ﷺ ನಡೆವಳಿಕೆಗಳು ಎಷ್ಟು ಸುಂದರವಾಗಿವೆ ಮತ್ತು ಅವುಗಳಲ್ಲಿ ಎಷ್ಟು ಸೌಂದರ್ಯವಿದೆ ಎಂದು ತಿಳಿಯದು. ಒಬ್ಬ ನೈಜ ಮುಸ್ಲಿಮನಿಗೆ ಹಝ್ರತ್ ಪೈಗಂಬರರ ﷺ ಬಗ್ಗೆ ಎಷ್ಟು ಪ್ರೇಮವಿದೆ ಎಂದು ಈ ಜನರಿಗೆ ಅಂದಾಜು ಮಾಡಲು ಸಾಧ್ಯವಾಗದು.

ಹದಿನಾಲ್ಕು ನೂರು ವರ್ಷಗಳ ಹಿಂದೆ ಹಝ್ರತ್ ಮುಹಮ್ಮದ್ ಪೈಗಂಬರರ ﷺ ಬಗ್ಗೆ ತನ್ನ ಪ್ರೀತಿ ತೋರಿಸುತ್ತಾ ಹಸ್ಸಾನ್ ಬಿನ್ ಸಾಬಿತ್ ಹೀಗೆ ಹಾಡಿದರು:

**ಕುನ್‌ತಸ್ಸವಾದ ಲಿನಾಝಿರಿ ಫಅಮಿಯ ಅಲೈಕನ್ನಾಝಿರು**

**ಮನ್‌ಶಾಅ ಬಅ್‌ದಕ ಫಲ್‌ಯಮುತ್ ಫಅಲೈಕ ಕುನ್‌ತು ಉಹಾಧಿರು.**

"ಓ ಮುಹಮ್ಮದ್ ಪೈಗಂಬರ್, ﷺ ನೀವು ನನ್ನ ಕಣ್ಮಣಿ ಆಗಿದ್ದಿರಿ. ಇಂದು ನೀವು ಮೃತರಾದುದರಿಂದ ನನ್ನ ಕಣ್ಣುಗಳು ಕುರುಡಾದವು. ನೀವು ಮೃತರಾದ ನಂತರ ಬೇರೆ ಯಾರು ಮೃತರಾದರೂ ನನಗೆ ಪರಿವೆ ಇಲ್ಲ. ನಾನು ಹೆದರುತ್ತಾ ಇದ್ದುದು ನಿಮ್ಮ ಮೃತ್ಯುವಿನ ಬಗ್ಗೆ ಮಾತ್ರವಾಗಿತ್ತು."

ಈ ಕಾಲಘಟ್ಟದಲ್ಲಿ ಹಝ್ರತ್ ವಾಗ್ದತ್ತ ಮಸೀಹ್(ಅ) ಹಝ್ರತ್ ಮುಹಮ್ಮದ್ ಪೈಗಂಬರರ ﷺ ಬಗ್ಗೆ ಗಾಢವಾದ ಪ್ರೇಮವನ್ನು ನಮ್ಮಲ್ಲಿ ಉಂಟುಮಾಡಿದ್ದಾರೆ. ನಮ್ಮ ಹೃದಯಗಳಲ್ಲಿ ಪ್ರೇಮದ ದೀಪ ಬೆಳಗಿಸಿದ್ದಾರೆ.

ಹಝ್ರತ್ ವಾಗ್ದತ್ತ ಮಸೀಹ್[ಅ] ಹಝ್ರತ್ ಮುಹಮ್ಮದ್ ಪೈಗಂಬರರ ﷺ ಬಗ್ಗೆ ತನಗಿರುವ ಪ್ರೇಮವನ್ನು ದೀರ್ಘ ಅರಬಿ ಪದ್ಯವಾದ ಖಸೀದದಲ್ಲಿ ಚಿತ್ರಿಸಿದ್ದಾರೆ. ಅವರ ಕೆಲವು ಪದ್ಯಗಳು ಹೀಗಿವೆ:

**ಖೌಮುನ್ ರಔಕ ವ ಉಮ್ಮತುನ್ ಖದ್ ಉಖ್‌ಬಿರತ್**

**ಮಿನ್ ಧ್ವಾಲಿಕಲ್ ಬದ್‌ರಿಲ್ಲಧೀ ಅಸ್‌ಬಾನೀ.**

ಒಂದು ಸಮುದಾಯ ನಿಮ್ಮನ್ನು ಕಂಡು ಅನುಗ್ರಹ ಗಳಿಸಿತು. ನನ್ನನ್ನು ಆಕರ್ಷಿಸಿದ ಆ ಪೂರ್ಣ ಚಂದ್ರನ ಕುರಿತು ಇನ್ನೊಂದು ಸಮುದಾಯಕ್ಕೆ ಮುಂಚಿತವಾಗಿ ಸಮಾಚಾರ ನೀಡಲಾಗಿತ್ತು.

**ಯಬ್‌ಕೂನ ಮಿನ್ ಧ್ಕಿರ್ಲ್ ಜಮಾಲಿ ಸಬಾಬತನ್**

**ವ ತಅಲ್ಲುಮನ್ ಮಿನ್ ಲೌಅತಿಲ್ ಹಿಜ್‌ರಾನೀ.**

ತಮ್ಮ ಸೌಂದರ್ಯವನ್ನು ಸ್ಮರಿಸುತ್ತಾ ಪ್ರೇಮಭರಿತರಾಗಿ ಅವರು ಅಳುತ್ತಿದ್ದಾರೆ. ವಿರಹವೇದನೆಯ ದುಃಖಾತಿರೇಕದಿಂದ ಅವರು ಕಣ್ಣೀರು ಸುರಿಸುತ್ತಿದ್ದಾರೆ.

**ವ ಅರಲ್ ಖುಲೂಬ ಲದಲ್ ಹನಾಜಿರಿ ಕುರ್‌ಬತನ್**

**ವ ಅರಲ್ ಗ್ಹುರೂಬ ತುಸೀಲುಹಲ್ ಐನಾನೀ.**

ದುಃಖಾತಿರೇಕದಿಂದ ಹೃದಯಗಳು ಗಂಟಲುಗಳ ತನಕ ಬಂದಿರುವುದನ್ನು ನಾನು ಕಾಣುತ್ತಿದ್ದೇನೆ. ಕಣ್ಣುಗಳು ಸುರಿಸುತ್ತಿರುವ ಅಶ್ರುಧಾರೆಗಳನ್ನೂ ನಾನು ಕಾಣುತ್ತಿದ್ದೇನೆ.

(ಈ ಅರಬಿ ಖಸೀದವನ್ನು ಅನೇಕ ಜನರು ಮತ್ತು ಮಕ್ಕಳು ಸಹ ಬಾಯಿಪಾಠ ಮಾಡಿದ್ದಾರೆ. ಈ ದೀರ್ಘ ಖಸೀದದ ಅಂತಿಮ ಚರಣ ಹೀಗಿದೆ:)

**ಜಿಸ್‌ಮೀ ಯತೀರು ಇಲೈಕ ಮಿನ್ ಶೌಖಿನ್ ಅಲಾ**

**ಯಾ ಲೈತ ಕಾನತ್ ಖುವ್ವತುತ್ತಯರಾನೀ.**

ನನ್ನ ಶರೀರ ತಮ್ಮ ಕಡೆಗೆ ಹಾರಿ ತಲಪಲು ಅತ್ಯಂತ ಆವೇಶಭರಿತವಾಗಿದೆ. ನನಗೆ ಹಾರಲು ಸಾಮರ್ಥ್ಯವಿರುತ್ತಿದ್ದರೆ ಹಾ ಎಷ್ಟು ಚೆನ್ನಾಗಿತ್ತು!

(ಆಯಿನಃ ಕಮಾಲಾತೆ ಇಸ್ಲಾಮ್, ರೂಹಾನೀ ಖಝಾಇನ್ ಸಂಪುಟ 5 ಪುಟ 590–594)

ಹಝ್ರತ್ ಮುಹಮ್ಮದ್ ಪೈಗಂಬರರನ್ನು ﷺ ಪ್ರೀತಿಸಲು ಈ ಪಾಠ ನಮಗೆ ಕಲಿಸಲಾಗಿದೆ. ಆದರೆ ಲೌಕಿಕರು ಹೇಳುವುದು ವ್ಯಂಗ್ಯ

ಚಿತ್ರಗಳಿಂದ ಏನು ವ್ಯತ್ಯಾಸ ಆಗುತ್ತದೆ? ಕೇವಲ ಹಗುರ ಹಾಸ್ಯ ಮಾತ್ರವಲ್ಲವೇ ಮಾಡಿರುವುದು? ಮನುಷ್ಯರ ಸ್ವಭಾವಗುಣಗಳು ಇಷ್ಟು ಅಧಃಪತನ ಹೊಂದಿ ಸ್ವಭಾವ ಗುಣದ ಮಟ್ಟ ತಳ ಮಟ್ಟವನ್ನು ತಲಪಲು ತೊಡಗಿದರೆ ಲೋಕದ ಶಾಂತಿಯೂ ಕೆಟ್ಟು ಹೋಗುತ್ತದೆ. ನಾನು ಹೇಳಿದ ಹಾಗೆ ನಮ್ಮ ಕೆಲಸವೇನೆಂದರೆ, ಹೆಚ್ಚು ಹೆಚ್ಚು ಪ್ರಯತ್ನ ಮಾಡಿ ಹಝ್‌ರತ್ ಮುಹಮ್ಮದ್ ಪೈಗಂಬರರ ﷺ ಜೀವಿತದ ವಿವಿಧ ಪಾರ್ಶ್ವಗಳನ್ನು ಲೋಕದ ಮುಂದೆ ಇರಿಸಬೇಕು. ಇದರ ಬಗ್ಗೆ ಸಂಕ್ಷಿಪ್ತವಾಗಿದ್ದರೂ ಬಹಳ ಸಮಗ್ರವಾಗಿ ವಿವರಿಸಿದ ಗ್ರಂಥ ಇಂಗ್ಲಿಷ್ ತಫ್‌ಸೀರುಲ್ ಖುರ್‌ಆನಿಗೆ ಬರೆದ ದೀರ್ಘ ಮುನ್ನುಡಿಯಲ್ಲಿ ಅಡಕವಾದ "ಲೈಫ್ ಆಫ್ ಮುಹಮ್ಮದ್"ನಲ್ಲಿದೆ. ಅದನ್ನು ಪ್ರತಿಯೊಬ್ಬ ಅಹ್ಮದಿ ಓದಬೇಕು. ಅದರಲ್ಲಿ ಜೀವನ ಚರಿತ್ರೆಯ ಎಲ್ಲ ಪಾರ್ಶ್ವಗಳನ್ನು ವಿವರಿಸಲಾಗಿದೆ ಎಂದು ಹೇಳಬಹುದು ಅಥವಾ ಆವಶ್ಯಕ ಪಾರ್ಶ್ವಗಳನ್ನು ವಿವರಿಸಲಾಗಿದೆ. ಇದೇ ರೀತಿ ತಮ್ಮ ಅಭಿರುಚಿಗೆ ಅನುಸಾರವಾಗಿ ಮತ್ತು ವಿದ್ಯಾಭ್ಯಾಸ ಯೋಗ್ಯತೆಗೆ ಅನುಸಾರವಾಗಿ ಬೇರೆ ಜೀವನ ಚರಿತ್ರೆಗಳನ್ನು ಓದಬೇಕು. ವಿವಿಧ ವಿಧಾನಗಳಿಂದ, ವಿವಿಧ ಸಂಪರ್ಕಗಳ ಮೂಲಕ, ಲೇಖನಗಳ ಮೂಲಕ, ಚಿಕ್ಕ ಪುಸ್ತಕಗಳ ಮತ್ತು ಕರಪತ್ರಗಳ ಮೂಲಕ ಹಝ್‌ರತ್ ಮುಹಮ್ಮದ್ ಪೈಗಂಬರರ ﷺ ಸುಂದರ ಉಪದೇಶಗಳನ್ನು ಲೋಕದ ಮುಂದಿರಿಸಬೇಕು. ಈ ಮುಖ್ಯ ಕೆಲಸವನ್ನು ಈಡೇರಿಸಲು ಪ್ರತಿಯೊಬ್ಬ ಅಹ್ಮದಿಗೆ ಅಲ್ಲಾಹನು ಭಾಗ್ಯ ನೀಡಲಿ. ಲೋಕಕ್ಕೆ ಬುದ್ಧಿ ಲಭಿಸುವಂತಾಗಲಿ. ಇಂತಹ ಅವಿವೇಕಭರಿತ, ದೌರ್ಜನ್ಯಭರಿತ ಅಪಹಾಸ್ಯಮಾಡುವವರನ್ನು ಮತ್ತು ದ್ವೇಷದಿಂದ ವರ್ತಿಸುವವರನ್ನು ಲೋಕದ ಒಂದು ವಿಭಾಗದ ಜನರು ತಿರಸ್ಕರಿಸುವಂತೆ ಆಗಲಿ. ಹಾಗೆ ಲೋಕವು ಅಶಾಂತಿಯಿಂದ ರಕ್ಷಿಸಲ್ಪಡಲಿ ಮತ್ತು ಅಲ್ಲಾಹನ ಶಿಕ್ಷೆಯಿಂದಲೂ ರಕ್ಷಿಸಲ್ಪಡಲಿ. ಅಲ್ಲಾಹನು ಹೀಗೆಯೇ ಮಾಡಲಿ. (ಖುತ್‌ಬ 28–09–2012)

## ಅಹ್ಮದಿಯರ ಪ್ರತಿಕ್ರಿಯೆಯ ವಿಧಾನ

2006ರಲ್ಲಿ ಡೆನ್ಮಾರ್ಕ್‌ನಲ್ಲಿ, ಸರ್ವಲೋಕಗಳಿಗೆ ಅನುಗ್ರಹವಾಗಿರುವ ಹಝ್‌ರತ್ ಮುಹಮ್ಮದ್ ಪೈಗಂಬರರ ﷺ ವಿರುದ್ಧ ಅತ್ಯಂತ ಕೊಳಕು, ಅಪಮಾನಕರವಾದ ಮತ್ತು ಮುಸ್ಲಿಮರ ಭಾವನೆಗಳನ್ನು ರೊಚ್ಚಿಗೆಬ್ಬಿಸುವ

ವ್ಯಂಗ್ಯ ಚಿತ್ರಗಳು ಪ್ರಕಟಗೊಂಡಾಗ ಅಹ್ಮದಿಯಾ ಜಮಾಅತ್ ಇಮಾಮರಾದ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್, ಪಂಚಮ ಖಲೀಫರು ಅದನ್ನು ಖಂಡಿಸಿ ಶುಕ್ರವಾರಗಳಲ್ಲಿ ಖುತ್‌ಬಗಳನ್ನು ನೀಡಿದರು. ಆಗ ಮುಸ್ಲಿಮ್ ದೇಶಗಳಲ್ಲಿ ಪ್ರತಿಭಟನೆಗಳು ನಡೆದು ವಿಧ್ವಂಸಕ ಕೃತ್ಯಗಳು ನಡೆಯುತ್ತಿದ್ದುವು. ಅವರು ತಮ್ಮ ದೇಶಗಳಲ್ಲಿ ಬೆಂಕಿ ಹಚ್ಚಿ ತಮ್ಮದೇ ಸಂಪತ್ತನ್ನು ನಾಶಗೊಳಿಸುತ್ತಿದ್ದರು. ಆಗ ಅಹ್ಮದಿಯಾ ಜಮಾಅತಿನ ಇಮಾಮರು ತನ್ನ ಜಮಾಅತಿಗೆ ಮತ್ತು ವಿಶಿಷ್ಟವಾಗಿ ಮುಸ್ಲಿಮರಿಗೆ ಸರಿಯಾದ ಪ್ರತಿಭಟನೆಯ ವಿಧಾನಗಳನ್ನು ಒತ್ತಿ ಹೇಳುತ್ತಾ ಹೀಗೆ ಮಾರ್ಗದರ್ಶನ ನೀಡಿದರು:

"ನಾನು ಮೊದಲು ಹೇಳಿದ ಹಾಗೆ, ಪ್ರಾಯಶಃ, ಅಲ್ಲ ಖಂಡಿತವಾಗಿ ಪತ್ರಿಕೆಯ ಈ ಕೆಲಸದಿಂದ ಅತ್ಯಂತ ಹೆಚ್ಚು ನೋವು ಉಂಟಾದುದು ನಮ್ಮ ಹೃದಯಗಳಿಗಾಗಿದೆ. ಆದರೆ ನಮ್ಮ ಪ್ರತಿಕ್ರಿಯೆಯ ರೀತಿ ಬೇರೆಯೇ ಆಗಿದೆ. ನಾನು ಹೇಳಲು ಬಯಸುವುದೇನೆಂದರೆ, ಇಂತಹ ಘಟನೆಗಳು ಆಗಾಗ, ಮುಂದೆ ಸಹ ಸಂಭವಿಸಬಹುದು. ಮುಸ್ಲಿಮರ ಹೃದಯಗಳಿಗೆ ನೋವುಂಟುಮಾಡುವ ಯಾವುದಾದರೂ ಕೆಲಸ ಅವರು ಮುಂದೆ ಸಹ ಮಾಡಲು ಸಾಧ್ಯವಿದೆ. ಇದರ ಉದ್ದೇಶ, ಮುಸ್ಲಿಮರ ಮೇಲೆ, ಪೂರ್ವ ದೇಶಗಳಿಂದ ಮತ್ತು ವಿಶಿಷ್ಟವಾಗಿ ಭಾರತ–ಪಾಕಿಸ್ತಾನ ಉಪ ಭೂಖಂಡದಿಂದ ಪಾಶ್ಚಿಮಾತ್ಯ ದೇಶಗಳಿಗೆ ವಲಸೆ ಬಂದ ಮುಸ್ಲಿಮರ ಮೇಲೆ ನಿರ್ಬಂಧಗಳನ್ನು ಹೇರುವ ಪ್ರಯತ್ನದ ಭಾಗವಾಗಿರಲೂಬಹುದು. ಆದರೆ ನಿರ್ಬಂಧಗಳನ್ನು ಜಾರಿಗೊಳಿಸಿದರೂ ಇಲ್ಲವಾದರೂ ನಾವು ನಮ್ಮ ವರ್ತನೆಗಳನ್ನು ಇಸ್ಲಾಮೀ ಉಪದೇಶಗಳಿಗೆ ಮತ್ತು ಮೌಲ್ಯಗಳಿಗನುಸಾರವಾಗಿ ರೂಪಿಸಬೇಕಾಗಿದೆ.

ಇಸ್ಲಾಮ್ ಮತ್ತು ಹಝ್ರತ್ ಮುಹಮ್ಮದ್ ಪೈಗಂಬರರ ﷺ ವಿರುದ್ಧ ಆರಂಭದಿಂದಲೇ ಗೂಢ ಕಾರಸ್ಥಾನಗಳನ್ನು ಹೂಡಲಾಗುತ್ತಿತ್ತು. ಆದರೆ ಅಲ್ಲಾಹನು ಇಸ್ಲಾಮನ್ನು ಸಂರಕ್ಷಿಸುವ ವಾಗ್ದಾನ ನೀಡಿರುವ ಕಾರಣ ಅವನು ಸಂರಕ್ಷಣೆ ನೀಡುತ್ತಾ ಇರುತ್ತಾನೆ. ವಿರೋಧಿಗಳ ಎಲ್ಲ ಪ್ರಯತ್ನಗಳು ಸೋತುಹೋಗುತ್ತವೆ.

## ಇಸ್ಲಾಮ್ ಮತ್ತು ಹಝ್ರತ್ ಪೈಗಂಬರರ ﷺ ವಿರುದ್ಧ ಹೂಡಲಾಗುವ ಗುಪ್ತ ಷಡ್ಯಂತ್ರಗಳನ್ನು ತಡೆಯುವವರು ಹಝ್ರತ್ ವಾಗ್ದತ್ತ ಮಸೀಹ್(ಅ)

ಈ ಕಾಲಘಟ್ಟದಲ್ಲಿ ಅಲ್ಲಾಹನು ಹಝ್ರತ್ ವಾಗ್ದತ್ತ ಮಸೀಹರನ್ನು(ಅ) ಈ ಉದ್ದೇಶಲಕ್ಷ್ಯಕ್ಕೋಸ್ಕರ ನೇಮಿಸಿದನು. ಈ ಕಾಲಘಟ್ಟದಲ್ಲಿ ಹಝ್ರತ್ ಮುಹಮ್ಮದ್ ಪೈಗಂಬರರ ﷺ ವಿರುದ್ಧ ಉಂಟಾದ ದೂಷಣೆಗಳು ಮತ್ತು ಅವುಗಳನ್ನು ಹಝ್ರತ್ ವಾಗ್ದತ್ತ ಮಸೀಹ್(ಅ) ಹಾಗೂ ಅನಂತರ ಅವರ ಉಪದೇಶಗಳನ್ನು ಅನುಸರಿಸಿ ಆಯಾಕಾಲದ ಖಲೀಫರು ಜಮಾಅತ್‌ಗೆ ಮಾರ್ಗದರ್ಶನ ನೀಡುತ್ತಾ ಇದ್ದು, ಆ ಪ್ರಕಾರ ಜಮಾಅತ್ ಪ್ರತಿಕ್ರಿಯೆ ನೀಡುತ್ತಾ ಇದ್ದುದು ಮತ್ತು ಅದರಿಂದ ಉಂಟಾದ ಪರಿಣಾಮ – ಇವುಗಳ ಬಗ್ಗೆ ಒಂದೆರಡು ಉದಾಹರಣೆ ನಿಮ್ಮ ಮುಂದಿಡುತ್ತೇನೆ. ನಾವು ಹರತಾಳ ಆಚರಿಸುವುದರಲ್ಲಿ ಅಹ್ಮದಿಯೇತರರೊಂದಿಗೆ ಜೊತೆ ಸೇರದಿರುವುದರಿಂದ ಹಝ್ರತ್ ಪೈಗಂಬರರ ﷺ ವಿರುದ್ಧ ಕೊಳಕೆಸೆಯುವ ಶತ್ರುಗಳ ವರ್ತನೆಯ ಬಗ್ಗೆ ನಮಗೆ ನೋವಿಲ್ಲ ಎಂದು ಸಾಬೀತುಗೊಳಿಸುತ್ತಿದ್ದೇವೆ ಎಂದು ಆರೋಪಿಸುವವರಿಗೆ ಜಮಾಅತ್ ಏನು ಮಾಡಿದೆ ಎಂಬುದನ್ನು ಸ್ಪಷ್ಟಗೊಳಿಸಲು ಬಯಸುತ್ತೇನೆ.

ನಮ್ಮ ಪ್ರತಿಕ್ರಿಯೆ ಯಾವಾಗಲೂ ಹೇಗೆ ಇರುತ್ತದೆ ಮತ್ತು ಯಾವಾಗಲೂ ಹೇಗೆ ಇರಬೇಕೆಂದರೆ, ಅದರ ಮೂಲಕ ಹಝ್ರತ್ ಪೈಗಂಬರರ(ಸ) ಉಪದೇಶ ಮತ್ತು ನಡೆವಳಿಕೆ ಜನರಿಗೆ ಸ್ಪಷ್ಟವಾಗಿ ತಿಳಿಯಬೇಕು. ಅದರೊಂದಿಗೆ ಪವಿತ್ರ ಖುರ್‌ಆನಿನ ಉಪದೇಶ ಸಹ ಸ್ಪಷ್ಟವಾಗಿ ಜನರ ಮುಂದೆ ಬರಬೇಕು. ಹಝ್ರತ್ ಪೈಗಂಬರರ ﷺ ವಿರುದ್ಧ ಕೊಳಕು ದೋಷಾರೋಪಗಳನ್ನು ನೋಡುವಾಗ ನಾವು ಹಿಂಸಾಚಾರ ಮತ್ತು ಧ್ವಂಸ ಕಾರ್ಯಗಳಿಗೆ ಮುಂದಾಗದೆ ಅಲ್ಲಾಹನ ಮುಂದೆ ಸಾಷ್ಟಾಂಗ ಪ್ರಣಾಮ ಮಾಡಿ ಅವನ ಸಹಾಯವನ್ನು ಬೇಡಿಕೊಳ್ಳುತ್ತೇವೆ.

ಹಝ್ರತ್ ಮುಹಮ್ಮದ್ ಪೈಗಂಬರರ ﷺ ಸತ್ಯಸಂಧನಾದ ಪ್ರೇಮಿ ಹಝ್ರತ್ ವಾಗ್ದತ್ತ ಮಸೀಹ್(ಅ) ಪೈಗಂಬರರ ﷺ ಬಗ್ಗೆ ಹೊಂದಿದ್ದ ಪ್ರೇಮಾಭಿಮಾನದ ಬಗ್ಗೆ ಎರಡು ಉದಾಹರಣೆಗಳನ್ನು ನೀಡುತ್ತೇನೆ.

ಪ್ರಥಮ ಉದಾಹರಣೆ ಅಬ್ದುಲ್ಲಾ ಆಥಮ್‌ನದಾಗಿದೆ. ಆತನು ಕ್ರೈಸ್ತನಾಗಿದ್ದನು. ಆತನು ತನ್ನ ಗ್ರಂಥದಲ್ಲಿ ತನ್ನ ಅತ್ಯಂತ ಕೊಳಕು

ಬುದ್ಧಿಯನ್ನು ಪ್ರಕಟಿಸುತ್ತಾ ಹಝ್ರತ್ ಪೈಗಂಬರರನ್ನು ﷺ "ದಜ್ಜಾಲ್" (ಮಹಾ ಸುಳ್ಳುಗಾರ) ಎಂದು ಕರೆದಿದ್ದನು. ಆತನು ಕ್ರೈಸ್ತರ ಪರವಾಗಿ ಹಝ್ರತ್ ವಾಗ್ದತ್ತ ಮಸೀಹರ(ಅ) ವಿರುದ್ಧ ಹದಿನೈದು ದಿವಸಗಳ ಕಾಲ ಒಂದು ವಾದ ಪ್ರತಿವಾದದಲ್ಲಿ ನಿರತನಾಗಿದ್ದನು. ಹಝ್ರತ್ ವಾಗ್ದತ್ತ ಮಸೀಹ್(ಅ) ಹೀಗೆ ಹೇಳುತ್ತಾರೆ: ಆಥಮ್ ಹಝ್ರತ್ ಪೈಗಂಬರರ ﷺ ವಿರುದ್ಧ ಬಳಸಿದ ಪದದ ಬಗ್ಗೆ ಶಿಕ್ಷಿಸಲ್ಪಡಲು ನಾನು ವಾದ ಪ್ರತಿವಾದ ಕಾಲದಲ್ಲಿ ಪ್ರಾರ್ಥಿಸುತ್ತಾ ಇದ್ದೆ. ವಾದ ಪ್ರತಿವಾದ ಮುಗಿದ ನಂತರ ನಾನು ಆಥಮ್‌ನೊಂದಿಗೆ ಹೇಳಿದೆ: "ಒಂದು ಚರ್ಚೆ ಮುಗಿಯಿತು. ಆದರೆ ಇನ್ನೊಂದು ರೀತಿಯ ಸ್ಪರ್ಧೆ ಬಾಕಿಯಿದೆ. ನೀವು ನಿಮ್ಮ ಪುಸ್ತಕ 'ಅಂದರೂನಯೆ ಬೈಬಲ್'ನಲ್ಲಿ ನಮ್ಮ ಹಝ್ರತ್ ಪೈಗಂಬರರನ್ನು ﷺ ದಜ್ಜಾಲ್ ಎಂದು ಕರೆದಿರುವಿರಿ. ನಾನು ಹಝ್ರತ್ ಪೈಗಂಬರರನ್ನು ﷺ ಸತ್ಯವಂತನೆಂದು ನಂಬುತ್ತೇನೆ. ಇಸ್ಲಾಮ್ ಧರ್ಮ ಅಲ್ಲಾಹನ ಕಡೆಯಿಂದ ಬಂದುದೆಂದು ದೃಢವಾಗಿ ನಂಬುತ್ತೇನೆ. ಆದ್ದರಿಂದ ಇದು ಆಕಾಶದಿಂದ ನಿರ್ಧಾರವಾಗಬೇಕಾದ ಸ್ಪರ್ಧೆಯಾಗಿದೆ. ನಮ್ಮ ಪೈಕಿ ಯಾರು ಸುಳ್ಳುಗಾರನಾಗಿದ್ದಾನೋ ಹಝ್ರತ್ ಪೈಗಂಬರರನ್ನು ﷺ ಅನ್ಯಾಯದಿಂದ ಕಾಧಿಬ್ (ಸುಳ್ಳುಗಾರ) ಮತ್ತು ದಜ್ಜಾಲ್ (ಮಹಾ ಸುಳ್ಳುಗಾರ) ಎಂದು ಕರೆಯುತ್ತಾನೋ ಮತ್ತು ಸತ್ಯದ ಶತ್ರುವಾಗಿದ್ದಾನೋ ಅವನು ಸತ್ಯವಂತನಾದವನ ಜೀವಿತದಲ್ಲಿ ಇಂದಿನಿಂದ ಹದಿನೈದು ತಿಂಗಳೊಳಗೆ ನರಕವಾಸಿಯಾಗುವನು – ಅವನು ಸತ್ಯದ ಕಡೆಗೆ ಮರಳಿ ಬಂದರೆ ಹೊರತು. ಎಂದರೆ ಸತ್ಯವಂತನಾದ ಪೈಗಂಬರರನ್ನು ﷺ ದಜ್ಜಾಲ್ ಎಂದು ಕರೆಯುವುದನ್ನು ಬಿಟ್ಟು ಬಿಡದಿದ್ದರೆ, ನಿರ್ಭಯವಾಗಿ ಬೈಯ್ಯುವುದನ್ನು ಬಿಟ್ಟು ಬಿಡದಿದ್ದರೆ ಅವನು ಶಿಕ್ಷೆಗೆ ಗುರಿಯಾಗುವನು."

ಹೀಗೆ ಹೇಳಲು ಕಾರಣವೇನೆಂದರೆ, ಯಾವುದಾದರೂ ಧರ್ಮವನ್ನು ಅಂಗೀಕರಿಸದೆ ನಿರಾಕರಿಸುವುದರಿಂದ ಇಹಲೋಕದಲ್ಲಿ ಶಿಕ್ಷೆಗೆ ಯಾರೂ ಗುರಿಯಾಗುವುದಿಲ್ಲ. ಆದರೆ ನಿರ್ಭಯದಿಂದ ಮತ್ತು ಅಹಂಕಾರದಿಂದ ಧರ್ಮವನ್ನು ನಿಂದಿಸುವುದು ಮತ್ತು ಬೈಯ್ಯುವುದು ಶಿಕ್ಷಾರ್ಹವಾಗುತ್ತದೆ.

ಹಝ್ರತ್ ವಾಗ್ದತ್ತ ಮಸೀಹ್(ಅ) ಹೇಳುತ್ತಾರೆ: ನಾನು ಆತನೊಂದಿಗೆ ಹಾಗೆ ಹೇಳಿದಾಗ ಆತನ ಮುಖ ಕಳೆಗುಂದಿತು. ಆತನ ಮುಖ ಹಳದಿ ವರ್ಣ ಪಡೆಯಿತು. ಕೈಗಳು ಕಂಪಿಸಲು ತೊಡಗಿದವು. ಆತನು ತಡಮಾಡದೆ

ನಾಲಗೆ ಹೊರ ಚಾಚಿದನು. ಎರಡು ಕೈಗಳನ್ನು ಕಿವಿಗಳಿಗೆ ಒತ್ತಿ ಹಿಡಿದನು. ಕೈಗಳನ್ನೂ ತಲೆಯೊಂದಿಗೆ ಅಲ್ಲಾಡಿಸಿದನು. ಅಪರಾಧಿಯಾದವನು ತನ್ನ ಅಪರಾಧವನ್ನು ತೀವ್ರವಾಗಿ ನಿರಾಕರಿಸಿ ಪಶ್ಚಾತ್ತಾಪಗೊಂಡು ಪ್ರಾರ್ಥಿಸುವ ಹಾಗೆ ತನ್ನನ್ನು ತೋರಿಸುತ್ತಿದ್ದನು. ಆತನು ಪದೇ ಪದೇ **"ತೋಬಾ ತೋಬಾ"**, ನಾನು ಗೌರವ ಹೀನತೆ ಪ್ರಕಟಿಸಿಲ್ಲ ಎಂದು ಹೇಳುತ್ತಿದ್ದನು. ಅನಂತರ ಸಹ ಆತನು ಇಸ್ಲಾಮಿನ ವಿರುದ್ಧ ಎಂದೂ ಮಾತನಾಡಲಿಲ್ಲ. ಇದಾಗಿದೆ ಹಝ್ರತ್ ಪೈಗಂಬರರ ﷺ ಬಗ್ಗೆ ಪ್ರೇಮಾಭಿಮಾನ ಹೊಂದಿದ್ದ ಅಲ್ಲಾಹನ ಸಿಂಹವಾಗಿದ್ದ ಹಝ್ರತ್ ವಾಗ್ದತ್ತ ಮಸೀಹರ(ಅ) ಪ್ರತಿಕ್ರಿಯೆ. ಅವರು ಹಝ್ರತ್ ಪೈಗಂಬರರನ್ನು ﷺ ನಿಂದಿಸುವವರ ವಿರುದ್ಧ ಪಂಥಾಹ್ವಾನ ನೀಡುತ್ತಿದ್ದರು.

ಇನ್ನೊಂದು ಘಟನೆ ಲೇಖ್‌ರಾಮ್‌ಗೆ ಸಂಬಂಧಿಸಿದೆ. ಆತನು ಹಝ್ರತ್ ಪೈಗಂಬರರನ್ನು ﷺ ನಿಂದಿಸುತ್ತಾ, ಬೈಯುತ್ತಾ ಲೇಖನಗಳನ್ನು ಪ್ರಕಟಿಸುತ್ತಿದ್ದನು. ಆತನ ಈ ಕೆಟ್ಟ ವರ್ತನೆ ಬಿಟ್ಟು ಬಿಡಬೇಕೆಂದು ಆತನೊಂದಿಗೆ ಹಝ್ರತ್ ವಾಗ್ದತ್ತ ಮಸೀಹ್(ಅ) ಹೇಳಿದರೂ ಆತನು ಅದಕ್ಕೆ ಕಿವಿಗೊಡಲಿಲ್ಲ. ಕೊನೆಯದಾಗಿ ಆತನ ವಿರುದ್ಧ ಹಝ್ರತ್ ವಾಗ್ದತ್ತ ಮಸೀಹ್(ಅ) ಪ್ರಾರ್ಥಿಸಿದಾಗ ಅಲ್ಲಾಹನು ಲೇಖ್‌ರಾಮನ ದಾರುಣ ಅಂತ್ಯದ ಬಗ್ಗೆ ತಿಳಿಸಿದನು.

ಹಝ್ರತ್ ವಾಗ್ದತ್ತ ಮಸೀಹ್(ಅ) ಈ ಘಟನೆ ಬಗ್ಗೆ ಹೀಗೆ ಹೇಳುತ್ತಾರೆ: **"**ಅಲ್ಲಾಹ್ ಮತ್ತು ಹಝ್ರತ್ ಮುಹಮ್ಮದ್ ಪೈಗಂಬರರ ﷺ ಒಬ್ಬ ಶತ್ರು ಹಝ್ರತ್ ಪೈಗಂಬರರನ್ನು ﷺ ಬೈಯುತ್ತಾ ಇದ್ದನು. ಆತನು ಕೊಳಕು ಮಾತುಗಳನ್ನು ಬಳಸುತ್ತಿದ್ದನು. ಆತನ ಹೆಸರು ಲೇಖ್‌ರಾಮ್ ಎಂದಾಗಿತ್ತು. ಅಲ್ಲಾಹನು ನನಗೆ ವಾಗ್ದಾನ ನೀಡಿದನು. ನನ್ನ ಪ್ರಾರ್ಥನೆಯನ್ನು ಸ್ವೀಕರಿಸಿದನು. ನಾನು ಲೇಖ್‌ರಾಮನ ವಿರುದ್ಧ ಪ್ರಾರ್ಥಿಸಿದಾಗ ಅಲ್ಲಾಹನು ನನಗೆ ಹೀಗೆ ತಿಳಿಸಿದನು: **'**ಲೇಖರಾಮ್ ಆರು ವರ್ಷದೊಳಗೆ ನಾಶವಾಗುವನು. ಸತ್ಯ ಧರ್ಮವನ್ನು ಅನ್ವೇಷಿಸುವವರಿಗೆ ಇದು ದೃಷ್ಟಾಂತವಾಗುವುದು.**'** ಹೀಗೆಯೇ ಸಂಭವಿಸಿತು. ಆತನು ಬಹಳ ದಾರುಣವಾಗಿ ಮರಣ ಹೊಂದಿದನು.**"**

## ಹಝ್ರತ್ ಪೈಗಂಬರರ ﷺ ಉತ್ತಮ ಜೀವಿತ ಶೈಲಿಯನ್ನು ಲೋಕದ ಮುಂದೆ ಇರಿಸಿರಿ

ನಮಗೆ ಹಝ್ರತ್ ವಾಗ್ದತ್ತ ಮಸೀಹ್(ಅ) ಇದೇ ಕಾರ್ಯ ರೀತಿಯನ್ನು ಕಲಿಸಿದರು. ನೀಚವಾಗಿ ವರ್ತಿಸುವವರಿಗೆ ಹಝ್ರತ್ ಪೈಗಂಬರರ ﷺ ಉನ್ನತ ನೈತಿಕ ಗುಣಗಳ ಬಗ್ಗೆ ಮನವರಿಕೆ ಮಾಡಿಕೊಡಿರಿ. ಲೋಕದ ದೃಷ್ಟಿಯಿಂದ ಮರೆಯಾಗಿರುವ ಹಝ್ರತ್ ಪೈಗಂಬರರ ﷺ ಸುಂದರ ಮತ್ತು ಪ್ರಕಾಶಮಾನವಾದ ಸ್ವಭಾವ ಗುಣಗಳನ್ನು ವಿವರಿಸಿಕೊಡಿರಿ. ಅಲ್ಲಾಹನು ಅವರನ್ನು ಅವರ ನೀಚ ಕೃತ್ಯಗಳಿಂದ ತಡೆಯಲಿ ಅಥವಾ ಅವರನ್ನು ಸ್ವತಃ ಹಿಡಿಗೂಡಲಿ ಎಂದು ಅಲ್ಲಾಹನೊಂದಿಗೆ ಪ್ರಾರ್ಥಿಸಿರಿ. ಅಲ್ಲಾಹನು ಹಿಡಿಗೂಡುವ ಸ್ವಂತ ವಿಧಾನಗಳು ಇರುತ್ತವೆ. ಯಾರನ್ನು ಯಾವ ರೀತಿ ಹಿಡಿಗೂಡಬೇಕೆಂದು ಅಲ್ಲಾಹನಿಗೆ ಚೆನ್ನಾಗಿ ತಿಳಿದಿದೆ.

ದ್ವಿತೀಯ ಖಿಲಾಫತ್ ಕಾಲಘಟ್ಟದಲ್ಲಿ ಅತ್ಯಂತ ನೀಚ ಪುಸ್ತಕ "ರಂಗೀಲಾ ರಸೂಲ್" ಎಂಬ ಹೆಸರಲ್ಲಿ ಶತ್ರುಗಳು ಪ್ರಕಟಿಸಿದರು. ಅನಂತರ "ವರ್ತಮಾನ್" ಎಂಬ ಪತ್ರಿಕೆ ಒಂದು ಕೊಳಕು ಲೇಖನ ಪ್ರಕಟಿಸಿದಾಗ ಹಿಂದೂಸ್ಥಾನದ ಮುಸ್ಲಿಮರು ರೊಚ್ಚಿಗೆದ್ದರು. ಮುಸ್ಲಿಮರು ಎಲ್ಲ ಕಡೆಗಳಲ್ಲೂ ತೀವ್ರವಾಗಿ ಪ್ರತಿಭಟಿಸಿದರು.

ಆಗ ಹಝ್ರತ್ ಮುಸ್ಲಿಹ್ ಮೌಊದ್(ರ) (ದ್ವಿತೀಯ ಖಲೀಫ) ಮುಸ್ಲಿಮರನ್ನು ಸಂಬೋಧಿಸಿ ಹೇಳಿದರು: ಸಹೋದರರೇ, ನಾನು ನೊಂದ ಹೃದಯದಿಂದ ನಿಮ್ಮೊಂದಿಗೆ ಹೇಳಲು ಬಯಸುತ್ತೇನೆ. ಜಗಳ ಮಾಡುವವನು ಶೂರನಲ್ಲ. ಅವನು ತನ್ನ ಸ್ವಾರ್ಥಭಿಲಾಷೆಯಿಂದ ದಬಾಯಿಸಲ್ಪಟ್ಟ ಹೇಡಿಯಾಗಿದ್ದಾನೆ. (ಇದು ಹದೀಸು ಪ್ರಕಾರ ಹೇಳಿದುದಾಗಿದೆ – ಕೋಪವನ್ನು ದಬಾಯಿಸುವವನು ಶೂರನಾಗಿದ್ದಾನೆಂಬ ಹದೀಸು.) ಶೂರನಾದವನು ಒಂದು ದೃಢ ನಿರ್ಧಾರ ಮಾಡುತ್ತಾನೆ. ತನ್ನ ನಿರ್ಧಾರವು ಈಡೇರುವ ತನಕ ಅದರಿಂದ ಅವನು ಹಿಂದೆ ಸರಿಯುವುದಿಲ್ಲ. ಇಸ್ಲಾಮಿನ ಅಭಿವೃದ್ಧಿಗೋಸ್ಕರ ಮೂರು ವಿಷಯಗಳ ಬಗ್ಗೆ ಪ್ರತಿಜ್ಞೆ ಮಾಡಿರಿ. ಪ್ರಥಮವಾಗಿ – ಅಲ್ಲಾಹನಿಗೆ ಭಯಪಟ್ಟುಕೊಂಡು ಕೆಲಸಮಾಡುವುದಾಗಿ ಮತ್ತು ಧರ್ಮವನ್ನು ಕಡೆಗಣಿಸಲಾರೆವೆಂದು ಪ್ರತಿಜ್ಞೆ ಮಾಡಿರಿ. ಮೊದಲನೆಯದಾಗಿ ನಿಮ್ಮ ಸ್ವಂತ ನಡೆವಳಿಕೆಗಳನ್ನು ಸರಿಪಡಿಸಿರಿ.

ಎರಡನೆಯದಾಗಿ – ಇಸ್ಲಾಮ್ ಧರ್ಮದ ಪ್ರಚಾರಕ್ಕೋಸ್ಕರ ಸಂಪೂರ್ಣವಾದ ಆಸಕ್ತಿ ಹೊಂದುವಿರೆಂದು ಪ್ರತಿಜ್ಞೆ ಮಾಡಿರಿ. ಇಸ್ಲಾಮ್ ಧರ್ಮ ತತ್ವಗಳೇನೆಂದು ಲೋಕದ ಪ್ರತಿಯೊಬ್ಬನಿಗೆ ತಿಳಿಸಿಕೊಡಿರಿ. ಹಝ್ರತ್ ಪೈಗಂಬರರ ﷺ ಶ್ರೇಷ್ಠತೆಗಳು, ಅವರ ಕೊಡುಗೆಗಳು, ಅವರ ಸುಂದರ ಜೀವಿತ ಶೈಲಿ ಜನರಿಗೆ ತಿಳಿಯುವಂತಾಗಲಿ. ಮೂರನೆಯದಾಗಿ – ಮುಸ್ಲಿಮರನ್ನು ಸಂಸ್ಕೃತಿ ಸಂಬಂಧವಾದ ಮತ್ತು ಆರ್ಥಿಕ ಸಂಬಂಧವಾದ ದಾಸ್ಯದಿಂದ ಬಿಡುಗಡೆಗೊಳಿಸಲು ಪೂರ್ಣವಾದ ಪ್ರಯತ್ನ ಮಾಡುವುದಾಗಿ ಪ್ರತಿಜ್ಞೆ ಮಾಡಿರಿ. (ಅನ್‌ವಾರುಲ್ ಉಲೂಮ್ – ಸಂಪುಟ: 9 ಪುಟ: 555–556)

ಮುಸ್ಲಿಮರಲ್ಲಿ ಸಾಮಾನ್ಯರೂ ಗಣ್ಯರೂ ನಾಯಕರೂ ಮಾಡಬೇಕಾದ ಪ್ರತಿಜ್ಞೆ ಇವುಗಳಾಗಿವೆ. ನೀವು ನೋಡಿರಿ, ಮುಸ್ಲಿಮ್ ದೇಶಗಳು ಸ್ವತಂತ್ರ ದೇಶಗಳೆಂದು ಕರೆಯಲ್ಪಡುತ್ತಿದ್ದರೂ ಅವು ಸಾಂಸ್ಕೃತಿಕ ಮತ್ತು ಆರ್ಥಿಕ ದಾಸ್ಯವನ್ನು ಅನುಭವಿಸುತ್ತಿವೆ. ಅವು ಪಾಶ್ಚಿಮಾತ್ಯ ದೇಶಗಳ ಔದಾರ್ಯದ ಆಕಾಂಕ್ಷೆ ಹೊಂದಿರುತ್ತವೆ. ಅವರನ್ನು ಅನುಕರಿಸಲು ಆಸಕ್ತರಾಗಿರುತ್ತಾರೆ. ಸ್ವತಃ ಕೆಲಸ ಮಾಡುವುದಿಲ್ಲ. ಹೆಚ್ಚಿನ ಮಟ್ಟಿಗೆ ನಾವು ಅವರನ್ನು ಅವಲಂಬಿಸಿಕೊಂಡಿರುತ್ತೇವೆ. ಇದೇ ಕಾರಣದಿಂದ ಪಾಶ್ಚಿಮಾತ್ಯರು ಮುಸ್ಲಿಮರ ಭಾವನೆಗಳ ವಿರುದ್ಧ ಆಗಾಗ ಆಟವಾಡುತ್ತಾ ಇರುತ್ತಾರೆ.

ಹಝ್ರತ್ ಖಲೀಫತುಲ್ ಮಸೀಹ್ ಸಾನೀ (ಹಝ್ರತ್ ಮುಸ್ಲಿಹ್ ಮೌಊದ್[ರ]) **"ಸೀರುತುನ್ನಬಿ ಸಲ್ಲಲ್ಲಾಹು ಅಲೈಹಿ ವಸಲ್ಲಮ್"** ಎಂಬ ಹೆಸರಲ್ಲಿ ಸಮ್ಮೇಳನಗಳನ್ನು ನಡೆಸಲು ಪ್ರಾರಂಭಿಸಿದರು. ಇದಾಗಿದೆ ಪ್ರತಿಭಟನೆ ಮಾಡುವ ನಮ್ಮ ವಿಧಾನ. ಸ್ವತ್ತು ನಾಶಮಾಡುವುದು, ಕಲಹ ಪ್ರಾರಂಭಿಸುವುದು ನಮ್ಮ ರೀತಿ ಅಲ್ಲ. ಹಝ್ರತ್ ಮುಸ್ಲಿಹ್ ಮೌಊದ್[ರ] ಮುಸ್ಲಿಮರನ್ನು ಸಂಬೋಧಿಸಿ ಹೇಳಿದ ಮಾತುಗಳನ್ನು ಅಹ್ಮದಿಯರಾದ ನಾವು ಪೂರ್ಣವಾಗಿ ಕಾರ್ಯರೂಪಕ್ಕೆ ತರಬೇಕು.

ಪಾಶ್ಚಿಮಾತ್ಯ ದೇಶಗಳ ಕೆಲವು ಕೆಟ್ಟ ಆಚಾರಗಳು ನಮ್ಮ ಕೆಲವು ಕುಟುಂಬಗಳಲ್ಲಿ ಸದ್ದಿಲ್ಲದೆ ಪ್ರವೇಶಿಸುತ್ತಿವೆ. ನಾನು ಅಹ್ಮದಿಯರೊಂದಿಗೆ ಹೇಳಲು ಬಯಸುತ್ತೇನೆ: ನೀವು ಸಹ ಹಝ್ರತ್ ಮುಸ್ಲಿಹ್ ಮೌಊದ್[ರ] ಅವರಿಂದ ಸಂಬೋಧಿಸಲ್ಪಟ್ಟವರಾಗಿರುವಿರಿ. ಪಾಶ್ಚಿಮಾತ್ಯ ಸಂಸ್ಕೃತಿಯ ಉತ್ತಮ ವಿಚಾರಗಳನ್ನು ನೀವು ಸ್ವಂತಕ್ಕೆ ತೆಗೆದುಕೊಳ್ಳಿರಿ. ಆದರೆ ಅವರ ತಪ್ಪು ಆಚಾರಗಳಿಂದ ನಮ್ಮನ್ನು ರಕ್ಷಿಸಿಕೊಳ್ಳಬೇಕು. ನಾವು ಪ್ರತಿಕ್ರಿಯೆ ನೀಡುವುದು

ಹೊಡೆದು ಬಡಿದು ನಾಶಮಾಡಿ ಅಲ್ಲ. ಬದಲಾಗಿ, ನಾವು ನಮ್ಮ ನಡೆವಳಿಕೆಗಳನ್ನು ಪರಿಶೀಲಿಸಬೇಕು. ನಮ್ಮ ನಡತೆ ಹೇಗಿದೆ, ನಮ್ಮಲ್ಲಿ ದೇವಭಯ ಎಷ್ಟಿದೆ, ಅಲ್ಲಾಹನ ಆರಾಧನೆಯ ಕಡೆಗೆ ಎಷ್ಟು ಕಾಳಜಿ ಇದೆ, ಧಾರ್ಮಿಕ ಆಜ್ಞೆಗಳನ್ನು ಪಾಲಿಸುವ ಬಗ್ಗೆ ಎಷ್ಟು ನಿಷ್ಠೆ ಇದೆ, ಅಲ್ಲಾಹನ ಸಂದೇಶ ಅನ್ಯರಿಗೆ ತಲಪಿಸುವ ಬಗ್ಗೆ ಎಷ್ಟು ಆಸಕ್ತಿ ಇದೆ ಎಂಬುದನ್ನು ಪರಿಶೀಲಿಸಬೇಕು.

ಚತುರ್ಥ ಖಿಲಾಫತ್ ಕಾಲದಲ್ಲಿ ರುಶ್ದಿ ಅತ್ಯಂತ ಅಪಮಾನಕರ ಪುಸ್ತಕ ರಚಿಸಿದ್ದನು. ಆಗ ಹಝ್ರತ್ ಖಲೀಫತುಲ್ ಮಸೀಹ್ ರಾಬಿಅ್(ರಹ್ಮಹುಲ್ಲಾಹ್) ಕೆಲವು ಖುತ್‌ಬಗಳನ್ನು ನೀಡಿದ್ದರು ಮತ್ತು ಆ ಕೃತಿಯನ್ನು ಖಂಡಿಸುವ ಒಂದು ಪುಸ್ತಕವನ್ನು ಬರೆಯಿಸಿದ್ದರು.

ನಾನು ಇದರ ಮೊದಲು ಹೇಳಿದ ಹಾಗೆ ಅಪಮಾನಿಸುವ ಕೆಲಸಗಳು ಆಗಾಗ ನಡೆಯುತ್ತಾ ಇರುತ್ತವೆ. ಕಳೆದ ವರ್ಷದ ಪ್ರಾರಂಭದಲ್ಲಿ ಹಝ್ರತ್ ಪೈಗಂಬರರನ್ನುﷺ ನಿಂದಿಸುವ ಒಂದು ಲೇಖನ ಪ್ರಕಟಗೊಂಡಿತ್ತು. ಆಗ ನಾನು ಜಮಾಅತ್‌ನೊಂದಿಗೆ ಮತ್ತು ಖುದ್ದಾಮ್, ಅನ್ಸಾರ್ ಘಟಕಗಳೊಂದಿಗೆ, ಆ ಲೇಖನವನ್ನು ಖಂಡಿಸಿ ಬರೆಯಲು, ಪತ್ರಗಳನ್ನು ರವಾನಿಸಲು ಮತ್ತು ಸಂಪರ್ಕವನ್ನು ವಿಶಾಲಗೊಳಿಸಲು ಹೇಳಿದ್ದೆ. ಹಝ್ರತ್ ಪೈಗಂಬರರﷺ ಜೀವಿತದ ಸೌಂದರ್ಯಗಳನ್ನು ವಿವರಿಸಲು ಆದೇಶಿಸಿದ್ದೆ. ಹಝ್ರತ್ ಪೈಗಂಬರರﷺ ಜೀವಿತದ ಸುಂದರ ಮಾದರಿಯನ್ನು ಲೋಕಕ್ಕೆ ತೋರಿಸಿ ಕೊಡುವುದು ವಿಧ್ವಂಸಕ ಕೃತ್ಯಗಳಿಂದ ಸಾಧ್ಯವಾಗದು. ಆದುದರಿಂದ ಪ್ರತಿಯೊಂದು ಶ್ರೇಣಿಯ ಅಹ್ಮದಿ ಪ್ರತಿಯೊಂದು ದೇಶದಲ್ಲಿ ಇತರ ವಿದ್ಯಾವಂತ ಬುದ್ಧಿವಂತ ಮುಸ್ಲಿಮರನ್ನು ಜೊತೆ ಸೇರಿಸಿ ಅವರೂ ಹೀಗೆ ಶಾಂತಿಯಿಂದ ತಮ್ಮ ಪ್ರತಿಕ್ರಿಯೆ ಸೂಚಿಸಲು, ಸಮಾಜದ ಜನರೊಂದಿಗೆ ಸಂಬಂಧಗಳನ್ನು ವರ್ಧಿಸಲು, ಲೇಖನಗಳನ್ನು ಬರೆಯಲು ಹೇಳಬೇಕು. ಹೀಗೆ ಮಾಡಿದರೆ ಪ್ರತಿಯೊಂದು ದೇಶದಲ್ಲಿ, ಪ್ರತಿಯೊಂದು ವರ್ಗದಲ್ಲಿ ಹಝ್ರತ್ ಪೈಗಂಬರರﷺ ಬಗ್ಗೆ ಸರಿಯಾದ ಮಾಹಿತಿ ತಲಪುವುದು. ಅನಂತರವೂ ಯಾರಾದರೂ ದುರ್ವರ್ತನೆ ಗೈದರೆ ಅವನೊಂದಿಗೆ ಅಲ್ಲಾಹನು ಪ್ರತಿಕ್ರಿಯಿಸುವನು.

ಅಲ್ಲಾಹನು ಹಝ್ರತ್ ಪೈಗಂಬರರನ್ನು ﷺ ರಹ್ಮತುಲ್ಲಿಲ್ ಆಲಮೀನ್ – ಸಕಲ ಲೋಕಗಳಿಗೂ ಅನುಗ್ರಹವಾಗಿ ಕಳುಹಿಸಿದ್ದಾನೆ. ಪವಿತ್ರ ಖುರ್‌ಆನ್‌ನಲ್ಲಿ ಅಲ್ಲಾಹನು ಹೀಗೆ ಹೇಳಿದ್ದಾನೆ:

**“ವಮಾ ಅರ್‌ಸಲ್‌ನಾಕ ಇಲ್ಲಾ ರಹ್ಮತಲ್ಲಿಲ್ ಆಲಮೀನ್”**

“ಎಲ್ಲ ಲೋಕಗಳಿಗೆ ಒಂದು ಅನುಗ್ರಹವಾಗಿಯೇ ನಾವು ನಿನ್ನನ್ನು ಕಳುಹಿಸಿದ್ದೇವೆ.” (21:108)

ಹಝ್ರತ್ ಪೈಗಂಬರರಿಗಿಂತ ﷺ ಶ್ರೇಷ್ಠ ವ್ಯಕ್ತಿ, ಅನುಗ್ರಹವನ್ನು ಅವರಿಗಿಂತ ಮಿಗಿಲಾಗಿ ಹಂಚುವ ವ್ಯಕ್ತಿ ಅವರಿಗಿಂತ ಹಿಂದೆ ಜನಿಸಲಿಲ್ಲ; ಮುಂದೆಯೂ ಜನಿಸಲಿಕ್ಕಿಲ್ಲ. ಅವರ ಅನುಪಮೇಯ ಜೀವಿತ ಮಾದರಿ ಸದಾ ನೆಲೆ ನಿಂತಿದೆ. ಅದನ್ನು ಅನುಸರಿಸಿ ಜೀವಿಸಲು ಪ್ರತಿಯೊಬ್ಬ ಮುಸ್ಲಿಮನು ಪ್ರಯತ್ನಿಸಬೇಕಾಗಿದೆ. ಅದರ ಬಗ್ಗೆಯೂ ಎಲ್ಲರಿಗಿಂತ ಹೆಚ್ಚು ಹೊಣೆಗಾರಿಕೆ ಅಹ್ಮದಿಯರಿಗಿದೆ. ನಮ್ಮ ಮೇಲೆಯೇ ಆ ಹೊಣೆಗಾರಿಕೆ ಇದೆ. ಹಝ್ರತ್ ಮುಹಮ್ಮದ್ ಪೈಗಂಬರ್ ﷺ ಸಕಲ ಲೋಕಗಳಿಗೆ ಅನುಗ್ರಹವಾಗಿದ್ದಾರೆ. ಆದರೆ ಅಹ್ಮದಿಯೇತರರು ಹಝ್ರತ್ ಪೈಗಂಬರರ ﷺ ಬಗ್ಗೆ ತೋರಿಸುವಂತಹ ಚಿತ್ರದಿಂದ ಅತ್ಯಂತ ಭಯಾನಕ ಕಲ್ಪನೆಗಳು ಉದ್ಭವಿಸುತ್ತವೆ. ನಾವು ಹಝ್ರತ್ ಪೈಗಂಬರರ ﷺ ಪ್ರೀತಿ, ವಾತ್ಸಲ್ಯ ಮತ್ತು ಕರುಣೆಯ ಮಾದರಿ ಜೀವಿತ ಲೋಕಕ್ಕೆ ತೋರಿಸಿಕೊಡಬೇಕು. ಆದರೆ ಇದಕ್ಕೋಸ್ಕರ ಮುಸ್ಲಿಮರು ತಮ್ಮ ವರ್ತನೆಗಳನ್ನು ಬದಲಾಯಿಸಬೇಕೆಂಬುದು ಸ್ಪಷ್ಟ. ಭೀಕರವಾದದ ಪ್ರಶ್ನೆಯೇ ಉದ್ಭವಿಸುವುದಿಲ್ಲ. ಹಝ್ರತ್ ಪೈಗಂಬರರು ﷺ ಯಾವಾಗಲೂ ಯುದ್ಧ ಮಾಡುವುದರಿಂದ ದೂರವಿರಲು ಪ್ರಯತ್ನ ಮಾಡುತ್ತಿದ್ದರು – ಮದೀನದಲ್ಲಿ ಅವರ ಮೇಲೆ ಯುದ್ಧವನ್ನು ಶತ್ರುಗಳು ಹೇರುವ ತನಕ. ಅಲ್ಲಾಹನ ಅನುಮತಿ ದೊರೆತ ನಂತರ ಆತ್ಮರಕ್ಷಣೆಗೋಸ್ಕರ ಯುದ್ಧ ಮಾಡಬೇಕಾಯಿತು. ಆಗ ಸಹ ಅವರಿಗೆ ದೊರೆತ ಆಜ್ಞೆ ಹೀಗಿತ್ತು:

**“ವಖಾತಿಲೂ ಫೀ ಸಬೀಲಿಲ್ಲಾಹಿಲ್ಲಧೀನ ಯುಖಾತಿಲೂನಕುಮ್ ವಲಾ ತಅ್‌ತದೂ ಇನ್ನಲ್ಲಾಹ ಲಾ ಯುಹಿಬ್ಬುಲ್ ಮುಅ್‌ತದೀನ್”**

“(ಓ ಮುಸ್ಲಿಮರೇ,) ನಿಮ್ಮ ವಿರುದ್ಧ ಯುದ್ಧಮಾಡುವವರೊಡನೆ ಅಲ್ಲಾಹನ ಮಾರ್ಗದಲ್ಲಿ ನೀವು ಸಹ ಯುದ್ಧ ಮಾಡಿರಿ. ಆದರೆ ಅತಿಕ್ರಮಣ ಮಾಡಬೇಡಿರಿ. ಅತಿಕ್ರಮಣ ಮಾಡುವವರನ್ನು ಅಲ್ಲಾಹನು ಪ್ರೀತಿಸುವುದಿಲ್ಲ.” (ಪವಿತ್ರ ಖುರ್‌ಆನ್ 2:191)

ಹಝ್ರತ್ ಪೈಗಂಬರರು ﷺ ಅಲ್ಲಾಹನಿಂದ ತಮಗೆ ಅವತೀರ್ಣವಾದ ಆಜ್ಞೆಗಳನ್ನು ಅತ್ಯಂತ ನಿಷ್ಠೆಯಿಂದ ಪಾಲಿಸುವವರಾಗಿದ್ದರು. ಅವರ ಬಗ್ಗೆ ಇಂತಹ ಅನುಚಿತವಾದ ವಿಚಾರಗಳನ್ನು ಪ್ರಕಟಿಸುವುದು ಅತ್ಯಂತ ಅಕ್ರಮ ಕೃತ್ಯವಾಗಿದೆ....

## ವ್ಯಂಗ್ಯ ಚಿತ್ರ ಪ್ರಕಟವಾದ ತಕ್ಷಣ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಪ್ರತಿಭಟಿಸಿದ ವಿಧಾನ

ಅಹ್ಮದಿಯೇತರ ಮುಸ್ಲಿಮರು ಹರತಾಳ ಆಚರಿಸಿ ನಾಶ ನಷ್ಟಗಳನ್ನುಂಟುಮಾಡುವುದರಲ್ಲಿ ಉತ್ಸಾಹ ತೋರಿಸುತ್ತಾರೆ. ಅವರು ಪ್ರತಿಭಟಿಸುವ ರೀತಿಯೇ ಹಾಗೆ. ಆದರೆ ಅಹ್ಮದಿಯಾ ಜಮಾಅತ್ ವ್ಯಂಗ್ಯ ಚಿತ್ರ ಪ್ರಕಟವಾದ ಕೂಡಲೆ ತನ್ನ ಕೆಲಸ ಪ್ರಾರಂಭಿಸಿತು. ನಮ್ಮ ಜಮಾಅತ್‌ನವರು ಪತ್ರಿಕೆಗಳನ್ನು ಸಂಪರ್ಕಿಸಿದರು. ಇದು ಇಂದಿನ ಮಾತಲ್ಲ. ಈಗ 2006 ಫೆಬ್ರವರಿಯಿಂದ ಅಹ್ಮದಿಯೇತರ ಮುಸ್ಲಿಮರು ಹರತಾಳ ಆಚರಿಸುತ್ತಿದ್ದಾರೆ. ಆದರೆ ವ್ಯಂಗ್ಯ ಚಿತ್ರಗಳು ಕಳೆದ ವರ್ಷ ಸೆಪ್ಟಂಬರ್‌ನಲ್ಲಿ ಪ್ರಕಟವಾದ ಕೂಡಲೆ, ಎಂದರೆ ಸೆಪ್ಟಂಬರ್ ತಿಂಗಳ ಕೊನೆಗೆ ಅಥವಾ ಅಕ್ಟೋಬರ್ ತಿಂಗಳ ಆರಂಭದಲ್ಲಿ ನಮ್ಮ ಮಿಷನರಿ ಒಂದು ವಿಶದವಾದ ಲೇಖನ ಸಿದ್ಧಪಡಿಸಿದರು. ವ್ಯಂಗ್ಯ ಚಿತ್ರ ಪ್ರಕಟಿಸಿದ ಪತ್ರಿಕೆಗೆ ಇದನ್ನು ಕಳುಹಿಸಿ ಕೊಟ್ಟರು ಮತ್ತು ವ್ಯಂಗ್ಯ ಚಿತ್ರಗಳ ಬಗ್ಗೆ ತಮ್ಮ ವಿರೋಧವನ್ನು ಸೂಚಿಸಿದರು. ಹಝ್ರತ್ ವಾಗ್ದತ್ತ ಮಸೀಹರ(ಅ) ಅಧ್ಯಾಪನೆ ಬಗ್ಗೆ ಹೇಳಿದರು. ಅಂದರೆ, “ನಮ್ಮ ಪ್ರತಿಭಟನೆ ಈ ರೀತಿಯಾಗಿದೆ. ನಾವು ಮೆರವಣಿಗೆ ಹೊರಟು ಪ್ರತಿಭಟಿಸಲಾರೆವು. ಆದರೆ ನಿಮ್ಮೊಂದಿಗೆ ಲೇಖನಿ ಮೂಲಕ ಜಿಹಾದ್ ಮಾಡುವೆವು. ನೀವು ವ್ಯಂಗ್ಯ ಚಿತ್ರ ಪ್ರಕಟಿಸಿದ ಬಗ್ಗೆ ನಮ್ಮ ವಿಷಾದವನ್ನು ಪ್ರಕಟಿಸುತ್ತೇವೆ. ಮನಸ್ಸಾಕ್ಷಿಯ ಸ್ವಾತಂತ್ರ್ಯ, ಅಭಿಪ್ರಾಯದ ಸ್ವಾತಂತ್ರ್ಯ ಇರಬಹುದು. ಆದರೆ ಅದರ ಅರ್ಥ ಅನ್ಯರ ಹೃದಯವನ್ನು ನೋಯಿಸುವುದಲ್ಲ.” ಇದಕ್ಕೆ ಉತ್ತಮ ಪ್ರತಿಕ್ರಿಯೆ ದೊರಕಿತು. ಒಂದು ಲೇಖನವನ್ನು ಪತ್ರಿಕೆ ಪ್ರಕಟಿಸಿತು. ಡೇನಿಷ್ ಜನರು ಉತ್ತಮವಾಗಿ ಪ್ರತಿಕ್ರಿಯೆ

ನೀಡಿದರು. ಅವರು ಫೋನ್ ಮೂಲಕ ಮತ್ತು ಪತ್ರಗಳ ಮೂಲಕ ನಮ್ಮ ಲೇಖನದ ಬಗ್ಗೆ ಮೆಚ್ಚಿಗೆ ಸೂಚಿಸಿದರು. ಅನೇಕ ಸಂದೇಶಗಳು ಲಭಿಸಿದುವು. ಜರ್ನಲಿಸ್ಟ್ ಯೂನಿಯನ್ ಪ್ರೆಸಿಡೆಂಟರು ಒಂದು ಸಭೆಗೆ ಆಮಂತ್ರಿಸಿದರು. ಅಲ್ಲಿಗೆ ನಮ್ಮ ಮಿಷನರಿ ಹೋಗಿ ಹೇಳಿದರು: ನಿಮ್ಮ ನಿಯಮಗಳು ಅಭಿಪ್ರಾಯ ಸ್ವಾತಂತ್ರ್ಯದ ಹಕ್ಕು ನೀಡುತ್ತದೆ. ಆದರೆ ಅದರ ಅರ್ಥ ವಾಸ್ತವಿಕವಾಗಿ ಅನ್ಯ ಧರ್ಮದವರ ನಾಯಕರನ್ನೂ ಆದರಣೀಯ ಮಹಾಪುರುಷರನ್ನೂ ಅವಮಾನಿಸ ಬಹುದೆಂಬುದಲ್ಲ. ಇಲ್ಲಿ ಮುಸ್ಲಿಮರು ಮತ್ತು ಕ್ರೈಸ್ತರು ಸಮಾಜದಲ್ಲಿ ಒಟ್ಟಿಗೆ ಜೀವಿಸುತ್ತಿದ್ದಾರೆ. ಆದುದರಿಂದ ಅವರ ಭಾವನೆಗಳ ಬಗ್ಗೆ ಗಮನಿಸಬೇಕಾದುದು ಆವಶ್ಯಕವಾಗಿದೆ. ಹೀಗೆ ಮಾಡದಿದ್ದರೆ ಸಮಾಜದಲ್ಲಿ ಶಾಂತಿ ಸ್ಥಾಪಿತವಾಗಿರಲಾರದು.

ಹಝ್ರತ್ ಮುಹಮ್ಮದ್ ಪೈಗಂಬರರ ﷺ ಉಪದೇಶ ಎಷ್ಟು ಸುಂದರವಾಗಿತ್ತು, ಅವರು ಎಷ್ಟು ಉತ್ತಮವಾಗಿ ವರ್ತಿಸಿದ್ದಾರೆ, ಅವರ ಸ್ವಭಾವ ಗುಣಗಳು ಎಷ್ಟು ಶ್ರೇಷ್ಠವಾಗಿದ್ದುವು, ಅವರು ಎಷ್ಟು ಸಹಾನುಭೂತಿ ಮತ್ತು ಕರುಣಾಳು ಆಗಿದ್ದರು, ಅವರು ಎಷ್ಟು ಜನರಿಗೆ ದಯೆದೋರಿದರು, ಅವರು ಸೃಷ್ಟಿಗಳೆಲ್ಲವುಗಳ ಬಗ್ಗೆ ಎಷ್ಟು ಕರುಣೆಯಿಂದ ವರ್ತಿಸಿದರು, ಅವರು ಎಷ್ಟು ವಾತ್ಸಲ್ಯದಿಂದ ಜನರೊಂದಿಗೆ ವರ್ತಿಸಿದರು ಎಂದೆಲ್ಲ ವಿವರಿಸಿ ಕೊಡಲಾಯಿತು. ಕೆಲವು ಘಟನೆಗಳನ್ನು ಅವರಿಗೆ ವಿವರಿಸಿಕೊಟ್ಟು, ಅವರೊಂದಿಗೆ ಕೇಳಲಾಯಿತು: ಇಂತಹ ಉಪದೇಶ ನೀಡುವ ಮಹಾನುಭಾವರ ಬಗ್ಗೆ, ಈ ರೀತಿ ಜನರೊಂದಿಗೆ ವರ್ತಿಸುವವರ ಬಗ್ಗೆ ಇಂತಹ ವ್ಯಂಗ್ಯ ಚಿತ್ರ ಪ್ರಕಟಿಸುವುದು ನ್ಯಾಯಬದ್ಧವಾಗುವುದೇ? ನಮ್ಮ ಮಿಷನರಿಯ ಈ ಮಾತುಗಳನ್ನು ಅವರು ಇಷ್ಟಪಟ್ಟರು ಮತ್ತು ಶ್ಲಾಘಿಸಿದರು. ಒಬ್ಬ ಕಾರ್ಟೂನಿಸ್ಟ್ ಹೇಳಿದರು: ಇಂತಹ ಚರ್ಚೆ ಇದರ ಮೊದಲೇ ನಡೆದಿದ್ದರೆ ನಾವು ಇಂತಹ ಚಿತ್ರಗಳನ್ನು ರಚಿಸುತ್ತಿರಲಿಲ್ಲ. ಈಗ ತಮಗೆ ಇಸ್ಲಾಮಿನ ಉಪದೇಶ ಏನೆಂದು ತಿಳಿಯಿತೆಂದು ಅವರು ಹೇಳಿದರು. ಚರ್ಚೆಗಳು ಇನ್ನು ಮುಂದೆಯೂ ನಡೆಯಬೇಕೆಂದು ಎಲ್ಲರೂ ಹೇಳಿದರು.

ಜರ್ನಲಿಸ್ಟ್ ಯೂನಿಯನ್ ಅಧ್ಯಕ್ಷ ಹೇಳಿಕೆ ಪ್ರಕಟಿಸಿದರು. ಅದರ ಕರಡು ಪ್ರತಿಯನ್ನು ಎಲ್ಲರಿಗೂ ಓದಿ ಹೇಳಲಾಗಿತ್ತು. ಟಿ.ವಿ.ಯಲ್ಲಿ ಇಂಟರ್‌ವ್ಯೂ ನಡೆಸಿದುದು ಚೆನ್ನಾಗಿತ್ತು. ಮಿಷನರಿ ಸಚಿವರನ್ನೂ ಭೇಟಿಯಾದರು. ಒಟ್ಟಿನಲ್ಲಿ ಜಮಾಅತ್ ಪ್ರಯತ್ನ ಮಾಡುತ್ತಿದೆ. ಬೇರೆ

ದೇಶಗಳಲ್ಲೂ ಹೀಗೆಯೇ ನಡೆಯಿತು. ಈ ವ್ಯಂಗ್ಯ ಚಿತ್ರ ಪ್ರಕಟವಾದ ಮೂಲಸ್ಥಳದಲ್ಲಿ ಜಮಾಅತ್ ಸಾಕಷ್ಟು ಕೆಲಸ ಮಾಡಿತು.

ವ್ಯಂಗ್ಯ ಚಿತ್ರ ಪ್ರಕಟವಾಗಲು ಕಾರಣವೇನೆಂದರೆ, ಡೆನ್ಮಾರ್ಕ್‌ನ ಒಬ್ಬ ಡೇನಿಷ್ ಲೇಖಕ ಒಂದು ಪುಸ್ತಕ "ಪೈಗಂಬರರ ಜೀವಿತ ಮತ್ತು ಖುರ್‌ಆನ್" ಎಂಬ ಶೀರ್ಷಿಕೆಯಲ್ಲಿ ಬರೆದಿರುವನು. ಈ ಪುಸ್ತಕಕ್ಕೋಸ್ಕರ ಪೈಗಂಬರರ ಚಿತ್ರಗಳನ್ನು ಬರೆಯಲು ಕೋರಿದ ಪ್ರಕಾರ ಕೆಲವರು ಬರೆದು ಕಳುಹಿಸಿದರು. ಈ ಚಿತ್ರಗಳು ಆ ಪುಸ್ತಕದಲ್ಲಿ ಪ್ರಕಟಗೊಂಡವು. ಆದರೆ ಲೇಖಕರ ಹೆಸರನ್ನು ಮುಸ್ಲಿಮರ ಪ್ರತಿಭಟನೆಗೆ ಭಯಪಟ್ಟು ಪ್ರಕಟಿಸಿರಲಿಲ್ಲ. ಇದೇ ರೀತಿಯ ವ್ಯಂಗ್ಯ ಚಿತ್ರಗಳು ಪತ್ರಿಕೆಗಳಲ್ಲೂ ಪ್ರಕಟವಾದುವು.

ಇಂತಹ ವರ್ತನೆಗಳ ವಿರುದ್ಧ ಸ್ಥಿರವಾಗಿ ಕಾರ್ಯನಿರತರಾಗಬೇಕು. ಪುಸ್ತಕವನ್ನೂ ಪತ್ರಿಕೆಯನ್ನೂ ಓದಿ ಲೋಕದಲ್ಲಿ ಎಲ್ಲೆಲ್ಲಿ ಆಕ್ಷೇಪ ಮಾಡಲಾಗುತ್ತಿದೆಯೋ ಅಲ್ಲೆಲ್ಲ ಅವುಗಳಿಗೆ ಉತ್ತರ ನೀಡುವ ವ್ಯವಸ್ಥೆ ಆಗಬೇಕು.

ಡೆನ್ಮಾರ್ಕ್‌ನಲ್ಲಿ ಕೆಲವರು ಹೀಗೆ ಸಹ ಹೇಳುತ್ತಾರೆ: "ನಾವು ಪ್ರಕಟಿಸದೆ ಇರುವ ವ್ಯಂಗ್ಯ ಚಿತ್ರಗಳನ್ನು ತೋರಿಸಿ ನಾವು ಪ್ರಕಟಿಸಿದವುಗಳೆಂದು ಸುಳ್ಳು ಹೇಳಿ ಮುಸ್ಲಿಮರು ಲೋಕದಲ್ಲಿ ಅಶಾಂತಿ ಹರಡಲು ಪ್ರಯತ್ನಿಸುತ್ತಾರೆ." ಇದು ಸತ್ಯವೋ ಸುಳ್ಳೋ ನಮಗೆ ತಿಳಿಯದು. ಆದರೆ ನಾವು ಕೂಡಲೇ ಕಾರ್ಯನಿರತರಾದ ಕಾರಣ ಅವರಿಗೆ ಬೋಧೋದಯವಾಗಿದೆ. ಇದೆಲ್ಲ ಆಗಲೇ ಶುರುವಾಗಿತ್ತು. ಆದರೆ ಅಹ್ಮದಿಯೇತರರಿಗೆ ಮೂರು ತಿಂಗಳ ಹಿಂದೆ ನಡೆದುದರ ಬಗ್ಗೆ ಈಗ ತಿಳಿದು ಬಂದಿದೆ.

ನಾನು ಹಿಂದೆ ಹೇಳಿದ ಹಾಗೆ ಪ್ರತಿಯೊಂದು ದೇಶದಲ್ಲಿ ಹಝ್ರತ್ ಪೈಗಂಬರರ ﷺ ಜೀವಿತ ಮಾದರಿಯನ್ನು ಪ್ರಕಟಿಸುವುದು ಆವಶ್ಯಕವಾಗಿದೆ. ಇಸ್ಲಾಮ್ ಬಗ್ಗೆ ಯುದ್ಧಭ್ರಾಂತಿ ಹೊಂದಿದ ಧರ್ಮವೆಂಬ ಭಾವನೆಯನ್ನು ಸಾಕ್ಷ್ಯಾಧಾರಗಳ ಮೂಲಕ ಖಂಡಿಸಬೇಕಾದುದು ನಮ್ಮ ಕಡ್ಡಾಯ ಕರ್ತವ್ಯವಾಗಿದೆ. ಪತ್ರಿಕೆಗಳಿಗೆ ಬರೆಯಬೇಕೆಂದು ನಾನು ಇದರ ಮೊದಲು ಸಹ ಹೇಳಿದ್ದೆ. ಪತ್ರಿಕೆಗಳಿಗೆ ಮತ್ತು ಲೇಖನ ಬರೆಯುವವರಿಗೆ ಹಝ್ರತ್ ಪೈಗಂಬರರ ﷺ ಜೀವಿತದ ಬಗ್ಗೆ ಪುಸ್ತಕಗಳನ್ನು ಕಳುಹಿಸುತ್ತಿರಬೇಕು.

## ಅಹ್ಮದೀ ಯುವಕರು ಪತ್ರಿಕಾ ರಂಗವನ್ನು ಪ್ರವೇಶಿಸಬೇಕು

ಒಂದು ಸಲಹೆ ಏನೆಂದರೆ, ಇನ್ನು ಮುಂದೆ ಒಂದು ಯೋಜನೆ ರೂಪಿಸಬೇಕು. ಪತ್ರಿಕಾ ರಂಗದಲ್ಲಿ ಆಸಕ್ತಿಯಿರುವ ಯುವಕರು ಹೆಚ್ಚು ಹೆಚ್ಚಾಗಿ ಪತ್ರಿಕಾ ರಂಗವನ್ನು ಪ್ರವೇಶಿಸಲು ಪ್ರಯತ್ನಿಸಬೇಕು. ತತ್ಫಲವಾಗಿ ಪತ್ರಿಕಾ ರಂಗದಲ್ಲಿ ನಮ್ಮ ಪ್ರಾತಿನಿಧ್ಯ ಇರುವಂತಾಗಲಿ. ಏಕೆಂದರೆ ಮೇಲೆ ವಿವರಿಸಿದಂತಹ ಆಕ್ಷೇಪಕರ ಸನ್ನಿವೇಶಗಳು ಆಗಾಗ ಉದ್ಭವಿಸುತ್ತವೆ. ಸಂಪರ್ಕ ಮಾಧ್ಯಮಗಳ ಜೊತೆ ವಿಶಾಲ ಸಂಬಂಧ ಸ್ಥಾಪಿತವಾದರೆ ಇಂತಹ ಸನ್ನಿವೇಶಗಳನ್ನು ತಡೆಗಟ್ಟಬಹುದಾಗಿದೆ. ತದನಂತರವೂ ಯಾರಾದರೂ ಹಟಮಾರಿತನದಿಂದ ವರ್ತಿಸುವುದಾದರೆ ಅಂತಹ ಜನರು ಈ ಲೋಕದಲ್ಲಿಯೂ ಪರಲೋಕದಲ್ಲಿಯೂ ಅಲ್ಲಾಹನು ಶಪಿಸಿದ ವರ್ಗಕ್ಕೆ ಸೇರಿದವರಾಗುತ್ತಾರೆ. ಅಲ್ಲಾಹನು ಪವಿತ್ರ ಖುರ್‌ಆನ್‌ನಲ್ಲಿ ಹೀಗೆ ಹೇಳಿದ್ದಾನೆ:

**ಇನ್ನಲ್ಲಧೀನ ಯೂಅ್‌ದೂನಲ್ಲಾಹ ವರಸೂಲಹೂ ಲಅನಹುಮುಲ್ಲಾಹು ಫಿದ್ದುನ್‌ಯ ವಲ್‌ಆಖಿರತಿ ವಅಅದ್ದಲಹುಮ್ ಅಧಾಬಮ್ಮುಹೀನಾ.**

"ಅಲ್ಲಾಹನಿಗೂ ಅವನ ಸಂದೇಶವಾಹಕನಿಗೂ ಯಾರು ತೊಂದರೆಕೊಡುತ್ತಾರೋ, ನಿಶ್ಚಯವಾಗಿಯೂ ಅವರನ್ನು ಅಲ್ಲಾಹನು ಇಹದಲ್ಲೂ ಪರದಲ್ಲೂ ಶಪಿಸಿದ್ದಾನೆ. ಅವರಿಗೆ ಅಪಮಾನಕರವಾದ ಶಿಕ್ಷೆಯನ್ನು ಅವನು ಸಿದ್ಧಪಡಿಸಿಟ್ಟಿದ್ದಾನೆ." (33:58)

ಅಲ್ಲಾಹನ ಈ ವಿಧಿ ಸ್ಥಗಿತಗೊಂಡಿಲ್ಲ. ನಮ್ಮ ಹಝ್ರತ್ ಪೈಗಂಬರರು ﷺ ಜೀವಂತ ಪ್ರವಾದಿಯಾಗಿದ್ದಾರೆ. ಅವರ ಉಪದೇಶ ಯಾವಾಗಲೂ ಜೀವ ನೀಡುವ ಉಪದೇಶವಾಗಿದೆ. ಅವರು ತಂದ ನಿಯಮಸಂಹಿತೆ (ಶರೀಅತ್) ಎಲ್ಲ ಕಾಲಘಟ್ಟಗಳ ಸಮಸ್ಯೆಗಳನ್ನೂ ಪರಿಹರಿಸುವಂತಹದು ಆಗಿದೆ. ಅವರನ್ನು ಅನುಸರಿಸುವುದರಿಂದ ಅಲ್ಲಾಹನ ಸಾಮೀಪ್ಯ ಲಭಿಸುತ್ತದೆ. ಆದ್ದರಿಂದ ಹಝ್ರತ್ ಪೈಗಂಬರರನ್ನು ﷺ ನಂಬುವವರಿಗೆ ನೀಡಲಾಗುವ ಕಷ್ಟಗಳಿಗೆ ಅವು ಯಾವ ರೀತಿಯಲ್ಲಾದರೂ ಸರಿ, ಅವುಗಳ ಮೇಲೆಲ್ಲ ಮೇಲೆ ನೀಡಿದ ದೈವಿಕ ವಿಧಿ ಜಾರಿಗೊಳ್ಳುತ್ತದೆ. ಅಲ್ಲಾಹನು ಜೀವಂತನಾಗಿದ್ದಾನೆ. ಜನರು ಏನೆಲ್ಲ ಮಾಡುತ್ತಿದ್ದಾರೆಂದು ಅವನು ನೋಡುತ್ತಾ ಇದ್ದಾನೆ.

ಲೋಕವನ್ನು ಎಚ್ಚರಿಸುವುದು ನಮ್ಮ ಕಡ್ಡಾಯ ಕರ್ತವ್ಯವಾಗಿದೆ. ನಮಗೆ ನೀಡುವ ಕಷ್ಟಗಳಿಗೆ ಶಿಕ್ಷೆ ನೀಡುವ ಶಕ್ತಿ ಅಲ್ಲಾಹನಿಗೆ ಈಗ ಸಹ ಇದೆ.

ಆದುದರಿಂದ ಅಲ್ಲಾಹನನ್ನೂ ಅವನ ಪೈಗಂಬರರನ್ನೂ ﷺ ನೋಯಿಸುವ ಕೆಲಸದಿಂದ ಹಿಂದೆ ಸರಿಯಿರಿ ಎಂದು ನಾವು ಲೋಕಕ್ಕೆ ಹೇಳಬೇಕು.

ಆದರೆ, ಇಸ್ಲಾಮ್ ಧರ್ಮದ ಉಪದೇಶಗಳನ್ನು ಮತ್ತು ಹಝ್ರತ್ ಪೈಗಂಬರರ ﷺ ಶ್ರೇಷ್ಠ ಜೀವಿತ ಮಾದರಿಯನ್ನು ಲೋಕಕ್ಕೆ ತಿಳಿಸಿಕೊಡುವಾಗ ನಾವು ನಮ್ಮ ನಡೆವಳಿಕೆಗಳನ್ನು ಸರಿಪಡಿಸಬೇಕಾದುದು ಆವಶ್ಯಕವಾಗಿದೆ. ಏಕೆಂದರೆ ನಮ್ಮ ನಡವಳಿಕೆಗಳೇ ಲೋಕದ ಬಾಯಿಯನ್ನು ಮುಚ್ಚಿಸುವುವು. ಇವುಗಳೇ ಲೋಕದ ಬಾಯಿ ಮುಚ್ಚಿಸುವ ನಿಟ್ಟಿನಲ್ಲಿ ಮಹತ್ವಪೂರ್ಣ ಕೆಲಸ ಮಾಡುತ್ತವೆ. ಒಬ್ಬ ಅಹ್ಮದಿಯೇತರ ಮೌಲವಿಯ ಕಾಪಟ್ಯದ ಬಗ್ಗೆ ಹೀಗೆ ವರದಿಯಾಗಿದೆ: ಅವರು ನಮ್ಮೊಂದಿಗೆ ಒಂದು ರೀತಿ ಹೇಳುತ್ತಾರೆ ಮತ್ತು ಬೇರೆ ಕಡೆ ಹೋಗಿ ಜನರನ್ನು ಉತ್ತೇಜಿಸುತ್ತಾರೆ. ಪ್ರಾಯಶಃ ನಾನು ಈ ವರದಿ ಓದಿಲ್ಲ. ನಮ್ಮ ಬಾಹ್ಯ ಮತ್ತು ಆಂತರಿಕ, ನಮ್ಮ ಮಾತು ಮತ್ತು ಕೃತಿ ಒಂದೇ ರೀತಿ ಇರಬೇಕು. ನಮ್ಮ ನಡೆವಳಿಕೆಯಿಂದ ಅದನ್ನು ತೋರಿಸಬೇಕು.

## ಪತಾಕೆಗಳನ್ನು ಸುಡುವುದರಿಂದ ಅಥವಾ ವಿಧ್ವಂಸಕ ಕೃತ್ಯಗಳಿಂದ ಹಝ್ರತ್ ಪೈಗಂಬರರ ﷺ ಗೌರವ ನೆಲೆನಿಲ್ಲದು

ನಾನು ಮುಸ್ಲಿಮರೆಲ್ಲರೊಂದಿಗೆ, ಅವರು ಅಹ್ಮದಿಯರಾಗಿರಲಿ, ಅಹ್ಮದಿಯೇತರರಾಗಿರಲಿ, ಸುನ್ನಿಯಾಗಿರಲಿ, ಶಿಯಾ ಆಗಿರಲಿ ಅಥವಾ ಬೇರೆ ಯಾವುದೇ ಮುಸ್ಲಿಮ್ ಪಂಗಡಕ್ಕೆ ಸೇರಿದವರಾಗಿರಲಿ, ಎಲ್ಲರೊಂದಿಗೆ ಹೇಳುತ್ತೇನೆ: ಹಝ್ರತ್ ಪೈಗಂಬರರ ﷺ ವ್ಯಕ್ತಿತ್ವದ ಮೇಲೆ ಆಕ್ರಮಣ ನಡೆದಾಗ ತಾತ್ಕಾಲಿಕವಾಗಿ ರೊಚ್ಚಿಗೇಳದೆ, ಪತಾಕೆ ಸುಡದೆ, ವಿಧ್ವಂಸಕ ಕೃತ್ಯ ಮಾಡದೆ, ರಾಯಭಾರಿ ಕಚೇರಿಗಳ ಮೇಲೆ ಆಕ್ರಮಣ ಮಾಡದೆ, ನಿಮ್ಮ ಸ್ವಭಾವ ಗುಣಗಳನ್ನು ಸುಧಾರಿಸಿರಿ. ಅನ್ಯರು ನಿಮ್ಮ ವಿರುದ್ಧ ಬೊಟ್ಟುಮಾಡುವಂತಾಗದಿರಲಿ. ಹಝ್ರತ್ ಪೈಗಂಬರರ ﷺ ಗೌರವಕ್ಕೆ ಕುಂದುಂಟಾಗುವಾಗ ಪತಾಕೆ ಸುಡುವ ಮೂಲಕ ಅಥವಾ ರಾಯಭಾರಿ ಕಚೇರಿ ಸುಡುವ ಮೂಲಕ ಪ್ರತೀಕಾರ ಮಾಡಲು ಸಾಧ್ಯವೇ? ನಾವು ಎಂತಹ ಪೈಗಂಬರರ ﷺ ಅನುಯಾಯಿಗಳೆಂದರೆ, ಅವರು ಬೆಂಕಿಯನ್ನು

ನಂದಿಸಲು ಆಗಮಿಸಿದವರಾಗಿದ್ದರು. ಅವರು ಪ್ರೀತಿಯ ರಾಯಭಾರಿ ಆಗಿದ್ದರು. ಅವರು ಶಾಂತಿಯ ರಾಜಕುಮಾರರಾಗಿ ಆಗಮಿಸಿದ್ದರು. ನೀವು ಯಾವುದೇ ಕ್ರೂರ ಕೃತ್ಯ ಮಾಡದೆ ಲೋಕಕ್ಕೆ ಆ ಮಹಾನುಭಾವರ ಸುಂದರ ಉಪದೇಶಗಳ ಬಗ್ಗೆ ತಿಳಿಸಿರಿ.

## ಒಬ್ಬ ಅಹ್ಮದಿಯ ನಿಜವಾದ ಪ್ರತಿಕ್ರಿಯೆ ಹೇಗಿರಬೇಕು?

ಅಲ್ಲಾಹನು ಮುಸ್ಲಿಮರಿಗೆ ಬುದ್ಧಿಯನ್ನೂ ವಿವೇಕವನ್ನೂ ದಯಪಾಲಿಸಲಿ. ನಾನು ಎಲ್ಲ ಅಹ್ಮದಿಯರೊಂದಿಗೆ ಹೇಳಲು ಬಯಸುತ್ತೇನೆ: ನಿಮ್ಮಲ್ಲಿ ಪ್ರತಿಯೊಬ್ಬ ಮಗು, ಪ್ರತಿಯೊಬ್ಬ ವೃದ್ಧ, ಪ್ರತಿಯೊಬ್ಬ ಯುವಕ, ಪ್ರತಿಯೊಬ್ಬ ಪುರುಷ, ಪ್ರತಿಯೊಬ್ಬ ಮಹಿಳೆ ಎಂದೂ ನಂದಿ ಹೋಗದಂತಹ ಬೆಂಕಿಯನ್ನು ಹಚ್ಚಬೇಕು. ಅದು ಯಾವುದೇ ದೇಶದ ಪತಾಕೆ ಅಥವಾ ಸ್ವತ್ತಿಗೆ ಬೆಂಕಿ ಹಚ್ಚುವ ಮೂಲಕವಲ್ಲ. ಕೆಲವು ನಿಮಿಷಗಳಲ್ಲಿ ಅಥವಾ ಗಂಟೆಗಳಲ್ಲಿ ನಂದಿ ಹೋಗುವ ಬೆಂಕಿ ಅದಾಗದಿರಲಿ. ಪಾಕಿಸ್ತಾನದ ಒಂದು ಚಿತ್ರದಲ್ಲಿ ಜನರು ಬೆಂಕಿ ಹಚ್ಚುತ್ತಿರುವುದನ್ನು ತೋರಿಸಲಾಗಿದೆ. ಒಂದು ಮಹತ್ಕಾರ್ಯ ಮಾಡುವ ಹಾಗೆ ಅವರು ವರ್ತಿಸುತ್ತಿದ್ದಾರೆ. ಅವರು ಹಚ್ಚುವ ಬೆಂಕಿ ಕೆಲವು ನಿಮಿಷಗಳಲ್ಲಿ ನಂದಿ ಹೋಗುವುದು. ಆದರೆ ನಮ್ಮ ಬೆಂಕಿ ಹೇಗಿರಬೇಕೆಂದರೆ, ಅದು ಯಾವಾಗಲೂ ಉರಿಯುತ್ತಿರಬೇಕು. ಅದು ಹಝ್ರತ್ ಪೈಗಂಬರರ(ಸ) ಬಗ್ಗೆ ನಾವು ಹೊಂದಿರುವ ಪ್ರೇಮದ ಬೆಂಕಿಯಾಗಿದೆ. ಅದು ಹಝ್ರತ್ ಪೈಗಂಬರರ ﷺ ಪ್ರತಿಯೊಂದು ನಡವಳಿಕೆಯನ್ನು ಸ್ವಯಂ ಅನುಸರಿಸಿ ಲೋಕಕ್ಕೆ ತೋರಿಸಿಕೊಡುವ ಬೆಂಕಿಯಾಗಿರಬೇಕು. ಅದು ನಿಮ್ಮ ಹೃದಯಗಳಲ್ಲೂ ಎದೆಗಳಲ್ಲೂ ಹಚ್ಚಲ್ಪಟ್ಟಿದ್ದರೆ ಅದು ಯಾವಾಗಲೂ ಉರಿಯುತ್ತಾ ಇರಲಿ. ಈ ಬೆಂಕಿ ಪ್ರಾರ್ಥನೆಯಲ್ಲಿಯೂ ಉರಿಯುತ್ತಿರಲಿ. ಅದರ ಜ್ವಾಲೆಗಳು ಪ್ರತಿಕ್ಷಣ ಆಕಾಶಕ್ಕೆ ತಲುಪುತ್ತಾ ಇರುವಂತಾಗಲಿ.

## ನಿಮ್ಮ ನೋವುಗಳನ್ನು ಪ್ರಾರ್ಥನೆಗಳಲ್ಲಿ ಹಾಕಿರಿ. ಹಝ್ರತ್ ಪೈಗಂಬರರಿಗೋಸ್ಕರ ﷺ ಹೆಚ್ಚು ಹೆಚ್ಚಾಗಿ ದುರೂದ್ ಪ್ರಾರ್ಥನೆ ಮಾಡಿರಿ

ಪ್ರತಿಯೊಬ್ಬ ಅಹ್ಮದಿ ತನ್ನ ಹೃದಯಕ್ಕೆ ಈ ಬೆಂಕಿಯನ್ನು ಹಚ್ಚಬೇಕು ಮತ್ತು ತನ್ನ ನೋವನ್ನು ಪ್ರಾರ್ಥನೆಗೆ ಹಾಕಬೇಕು. ಆದರೆ ಇದಕ್ಕೋಸ್ಕರ ಮಾಧ್ಯಮವಾಗಬೇಕಾದುದು ಹಝ್ರತ್ ಪೈಗಂಬರರೇ(ಸ) ಆಗಿದ್ದಾರೆ. ನಿಮ್ಮ

ಪ್ರಾರ್ಥನೆಗಳು ಅಂಗೀಕರಿಸಲ್ಪಡಲು, ಅಲ್ಲಾಹನ ಪ್ರೀತಿಯನ್ನು ಆಕರ್ಷಿಸಲು, ಲೌಕಿಕ ನಿರರ್ಥಕವಾದವುಗಳಿಂದ ರಕ್ಷಣೆ ಪಡೆಯಲು, ಇಂತಹ ಗಲಭೆಗೊಂದಲಗಳಿಂದ ತಮ್ಮನ್ನು ಸಂರಕ್ಷಿಸಲು, ಹಝ್ರತ್ ಪೈಗಂಬರರ(ಸ) ಬಗ್ಗೆ ಪ್ರೀತಿಯನ್ನು ಹೃದಯಗಳಲ್ಲಿ ಉರಿಯುತ್ತಾ ಇರುವಂತೆ ಮಾಡಲು, ನಿಮ್ಮ ಇಹಲೋಕ ಮತ್ತು ಪರಲೋಕದ ಸ್ಥಿತಿ ಉತ್ತಮಗೊಳ್ಳಲು ಹಝ್ರತ್ ಪೈಗಂಬರರಿಗೋಸ್ಕರ(ಸ) ಅಸಂಖ್ಯಾತ ಸಾರಿ ದುರೂದ್ ಪ್ರಾರ್ಥನೆ ಮಾಡುತ್ತಾ ಇರಬೇಕು. ಹೆಚ್ಚು ಹೆಚ್ಚಾಗಿ ದುರೂದ್ ಪ್ರಾರ್ಥನೆ ಮಾಡುತ್ತಾ ಇರಬೇಕು. ಈ ಕಲಹಭರಿತ ಕಾಲಘಟ್ಟದಲ್ಲಿ ನಿಮ್ಮನ್ನು ಹಝ್ರತ್ ಪೈಗಂಬರರ(ಸ) ಪ್ರೀತಿಯಲ್ಲಿ ಮುಳುಗಿಸಿಡಲು ನಿಮ್ಮ ಸಂತಾನಗಳನ್ನು ಅಹ್ಮದಿಯ್ಯತ್ ಮತ್ತು ಇಸ್ಲಾಮ್‌ನಲ್ಲಿ ಸ್ಥಿರವಾಗಿ ನಿಲ್ಲುವಂತೆ ಮಾಡಲು ಪ್ರತಿಯೊಬ್ಬ ಅಹ್ಮದಿ ಅಲ್ಲಾಹನ ಈ ಆಜ್ಞೆಯನ್ನು ನಿಷ್ಠೆಯಿಂದ ಪಾಲಿಸಬೇಕು. ಅಲ್ಲಾಹನು ಹೀಗೆ ಹೇಳಿರುವನು:

**ಇನ್ನಲ್ಲಾಹ ವಮಲಾಯಿಕತುಹು ಯುಸಲ್ಲೂನ ಅಲನ್ನಬಿಯ್ಯಿ ಯಾ ಅಯ್ಯುಹಲ್ಲಧೀನ ಆಮನೂ ಸಲ್ಲೂ ಅಲೈಹಿ ವಸಲ್ಲಿಮೂ ತಸ್ಲೀಮಾ** "ನಿಶ್ಚಯವಾಗಿಯೂ ಅಲ್ಲಾಹ್ ಮತ್ತು ಅವನ ದೂತರು ಪ್ರವಾದಿಗೆ ಅನುಗ್ರಹಗಳನ್ನು ಬಯಸುತ್ತಾರೆ. ಎಲೈ ವಿಶ್ವಾಸಿಗಳೇ, ಅವರಿಗೆ ಅನುಗ್ರಹವೂ ಶಾಂತಿಯೂ ದೊರೆಯಲಿಕ್ಕೋಸ್ಕರ ನೀವು ಸಹ ಪ್ರಾರ್ಥಿಸಿರಿ." (ಪವಿತ್ರಖುರ್‌ಆನ್33:57).

(ಜುಮುಅ ಖುತ್‌ಬ 10–02–2006)

## ಅನ್ಯರ ಭಾವನೆಯೊಂದಿಗೆ ಆಟವಾಡುವುದು ಪ್ರಜಾಪ್ರಭುತ್ವವೂ ಅಲ್ಲ; ಮನಸ್ಸಾಕ್ಷಿಯ ಸ್ವಾತಂತ್ರ್ಯವೂ ಅಲ್ಲ

ಯಾವುದಾದರೂ ಧರ್ಮದ ಆದರಣೀಯ ಮಹಾನುಭಾವರ ಬಗ್ಗೆ ಅನುಚಿತ ಅಭಿಪ್ರಾಯ ಪ್ರಕಟಣೆ ಯಾವುದೇ ರೀತಿಯ ಸ್ವಾತಂತ್ರ್ಯಕ್ಕೆ ಸೇರಿದುದಾಗಿರುವುದಿಲ್ಲ. ನೀವು ಪ್ರಜಾಪ್ರಭುತ್ವ ಮತ್ತು ಮನಸ್ಸಾಕ್ಷಿ ಸ್ವಾತಂತ್ರ್ಯದ ಪ್ರತಿಪಾದಕರಾಗಿ ಅನ್ಯರ ಭಾವನೆಗಳೊಂದಿಗೆ ಆಟವಾಡುತ್ತಿರುವಿರಿ. ಇದು ಪ್ರಜಾಪ್ರಭುತ್ವವೂ ಅಲ್ಲ; ಮನಸ್ಸಾಕ್ಷಿಯ ಸ್ವಾತಂತ್ರ್ಯವೂ ಅಲ್ಲ. ಪ್ರತಿಯೊಂದಕ್ಕೆ ಒಂದು ಪರಿಮಿತಿ ಇರುತ್ತದೆ. ನೈತಿಕ ನಡೆವಳಿಕೆಯ ನೀತಿ ಸಂಹಿತೆಯೂ ಇರುತ್ತದೆ. ಪ್ರತಿಯೊಂದು ಉದ್ಯೋಗಕ್ಕೆ ಸಂಬಂಧಿಸಿ ನೀತಿ ಸಂಹಿತೆ ಇರುವ

ಹಾಗೆ ಪತ್ರಿಕಾ ವೃತ್ತಿಗೂ ನೀತಿ ಸಂಹಿತೆ ಇರುತ್ತದೆ. ಯಾವ ರೀತಿಯ ಸರಕಾರವಿದ್ದರೂ ಅದಕ್ಕೆ ಅದರದೇ ಆದ ಕಾನೂನು ಕಾಯಿದೆಗಳು ಇರುತ್ತವೆ.

ಅಭಿಪ್ರಾಯ ಸ್ವಾತಂತ್ರ್ಯದ ಅರ್ಥ ಅನ್ಯರ ಭಾವನೆಗಳೊಂದಿಗೆ ಆಟವಾಡಬಹುದೆಂದಲ್ಲ; ಅನ್ಯರಿಗೆ ಕಷ್ಟ ನೀಡಬಹುದೆಂದಲ್ಲ. ಪಶ್ಚಿಮ ದೇಶಗಳು ಅಭಿಮಾನಗೊಳ್ಳುವ ಸ್ವಾತಂತ್ರ್ಯ ಇದೇ ಆಗಿದ್ದರೆ ಇದು ಪ್ರಗತಿ ಕಡೆಗೆ ಒಯ್ಯುವ ಸ್ವಾತಂತ್ರ್ಯವಲ್ಲ. ಇದು ಅಧಃಪತನಕ್ಕೆ ಒಯ್ಯುವ ಸ್ವಾತಂತ್ರ್ಯವಾಗಿದೆ.

## ಹಝ್ರತ್ ಪೈಗಂಬರರನ್ನು ﷺ ಅಪಮಾನಿಸುವ ಕೃತ್ಯಗಳ ಬಗ್ಗೆ ಹಟಮಾರಿತನ ಅಲ್ಲಾಹನ ಕೋಪವನ್ನು ವರ್ಧಿಸುವಂತಹದ್ದಾಗಿದೆ

ಪಶ್ಚಿಮದ ದೇಶಗಳು ಸ್ವಾತಂತ್ರ್ಯದ ಹೆಸರಿನಲ್ಲಿ ಬಹಳ ವೇಗವಾಗಿ ಧರ್ಮವನ್ನು ಬಿಟ್ಟು ನೈತಿಕ ಮೌಲ್ಯಗಳನ್ನು ಹಾಳುಗೆಡವುತ್ತಾ ಇವೆ. ಈ ಜನರು ತಮ್ಮ ನಾಶವನ್ನು ಹೇಗೆ ಆಮಂತ್ರಿಸುತ್ತಿದ್ದಾರೆಂದು ಅವರಿಗೆ ತಿಳಿದಿಲ್ಲ. ಈಗ ಇಟಲಿ ದೇಶದ ಒಬ್ಬ ಸಚಿವ ಕೊಳಕು ವ್ಯಂಗ್ಯ ಚಿತ್ರಗಳನ್ನು ಟಿ–ಶರ್ಟ್‌ಗಳಲ್ಲಿ ಮುದ್ರಿಸಿ ಧರಿಸಲು ತೊಡಗಿರುವನಲ್ಲದೆ ಅನ್ಯರೊಂದಿಗೆ ತನ್ನಿಂದ ಈ ಟಿ–ಶರ್ಟ್‌ಗಳನ್ನು ಪಡೆದುಕೊಳ್ಳಲು ಹೇಳುತ್ತಿದ್ದಾನೆ. ಅಲ್ಲಿ ಇಂತಹ ಟಿ–ಶರ್ಟ್‌ಗಳು ಮಾರಾಟವಾಗುತ್ತವೆ ಎಂದು ಸಹ ವರದಿಯಾಗಿದೆ. ಮುಸ್ಲಿಮರಿಗೆ ನಡೆಸಬೇಕಾದ ಚಿಕಿತ್ಸೆ ಇದೇ ಎಂದು ಅವರು ಹೇಳುತ್ತಾರೆ. ಇದು ಮುಸ್ಲಿಮರಿಗೆ ಚಿಕಿತ್ಸೆಯಾಗುವುದೋ ಇಲ್ಲವೋ ಎಂದು ನಮಗೆ ತಿಳಿಯದು. ಆದರೆ ಇಸ್ಲಾಮಿನ ಈ ಶತ್ರುಗಳು ತಿಳಿದುಕೊಳ್ಳಬೇಕಾದುದೇನೆಂದರೆ, ಅವರು ಅಲ್ಲಾಹನ ಕೋಪ ಪ್ರಜ್ವಲಿಸುವ ಕೆಲಸ ಮಾಡುತ್ತಿದ್ದಾರೆ. ಹಿಂದೆ ಅವಿವೇಕದಿಂದ ಮಾಡಿದುದು ಮಾಡಿ ಆಯಿತು. ಆದರೆ ಅದನ್ನು ಮುಂದುವರಿಸುವುದು, ಹಟಮಾರಿತನ ತೋರಿಸುವುದು ಮತ್ತು ನಾವು ಮಾಡಿದುದೇ ಸರಿಯೆಂದು ಹೇಳುವುದು ದೇವನ ಕೋಪಕ್ಕೆ ಕಾರಣವಾಗುವುದು.

## ಇಂತಹ ಪರಿಸ್ಥಿತಿಯಲ್ಲಿ ಅಹ್ಮದಿ ಹೇಗೆ ಪ್ರತಿಕ್ರಿಯೆ ನೀಡಬೇಕು?

ಈ ಜನರ ಕೃತ್ಯಗಳು ಅಲ್ಲಾಹನ ಕೋಪವನ್ನು ಖಂಡಿತ ವರ್ಧಿಸುವಂತೆ ಮಾಡುವುವು. ಅಹ್ಮದಿಯೇತರ ಮುಸ್ಲಿಮರ ಪ್ರತಿಕ್ರಿಯೆ ಹೇಗಿದ್ದರೂ ಅಹ್ಮದೀ ಮುಸ್ಲಿಮರ ಪ್ರತಿಕ್ರಿಯೆ ಹೀಗಿರಬೇಕು: ಅಹ್ಮದಿಯರು ನೀಚ ಕೃತ್ಯ ಮಾಡುವವರಿಗೆ ಬೋಧಿಸಬೇಕು. ಅಲ್ಲಾಹನ ಕೋಪದ ಬಗ್ಗೆ ಹೆದರಿಸಬೇಕು.

ನಾನು ಹಿಂದೆ ಹೇಳಿದ ಹಾಗೆ ಹಝ್ರತ್ ಪೈಗಂಬರರ ﷺ ಸುಂದರ ಚಿತ್ರವನ್ನು ಲೋಕದ ಮುಂದೆ ಇರಿಸಬೇಕು. ಸರ್ವಶಕ್ತನಾದ ಅಲ್ಲಾಹನ ಮುಂದೆ ಬಾಗುತ್ತಾ ಇರಬೇಕು. ಅವನಿಂದ ಸಹಾಯ ಯಾಚಿಸಬೇಕು. ಆ ಜನರು ಶಿಕ್ಷೆಯ ಕಡೆಗೆ ಸಾಗುತ್ತಾ ಇದ್ದರೆ ತನ್ನ ಮತ್ತು ತನಗೆ ಪ್ರಿಯರಾದವರ ಬಗ್ಗೆ ಅಭಿಮಾನ ಹೊಂದಿದ ಅಲ್ಲಾಹನು ತನ್ನ ಕೋಪದ ವೈಭವದೊಂದಿಗೆ ಆಗಮಿಸುವ ಶಕ್ತಿ ಹೊಂದಿದ್ದಾನೆ. ಅವನು ಎಲ್ಲ ಶಕ್ತಿಗಳ ಒಡೆಯನಾಗಿದ್ದಾನೆ. ಮನುಷ್ಯರು ನಿರ್ಮಿಸಿದ ನಿಯಮಗಳಿಗೆ ಅವನು ಅಧೀನನಾಗಿಲ್ಲ. ಅವನು ಉದ್ದೇಶಿಸುವುದನ್ನೆಲ್ಲ ಮಾಡಲು ಸಮರ್ಥನಾಗಿದ್ದಾನೆ. ಅವನ ಬೀಸುಗಲ್ಲು ಅರೆಯಲು ಪ್ರಾರಂಭಿಸಿದರೆ ಮನುಷ್ಯನ ಯೋಚನೆ ಅದನ್ನು ಗ್ರಹಿಸಲು ಶಕ್ತವಾಗಲಾರದು. ಯಾರಿಗೂ ಅದರಿಂದ ಪಾರಾಗಲು ಸಾಧ್ಯವಾಗದು.

ಪಶ್ಚಿಮದ ಕೆಲವು ಜನರ ಅಥವಾ ಕೆಲವು ದೇಶಗಳ ಈ ವರ್ತನೆಗಳನ್ನು ಕಂಡು ಅಹ್ಮದಿಯರು ಅಲ್ಲಾಹನ ಮುಂದೆ ಇನ್ನಷ್ಟು ಬಾಗುತ್ತಾ ಇರಬೇಕಾಗಿದೆ. ಅಲ್ಲಾಹನ ಮಸೀಹರು ಯುರೋಪಿಗೂ ಎಚ್ಚರಿಕೆ ನೀಡಿದ್ದಾರೆ. ಅಮೇರಿಕಕ್ಕೂ ಎಚ್ಚರಿಕೆ ನೀಡಿದ್ದಾರೆ. ಈ ಭೂಕಂಪಗಳು, ಈ ಚಂಡಮಾರುತಗಳು, ಈ ವಿಪತ್ತುಗಳು ಲೋಕದಲ್ಲಿ ಬರುತ್ತಿರುವುದು ಕೇವಲ ಏಶಿಯಾ ದೇಶಗಳಿಗೆ ಸೀಮಿತವಾಗಿರಲಾರದು. ಅಮೇರಿಕ ಅದರ ಒಂದು ದೃಶ್ಯ ಕಂಡಿದೆ. "ಓ ಯುರೋಪು, ನೀನು ಸಹ ಸುರಕ್ಷಿತವಲ್ಲ. ದೇವನಿಗೆ ಭಯಪಡು. ಅವನ ಅಭಿಮಾನವನ್ನು ಕೆಣಕದಿರು."

ಇದರೊಂದಿಗೆ ನಾನು ಮುಸ್ಲಿಮರೊಂದಿಗೆ ಮತ್ತು ಮುಸ್ಲಿಮರೆಂದು ಹೇಳಿಕೊಳ್ಳುವವರೊಂದಿಗೆ ಹೇಳಲು ಬಯಸುತ್ತೇನೆ: ನಿಮ್ಮ ವರ್ತನೆಗಳನ್ನು ಸರಿಪಡಿಸಿರಿ. ನೀವು ಹೇಗೆ ವರ್ತಿಸಬೇಕು ಮತ್ತು ಹೇಗೆ ಪ್ರತಿಕ್ರಿಯೆ ನೀಡಬೇಕೆಂದರೆ, ಹಝ್ರತ್ ಪೈಗಂಬರರ ﷺ ಮಹತ್ತರ ಸ್ಥಾನವನ್ನು ಮತ್ತು ಅವರ ಸೌಂದರ್ಯವನ್ನು ಲೋಕದ ಮುಂದಿರಿಸಬೇಕು. ಅವರಿಗೆ ತೋರಿಸಬೇಕು. ಒಬ್ಬ ಸತ್ಯ ವಿಶ್ವಾಸಿಯ ಪ್ರತಿಕ್ರಿಯೆ ಹೀಗೆಯೇ ಆಗಿರಬೇಕು.

(ಜುಮುಅ ಖುತ್‌ಬ 17–02–2006)

## ಮುಸ್ಲಿಮೇತರರೊಂದಿಗೆ ಉತ್ತಮ ವರ್ತನೆ ಬಗ್ಗೆ ಇಸ್ಲಾಮ್ ಧರ್ಮದ ಸುಂದರ ಉಪದೇಶಗಳು

ಪವಿತ್ರ ಖುರ್‌ಆನ್‌ನಲ್ಲಿ ವಿವಿಧ ಸ್ಥಳಗಳಲ್ಲಿ ಇಸ್ಲಾಮ್ ಧರ್ಮದ ಸುಂದರ ತತ್ವಗಳ ಬಗ್ಗೆ ಪ್ರತಿಪಾದಿಸಲಾಗಿದೆ. ಅವುಗಳಲ್ಲಿ ಮುಸ್ಲಿಮೇತರರೊಂದಿಗೆ ಉತ್ತಮವಾಗಿ ವರ್ತಿಸಬೇಕೆಂದೂ ಅವರ ಹಕ್ಕುಗಳ ಬಗ್ಗೆ ಕಾಳಜಿ ಹೊಂದಬೇಕೆಂದೂ ಅವರೊಂದಿಗೆ ನ್ಯಾಯಪೂರ್ಣವಾಗಿ ವರ್ತಿಸಬೇಕೆಂದೂ ಅವರ ಧರ್ಮದ ಮೇಲೆ ಯಾವ ಬಲಾತ್ಕಾರವನ್ನೂ ಮಾಡಬಾರದೆಂದೂ ಧರ್ಮಕ್ಕೆ ಸಂಬಂಧಿಸಿ ಯಾವ ಕಾಠಿಣ್ಯವನ್ನೂ ಮಾಡಬಾರದೆಂದೂ ಅನೇಕ ಆಜ್ಞೆಗಳನ್ನು ಮುಸ್ಲಿಮರಿಗೆ ಮುಸ್ಲಿಮೇತರರ ಬಗ್ಗೆ ನೀಡಲಾಗಿದೆ. ಕೆಲವು ಸಂದರ್ಭಗಳಲ್ಲಿ ಯುದ್ಧ ಮಾಡಲು ಅನುಮತಿಯನ್ನು ನೀಡಲಾಗಿದೆ. ಆದರೆ ಹಾಗೆ ಯುದ್ಧ ಮಾಡಬೇಕಾದುದು ಶತ್ರು ಯುದ್ಧವನ್ನು ಮೊದಲು ಪ್ರಾರಂಭಿಸಿದರೆ, ಒಪ್ಪಂದಗಳನ್ನು ಮುರಿದರೆ, ನ್ಯಾಯವನ್ನು ಹತ್ಯೆ ಮಾಡಿದರೆ ಮತ್ತು ದೌರ್ಜನ್ಯದಲ್ಲಿ ಮಿತಿ ಮೀರಿದರೆ ಮಾತ್ರವಾಗಿದೆ. ಇಂತಹ ಸಂದರ್ಭಗಳಲ್ಲಿಯೂ ಯಾವುದೇ ದೇಶದ ಯಾವುದೇ ಗುಂಪಿಗೆ ಯುದ್ಧ ಪ್ರಾರಂಭಿಸುವ ಹಕ್ಕು ಇರುವುದಿಲ್ಲ. ಸರಕಾರ ಅದರ ಬಗ್ಗೆ ಏನು ಮಾಡಬೇಕು ಎಂದು ನಿರ್ಧರಿಸಬೇಕು. ದೌರ್ಜನ್ಯವನ್ನು ಕೊನೆಗೊಳಿಸಲು ಸರಕಾರವೇ ನಿರ್ಧರಿಸಬೇಕು. ಪ್ರತಿಯೊಂದು ಜಿಹಾದಿ ಸಂಘಟನೆ ಎದ್ದು ನಿಂತು ಈ ಕೆಲಸ ಪ್ರಾರಂಭಿಸಬಾರದು.

## ಮಕ್ಕದ ಅವಿಶ್ವಾಸಿಗಳು ಮತ್ತು ಇಸ್ಲಾಮಿನ ಶತ್ರುಗಳು ಮಾಡಿದ ದೌರ್ಜನ್ಯಗಳ ವಿರುದ್ಧ ಹಝ್ರತ್ ಮುಹಮ್ಮದ್ ಪೈಗಂಬರ್ ﷺ ಪ್ರಕಟಿಸಿದ ವೈಭವಶಾಲಿ ಉತ್ತಮ ನಡೆವಳಿಕೆ

ಹಝ್ರತ್ ಮುಹಮ್ಮದ್ ಪೈಗಂಬರರ ﷺ ಕಾಲದಲ್ಲಿ ಸಹ ಯುದ್ಧ ಪ್ರಾರಂಭ ಮಾಡುವ ವಿಶಿಷ್ಟ ಸಂದರ್ಭಗಳಲ್ಲಿ ಮುಸ್ಲಿಮರು ಪ್ರತಿರೋಧಾತ್ಮಕ ಯುದ್ಧ ಮಾಡಲು ನಿರ್ಬಂಧಿತರಾದರು. ಆದರೆ ಇಂದಿನ ಕಾಲದ ಜಿಹಾದಿ ಸಂಘಟನೆಗಳು ಯಾವುದೇ ನ್ಯಾಯಬದ್ಧ ಕಾರಣಗಳಿಲ್ಲದೆ, ಯಾವುದೇ ನ್ಯಾಯಬದ್ಧ ಅಧಿಕಾರವಿಲ್ಲದೆ ತಮ್ಮ ಯುದ್ಧ ಪ್ರೇಮಿ ಘೋಷಣೆಗಳಿಂದ ಮತ್ತು ಕೃತ್ಯಗಳಿಂದ ಮುಸ್ಲಿಮೇತರರಿಗೆ ಸಂದರ್ಭ ಒದಗಿಸಿ ಕೊಡುತ್ತವೆ ಮತ್ತು ಅವರು ಧೈರ್ಯದಿಂದಲೂ ಅತ್ಯಂತ ಹಟಮಾರಿತನದಿಂದಲೂ

ನಿರ್ಲಜ್ಜೆಯಿಂದಲೂ ಹಝ್‌ರತ್ ಮುಹಮ್ಮದ್ ಪೈಗಂಬರರ ﷺ ಪರಿಶುದ್ಧ ವ್ಯಕ್ತಿತ್ವದ ಬಗ್ಗೆ ಅವಿವೇಕಭರಿತ ದೂಷಣೆ ಮಾಡುತ್ತಿರುತ್ತಾರೆ. ಆದರೆ ದಯಾನಿಧಿಯಾಗಿದ್ದ, ಮಾನವರೆಲ್ಲರ ಹಿತೈಷಿಯಾಗಿದ್ದ, ಮಾನವರ ಹಕ್ಕುಗಳ ಮಹತ್ವಶಾಲಿ ಸಂರಕ್ಷಕರಾಗಿದ್ದ ಹಝ್‌ರತ್ ಮುಹಮ್ಮದ್ ಪೈಗಂಬರರ ﷺ ಸ್ಥಿತಿ ಹೇಗಿತ್ತೆಂದರೆ, ಅವರು ಯುದ್ಧ ಕಾಲದಲ್ಲಿ ಕೂಡ ಶತ್ರುಗಳಿಗೆ ಅನುಕೂಲಕರವಾದ ಪರಿಸ್ಥಿತಿ ಉಂಟುಮಾಡುವ ಸಂದರ್ಭವನ್ನು ಬಿಟ್ಟು ಬಿಡುತ್ತಿರಲಿಲ್ಲ. ಅವರ ಜೀವಿತದ ಪ್ರತಿಯೊಂದು ಕೆಲಸ, ಅವರ ಜೀವಿತದ ಕ್ಷಣ ಕ್ಷಣಗಳು ಅವರು ದಯೆಯ ಸಾಕಾರ ರೂಪ ಎಂಬ ಬಗ್ಗೆ ಸಾಕ್ಷ್ಯ ನೀಡುತ್ತಿದ್ದುವು. ಅವರ ಎದೆಯಲ್ಲಿ ಎಂತಹ ಹೃದಯ ಮಿಡಿಯುತ್ತಿತ್ತೆಂದರೆ, ಅದಕ್ಕಿಂತ ಮಿಗಿಲಾಗಿ ಯಾವುದೇ ಹೃದಯ ದಯೆಯ ಉನ್ನತ ಮಟ್ಟ ಮತ್ತು ಆವಶ್ಯಕತೆಗಳನ್ನು ಈಡೇರಿಸಲು ಅವರ ಹಾಗೆ ಸಾಧ್ಯವಿರಲಿಲ್ಲ. ಶಾಂತಿ ಕಾಲದಲ್ಲೂ ಯುದ್ಧ ಕಾಲದಲ್ಲೂ ಮನೆಯಲ್ಲೂ ಮನೆಯ ಹೊರಗೆಯೂ ನಿತ್ಯ ವರ್ತನೆಗಳಲ್ಲೂ ಅನ್ಯ ಧರ್ಮದವರೊಂದಿಗೆ ಮಾಡಿದ ಒಪ್ಪಂದಗಳಲ್ಲೂ ಅವರು ಮನಸ್ಸಾಕ್ಷಿಯ ಸ್ವಾತಂತ್ರ್ಯ, ಧಾರ್ಮಿಕ ಸೌಹಾರ್ದದ ಉನ್ನತ ಮಟ್ಟದ ಉದಾಹರಣೆಗಳನ್ನು ಸ್ಥಾಪಿಸಿದರು. ಮಹಾ ಜಯಶಾಲಿಯಾಗಿ ಮಕ್ಕ ನಗರವನ್ನು ಪ್ರವೇಶಿಸಿದಾಗ ಅವರು ಸೋಲಿಸಿದ ಜನರೊಂದಿಗೆ ಕ್ಷಮೆ ಮತ್ತು ದಯೆಯೊಂದಿಗೆ ವರ್ತಿಸಿದರು. ಅಲ್ಲಿ ಧಾರ್ಮಿಕ ಸ್ವಾತಂತ್ರ್ಯದ ಹಕ್ಕು ಸಹ ಪೂರ್ಣವಾಗಿ ನೀಡಲಾಯಿತು. **ಲಾ ಇಕ್ರಾಹ ಫಿದ್ದೀನಿ** "ಧರ್ಮದಲ್ಲಿ ಯಾವುದೇ ರೀತಿಯ ಬಲಾತ್ಕಾರವಿಲ್ಲ" (ಪವಿತ್ರ ಖುರ್‌ಆನ್ 2:257) ಎಂಬ ಆಜ್ಞೆಯನ್ನು ಪಾಲಿಸುವ ಉನ್ನತ ಉತ್ತಮ ಉದಾಹರಣೆ ಪ್ರಕಟಿಸಿದರು. ಅವರು ಹೇಳಿದರು: "ಧರ್ಮ ನಿಮ್ಮ ಹೃದಯಕ್ಕೆ ಸಂಬಂಧಿಸಿದುದಾಗಿದೆ. ನೀವು ಸತ್ಯಧರ್ಮ ಅವಲಂಬಿಸಬೇಕೆಂದು ನಾನು ಇಚ್ಛಿಸುತ್ತೇನೆ. ನೀವು ನಿಮ್ಮ ಇಹಪರ ಜೀವಿತವನ್ನು ಸರಿಪಡಿಸಬೇಕು. ನೀವು ಕ್ಷಮಿಸಲ್ಪಡುವಂತಹ ಕೆಲಸ ಮಾಡಬೇಕು. ಆದರೆ ಅದರ ಬಗ್ಗೆ ಯಾವುದೇ ಬಲತ್ಕಾರವಿಲ್ಲ." ಹಝ್‌ರತ್ ಮುಹಮ್ಮದ್ ಪೈಗಂಬರರ ﷺ ಜೀವಿತ ಸೌಹಾರ್ದತೆ, ಧಾರ್ಮಿಕ ಸ್ವಾತಂತ್ರ್ಯ, ಮನಸ್ಸಾಕ್ಷಿ ಸ್ವಾತಂತ್ರ್ಯದ ಅಸಂಖ್ಯಾತ ಪ್ರಕಾಶಮಾನವಾದ ಉದಾಹರಣೆಗಳಿಂದ ತುಂಬಿವೆ. ಅವುಗಳಲ್ಲಿ ಕೆಲವನ್ನು ನಾನು ಪ್ರಸ್ತಾಪಿಸುತ್ತೇನೆ.

ಪ್ರವಾದಿ ಎಂದು ವಾದಿಸಿದ ನಂತರದ ಹದಿಮೂರು ವರ್ಷಗಳ ಕಾಲದ ಜೀವಿತದ ಬಗ್ಗೆ ಯಾರಿಗೆ ತಾನೆ ತಿಳಿದಿಲ್ಲ. ಅದೆಷ್ಟು ಕಷ್ಟಕರವಾದ

ಕಾಲವಾಗಿತ್ತು. ಹಝ್ರತ್ ಪೈಗಂಬರರೂ ﷺ ಅವರ ಶಿಷ್ಯರೂ ಎಷ್ಟು ದುಃಖಕರವಾದ, ಕಷ್ಟಕರವಾದ ರೀತಿಯಲ್ಲಿ ಜೀವಿಸಿದರು! ಮಧ್ಯಾಹ್ನದ ಹೊತ್ತು ಬಿಸಿಲಿನಿಂದ ಬೆಂದ ಮರಳಿನಲ್ಲಿ ಸತ್ಯವಿಶ್ವಾಸಿಗಳನ್ನು ಮಲಗಿಸಲಾಯಿತು. ಬಿಸಿ ಕಲ್ಲುಗಳನ್ನು ಅವರ ಎದೆಯ ಮೇಲಿರಿಸಲಾಯಿತು. ಕೊರಡೆಗಳಿಂದ ಹೊಡೆಯಲಾಯಿತು. ಮಹಿಳೆಯರ ಕಾಲುಗಳನ್ನು ಸೀಳಿ ಕೊಲ್ಲಲಾಯಿತು. ಅನೇಕರನ್ನು ಕೊಂದು ಹುತಾತ್ಮರನ್ನಾಗಿ ಮಾಡಲಾಯಿತು. ಹಝ್ರತ್ ಪೈಗಂಬರರ ﷺ ಮೇಲೆ ಸಹ ವಿವಿಧ ರೀತಿಗಳಲ್ಲಿ ದೌರ್ಜನ್ಯ ಮಾಡಲಾಯಿತು. ಸಾಷ್ಟಾಂಗ ಪ್ರಣಾಮ ಮಾಡುತ್ತಿದ್ದಾಗ ಕೆಲವು ಸಾರಿ ಒಂಟೆಯ ಭಾರವಾದ ಜಠರವನ್ನೂ ಕರುಳುಗಳನ್ನೂ ಅವರ ಬೆನ್ನ ಮೇಲಿರಿಸಿದಾಗ ಅದರ ಭಾರದಿಂದ ಅವರಿಗೆ ಏಳಲು ಸಾಧ್ಯವಾಗುತ್ತಿರಲಿಲ್ಲ. ತಾಯಿಫ್‌ಗೆ ಹೋದಾಗ ಪುಂಡ ಹುಡುಗರು ಅವರಿಗೆ ಕಲ್ಲೆಸೆದು ಬೈದರು. ಹುಡುಗರ ನಾಯಕರು ಅವರನ್ನು ಉತ್ತೇಜಿಸುತ್ತಿದ್ದರು. ಹಝ್ರತ್ ಪೈಗಂಬರರು ﷺ ಎಷ್ಟು ಗಾಯಗೊಂಡರೆಂದರೆ ಅವರು ತಲೆಯಿಂದ ಕಾಲಿನ ತನಕ ರಕ್ತಸಿಕ್ತರಾದರು. ತಲೆ ಮೇಲಿನಿಂದ ಹರಿದ ರಕ್ತ ಪಾದಗಳಿಗೂ ತಲಪಿತು. ಅನಂತರ ಶಅಬ್ ಅಬೀ ತಾಲಿಬ್‌ನಲ್ಲಿ ಹಝ್ರತ್ ಪೈಗಂಬರರನ್ನೂ ﷺ ಅವರ ಕುಟುಂಬವನ್ನೂ ಅವರ ಅನುಯಾಯಿಗಳನ್ನೂ ಅನೇಕ ವರ್ಷ ದಿಗ್ಬಂಧನಾವಸ್ಥೆಯಲ್ಲಿ ಇಡಲಾಯಿತು. ತಿನ್ನಲು ಏನೂ ಸಿಗುತ್ತಿರಲಿಲ್ಲ. ಕುಡಿಯಲು ಸಹ ಏನೂ ಇರಲಿಲ್ಲ. ಮಕ್ಕಳು ಹಸಿವೆಯಿಂದಲೂ ಬಾಯಾರಿಕೆಯಿಂದಲೂ ಅಳುತ್ತಿದ್ದರು. ಒಬ್ಬ ಶಿಷ್ಯರಿಗೆ ರಾತ್ರಿ ಹೊತ್ತು ಅವರ ಪಾದದಡಿಯಲ್ಲಿ ಒಂದು ಮೃದು ವಸ್ತು ಇರುವುದಾಗಿ ತೋಚಿದಾಗ ಕೂಡಲೇ ಆ ಪದಾರ್ಥವನ್ನು ಎತ್ತಿಕೊಂಡು, ಪ್ರಾಯಶಃ ಅದು ತಿನ್ನುವ ವಸ್ತುವಾಗಿರಬಹುದೆಂದು ಭಾವಿಸಿ ತಿಂದರು. ಹಸಿವೆಯಿಂದ ಅವರೆಲ್ಲರೂ ಬಹಳ ಬಳಲಿ ಹೋದರು. ಈ ಪರಿಸ್ಥಿತಿಯಿಂದ ನಿರ್ಬಂಧಿತರಾಗಿ ಮದೀನಕ್ಕೆ ವಲಸೆ ಹೋದರು. ಮದೀನದಲ್ಲಿ ಸಹ ಶತ್ರುಗಳು ಬೆನ್ನಟ್ಟಿದರು. ಆಕ್ರಮಣ ನಡೆಸಿದರು. ಮದೀನದ ನಿವಾಸಿಗಳಾದ ಯಹೂದಿಯರನ್ನು ಹಝ್ರತ್ ಪೈಗಂಬರರ ﷺ ವಿರುದ್ಧ ಉತ್ತೇಜಿಸಿದರು.

ನಾನು ಸಂಕ್ಷಿಪ್ತವಾಗಿ ವಿವರಿಸಿದ ದೌರ್ಜನ್ಯಗಳನ್ನು ಅನುಭವಿಸಿದವರು ಯುದ್ಧ ಮಾಡಿ ಜಯಿಸಿ ಪ್ರತೀಕಾರ ಮಾಡುವ ಸಂದರ್ಭ ದೊರಕಿದರೆ

ತಾವು ಅನುಭವಿಸಿದ ದೌರ್ಜನ್ಯಕ್ಕೆ ಸೇಡು ತೀರಿಸಿಕೊಳ್ಳಲು ಮತ್ತು ದೌರ್ಜನ್ಯಕ್ಕೆ ಪ್ರತಿಯಾಗಿ ದೌರ್ಜನ್ಯ ಮಾಡಲು ಪ್ರಯತ್ನಿಸುತ್ತಾರೆ. ಯುದ್ಧದಲ್ಲಿ ಎಲ್ಲವೂ ಅನುಮತಿಸಲಾಗಿದೆ ಎಂದು ಸಹ ಹೇಳುತ್ತಾರೆ.

ಆದರೆ ಹಝ್‌ರತ್ ಮುಹಮ್ಮದ್ ಪೈಗಂಬರ್ ﷺ ದಯೆ ಮತ್ತು ಮೃದು ವರ್ತನೆಯ ಉನ್ನತ ಉದಾಹರಣೆಯನ್ನು ಸ್ಥಾಪಿಸಿದರು. ಅವರು ಮಕ್ಕವನ್ನು ಬಿಟ್ಟು ಹೆಚ್ಚು ವರ್ಷಗಳಾಗಿರಲಿಲ್ಲ. ಎಲ್ಲ ಕಷ್ಟಗಳ ಗಾಯ ಈಗಲೂ ಒಣಗಿರಲಿಲ್ಲ. ಅವರಿಗೆ ತಮಗೆ ಉಂಟಾದ ತೊಂದರೆಗಳಿಗಿಂತ ತಮ್ಮ ಅನುಯಾಯಿಗಳಿಗೆ ಉಂಟಾದ ಕಷ್ಟಗಳ ಬಗ್ಗೆ ಹೆಚ್ಚು ಕಾಳಜಿ ಇತ್ತು. ಹೀಗಿದ್ದರೂ ಅವರು ಇಸ್ಲಾಮ್ ಧರ್ಮದ ಉಪದೇಶಗಳನ್ನೂ ಸಿದ್ಧಾಂತಗಳನ್ನೂ ಉಲ್ಲಂಘಿಸಿ ವರ್ತಿಸಲಿಲ್ಲ. ಅವರ ನೈತಿಕ ಗುಣಗಳ ಉನ್ನತ ಮಟ್ಟ ಇಸ್ಲಾಮ್ ಧರ್ಮ ತತ್ವಗಳಿಗೆ ಅನುಸಾರವಾಗಿತ್ತು. ಅದಕ್ಕೆ ಅವರು ಭಂಗಪಡಿಸಲಿಲ್ಲ. ಈಗ ನೀವು ನೋಡಿರಿ – ಕೆಲವು ಪಾಶ್ಚಾತ್ಯ ದೇಶಗಳು ಅನ್ಯ ದೇಶಗಳ ವಿರುದ್ಧ ಯುದ್ಧ ಮಾಡುವಾಗ ಅವರು ಏನೆಲ್ಲ ಮಾಡುತ್ತಾರೆ! ಆದರೆ ಇದರೆದುರಿಗೆ ಹಝ್‌ರತ್ ಮುಹಮ್ಮದ್ ಪೈಗಂಬರರ ﷺ ನಡೆವಳಿಕೆಗಳನ್ನು ನೋಡಿರಿ. ಚರಿತ್ರೆಯಲ್ಲಿ ಒಂದು ಘಟನೆಯನ್ನು ಹೀಗೆ ವಿವರಿಸಲಾಗಿದೆ:

ಬದ್ರ್ ಯುದ್ಧದ ಕಾಲದಲ್ಲಿ ಇಸ್ಲಾಮೀ ಸೈನ್ಯ ತಂಗುದಾಣವಾಗಿ ಆಯ್ಕೆ ಮಾಡಿದ ಸ್ಥಳ ಉತ್ತಮವಾಗಿರಲಿಲ್ಲ. ಆಗ ಒಬ್ಬ ಶಿಷ್ಯರಾದ ಹುಬಾಬ್ ಬಿನ್ ಮುನ್‌ಝಿರ್(ರ) ಹಝ್‌ರತ್ ಮುಹಮ್ಮದ್ ಪೈಗಂಬರರೊಂದಿಗೆ ﷺ ಹೀಗೆ ನಿವೇದಿಸಿದರು: “ತಾವು ತಂಗುದಾಣವಾಗಿ ಆಯ್ಕೆ ಮಾಡಿದ ಸ್ಥಳ ತಮಗೆ ದೊರೆತ ದೇವಸಂದೇಶವಾಣಿಯ ಪ್ರಕಾರ ಅಲ್ಲಾಹನೇ ತಮಗೆ ತೋರಿಸಿಕೊಟ್ಟ ಸ್ಥಳವಾಗಿದೆಯೋ ಅಥವಾ ತಮ್ಮ ಸ್ವಂತ ಆಯ್ಕೆಯ ಸ್ಥಳ ಅದಾಗಿದೆಯೋ? ಸೈನಿಕ ಕಾರ್ಯನಿರ್ವಹಣೆಯ ದೃಷ್ಟಿಯಲ್ಲಿ ಈ ಸ್ಥಳ ಅನುಯೋಜ್ಯವಾಗಿದೆ ಎಂದು ತಾವು ಭಾವಿಸುತ್ತಿರುವಿರೋ?” ಆಗ ಹಝ್‌ರತ್ ಮುಹಮ್ಮದ್ ಪೈಗಂಬರ್ ﷺ ಹೀಗೆ ಉತ್ತರ ನೀಡಿದರು: “ಸೈನ್ಯ ಕಾರ್ಯಾಚರಣೆಗೋಸ್ಕರ ಈ ಸ್ಥಳ ಉತ್ತಮವೆಂದು ನಾನು ಭಾವಿಸುತ್ತೇನೆ. ಈ ಸ್ಥಳ ಎತ್ತರ ಪ್ರದೇಶದಲ್ಲಿದ್ದು ಉತ್ತಮವಾಗಿದೆ.” ಆಗ ಹುಬಾಬ್(ರ) ಹೀಗೆ ನಿವೇದಿಸಿದರು: “ಈ ಸ್ಥಳ ಯುದ್ಧ ವ್ಯೂಹ ದೃಷ್ಟಿಯಿಂದ ಉತ್ತಮವಲ್ಲ. ನಾವು ಇಲ್ಲಿಂದ ಹೋಗಿ ನೀರಿನ ಝರಿ ಇರುವ ಸ್ಥಳವನ್ನು

ಸ್ವಾಧೀನಪಡಿಸುವ. ಅಲ್ಲಿ ಒಂದು ಕೊಳ ನಿರ್ಮಿಸಿ ಅಲ್ಲಿ ನಾವು ಯುದ್ಧ ಮಾಡುವೆವು. ಆಗ ನಮಗೆ ನೀರು ದೊರಕುವುದು. ಶತ್ರುಗಳಿಗೆ ಕುಡಿಯಲು ನೀರು ಸಿಗಲಾರದು." ಆಗ ಹಝ್ರತ್ ಮುಹಮ್ಮದ್ ಪೈಗಂಬರ್ ﷺ, "ನಾವು ನಿಮ್ಮ ಸಲಹೆ ಅಂಗೀಕರಿಸುತ್ತೇವೆ" ಎಂದು ಹೇಳಿ ಅಲ್ಲಿಂದ ಎಲ್ಲರೂ ಹೊರಟು ಹೊಸ ಸ್ಥಳದಲ್ಲಿ ತಂಗುದಾಣ ಸ್ಥಾಪಿಸಿದರು. ಸ್ವಲ್ಪ ಸಮಯದ ನಂತರ ಅಲ್ಲಿಗೆ ನೀರು ಕುಡಿಯಲು ಖುರೈಶಿಗಳ ಕೆಲವು ಜನರು ಬಂದಾಗ ಹಝ್ರತ್ ಪೈಗಂಬರರ ﷺ ಶಿಷ್ಯರು ಅವರನ್ನು ತಡೆಯಲು ಪ್ರಯತ್ನಿಸಿದರು. ಆಗ ಹಝ್ರತ್ ಮುಹಮ್ಮದ್ ಪೈಗಂಬರ್ ﷺ ಹೇಳಿದರು: "ನೀವು ಅವರನ್ನು ತಡೆಯಬೇಡಿರಿ. ನೀರು ತೆಗೆದುಕೊಂಡು ಹೋಗಲು ಬಿಡಿರಿ." (ಅಸ್ಸೀರತುನ್ನಬವಿಯ್ಯ ಲಿಇಬ್ನು ಹಿಶಾಮ್– ಸಂಪುಟ 2 ಪುಟ 284).

## ಇಸ್ಲಾಮ್ ಖಡ್ಗಬಲದಿಂದಲ್ಲ, ಅದರ ಉತ್ತಮ ನೈತಿಕ ಗುಣಗಳು, ಮನಸ್ಸಾಕ್ಷಿ ಸ್ವಾತಂತ್ರ್ಯ ಮತ್ತು ಧಾರ್ಮಿಕ ಸ್ವಾತಂತ್ರ್ಯದ ಉಪದೇಶಗಳ ಕಾರಣ ಹಬ್ಬಿತು

ಹಝ್ರತ್ ಮುಹಮ್ಮದ್ ಪೈಗಂಬರರ ﷺ ನೈತಿಕ ಗುಣದ ಉನ್ನತ ಮಟ್ಟ ಮೇಲೆ ವಿವರಿಸಿದ ಹಾಗೆ ಇತ್ತು. ಶತ್ರುಗಳು ಸ್ವಲ್ಪ ಕಾಲದ ಹಿಂದೆ ಮುಸ್ಲಿಮರ ಮಕ್ಕಳಿಗೆ ಕೂಡ ಆಹಾರ ಮತ್ತು ನೀರು ನೀಡುವುದನ್ನು ತಡೆದಿದ್ದರು. ಆದರೆ ಹಝ್ರತ್ ಪೈಗಂಬರ್ ﷺ ಅದನ್ನು ಕಡೆಗಣಿಸಿ, ಶತ್ರು ಸೈನಿಕರು ಕೊಳದಿಂದ ನೀರು ತೆಗೆದುಕೊಂಡು ಹೋಗಲು ಬಂದಾಗ ಆ ಕೊಳದ ಮೇಲೆ ಅವರಿಗೆ ಸ್ವಾಧೀನವಿದ್ದರೂ ಅವರನ್ನು ನೀರು ಸೇದುವುದರಿಂದ ತಡೆಯಲಿಲ್ಲ. ಏಕೆಂದರೆ ಹಾಗೆ ಮಾಡುವುದು ನೈತಿಕ ಗುಣಗಳ ತತ್ವಗಳಿಗೆ ವಿರುದ್ಧವಾಗಿತ್ತು. ಇಸ್ಲಾಮ್ ವಿರುದ್ಧ ಮಾಡಲಾಗುವ ಅತ್ಯಂತ ದೊಡ್ಡ ದೋಷಾರೋಪ ಅದು ಖಡ್ಗಬಲದಿಂದ ಹಬ್ಬಿತೆಂದಾಗಿದೆ. ಅಲ್ಲಿ ನೀರಿಗೋಸ್ಕರ ಬಂದವರ ಮೇಲೆ ಬಲಪ್ರಯೋಗ ಮಾಡಬಹುದಿತ್ತು. ನೀರು ಬೇಕಾದರೆ ನಮ್ಮ ಶರತ್ತುಗಳಿಗೆ ಒಪ್ಪಿರಿ ಎಂದು ಹೇಳಬಹುದಾಗಿತ್ತು. ಅವಿಶ್ವಾಸಿಗಳು ಅನೇಕ ಯುದ್ಧಗಳಲ್ಲಿ ಹೀಗೆಯೇ ವರ್ತಿಸುತ್ತಿದ್ದರು. ಆದರೆ ಹಝ್ರತ್ ಪೈಗಂಬರ್ ﷺ ತನ್ನ ಶತ್ರುಗಳು ಮಾಡಿದಂತೆ ವರ್ತಿಸಲಿಲ್ಲ. ಇಲ್ಲಿ ಹೀಗೆ ಸಹ ಹೇಳಬಹುದಾಗಿದೆ: ಆ ಸಮಯದಲ್ಲಿ ಮುಸ್ಲಿಮರು ಶಕ್ತಿಶಾಲಿಗಳಾಗಿರಲಿಲ್ಲ; ಅವರು ಬಲಹೀನರಾಗಿದ್ದರು; ಪ್ರಾಯಶಃ

ಯುದ್ಧದಿಂದ ರಕ್ಷಣೆ ಪಡೆಯಲು ಅವರಿಗೆ ಉಪಕಾರ ಮಾಡುವ ಪ್ರಯತ್ನ ಮಾಡಲಾಗಿತ್ತು. ಆದರೆ ಹೀಗೆ ಹೇಳುವುದು ತಪ್ಪಾಗಿದೆ. ಮುಸ್ಲಿಮರಲ್ಲಿ ಪ್ರತಿಯೊಬ್ಬರಿಗೆ ಅವಿಶ್ವಾಸಿಗಳು ತಮ್ಮ ರಕ್ತವನ್ನು ಕುಡಿಯುವ ದಾಹ ಹೊಂದಿದ್ದಾರೆಂದು ತಿಳಿದಿತ್ತು. ಮುಸ್ಲಿಮರನ್ನು ಕಂಡ ಕೂಡಲೆ ಅವರ ಕಣ್ಣುಗಳಿಗೆ ರಕ್ತ ಹರಿದು ಬರುತ್ತಿತ್ತು. ಆದುದರಿಂದ ಅವಿಶ್ವಾಸಿಗಳ ಬಗ್ಗೆ ಶುಭ ಪ್ರತೀಕ್ಷೆ ಮುಸ್ಲಿಮರಲ್ಲಿ ಯಾರಿಗೂ ಇರಲಿಲ್ಲ. ಹಝ್ರತ್ ಮುಹಮ್ಮದ್ ಪೈಗಂಬರರಿಗೆ ﷺ ಇಂತಹ ಶುಭ ಆಕಾಂಕ್ಷೆಯ ಪ್ರಶ್ನೆಯೇ ಉದಿಸುತ್ತಿರಲಿಲ್ಲ. ಹಝ್ರತ್ ಪೈಗಂಬರ್ ﷺ ಎಲ್ಲವನ್ನೂ ಮಾಡಿದುದು, ಅವರು ಸಹಾನುಭೂತಿ ತೋರಿಸಿದುದು, ಅವರು ದಯೆಯಿಂದ ತುಂಬಿದವರಾದ ಕಾರಣದಿಂದಾಗಿದೆ. ಅವರು ಮಾನವೀಯ ಮೌಲ್ಯಗಳ ಸಂರಕ್ಷಕರಾಗಿದ್ದರು. ಅವರೇ ಇಂತಹ ಮೌಲ್ಯಗಳನ್ನು ಗುರುತಿಸಲು ಉಪದೇಶಿಸಿದ್ದರು.

## ಹಝ್ರತ್ ಪೈಗಂಬರರ ﷺ ನ್ಯಾಯನಿಷ್ಠೆ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯದ ಮಾದರಿ

ನೀವು ಇಸ್ಲಾಮಿನ ಒಬ್ಬ ಶತ್ರುವಿಗೆ ಸಂಬಂಧಿಸಿದ ಸಂಭವವನ್ನು ನೋಡಿರಿ. ಅವನನ್ನು ಕೊಲ್ಲಬೇಕೆಂದು ಆಜ್ಞಾಪಿಸಲಾಗಿತ್ತು. ಅವನನ್ನು ಹಝ್ರತ್ ಪೈಗಂಬರ್ ﷺ ಕ್ಷಮಿಸಿದರು. ಮಾತ್ರವಲ್ಲ, ಮುಸ್ಲಿಮರ ಜೊತೆಯಲ್ಲಿ ಜೀವಿಸುವಾಗ ತನ್ನ ಸ್ವಂತ ಧರ್ಮವನ್ನು ಅನುಷ್ಠಿಸಲು ಅನುಮತಿ ನೀಡಿದರು. ಈ ವಿಷಯಕ್ಕೆ ಸಂಬಂಧಿಸಿ ಹೀಗೆ ವರದಿಯಾಗಿದೆ:

ಅಬೂಜಹಲನ ಪುತ್ರ ಇಕ್ರಿಮ ತನ್ನ ಪಿತನ ಹಾಗೆ ಹಝ್ರತ್ ಮುಹಮ್ಮದ್ ಪೈಗಂಬರರ ﷺ ವಿರುದ್ಧ ಯುದ್ಧ ಮಾಡುತ್ತಾ ಇದ್ದನು. ಮಕ್ಕವನ್ನು ಹಝ್ರತ್ ಮುಹಮ್ಮದ್ ಪೈಗಂಬರ್ ﷺ ಜಯಿಸಿದಾಗ ಎಲ್ಲರಿಗೂ ಕ್ಷಮೆ ನೀಡುವುದಾಗಿ ಘೋಷಿಸಿದ್ದರೂ ಇಕ್ರಿಮ ಕಳ್‌ಬದ ವಠಾರದಲ್ಲಿ ರಕ್ತಪಾತ ಮಾಡಿದ್ದನು. ಅವನು ತನ್ನ ಯುದ್ಧಾಪರಾಧದ ಕಾರಣ ಕೊಲ್ಲಲ್ಪಡಲು ವಿಧಿಸಲ್ಪಟ್ಟನು. ಮುಸ್ಲಿಮರನ್ನು ಎದುರಿಸಿ ಆಗ ಯಾರಿಗೂ ನಿಲ್ಲಲು ಸಾಧ್ಯವಿರಲಿಲ್ಲ. ಆದುದರಿಂದ ಅವನು ತನ್ನ ಜೀವರಕ್ಷಣೆಗೆ ಯಮನ್‌ಗೆ ಓಡಿ ಹೋದನು. ಅವನ ಪತ್ನಿ ಹಝ್ರತ್ ಮುಹಮ್ಮದ್ ಪೈಗಂಬರರೊಂದಿಗೆ ﷺ, ತನ್ನ ಪತಿಯನ್ನು ಕ್ಷಮಿಸಬೇಕೆಂದು

ಬೇಡಿಕೊಂಡಳು. ಆಗ ಹಝ್‌ರತ್ ಪೈಗಂಬರರು ﷺ ದಯೆದೋರಿ ಅವನನ್ನು ಕ್ಷಮಿಸಿದರು. ಆಕೆ ತನ್ನ ಪತಿಯನ್ನು ಕರೆದುಕೊಂಡು ಬರಲು ಅವನ ಸಮೀಪಕ್ಕೆ ಹೋದಾಗ ತನ್ನನ್ನು ಕ್ಷಮಿಸಿದುದನ್ನು ನಂಬಲಿಲ್ಲ. ಅವನು ಹೇಳಿದನು: "ನಾನು ಎಷ್ಟೆಲ್ಲ ದೌರ್ಜನ್ಯ ಮಾಡಿದ್ದೇನೆ. ಎಷ್ಟೆಲ್ಲ ಮುಸ್ಲಿಮರನ್ನು ಕೊಂದಿದ್ದೇನೆ. ನಾನು ಕಡೆ ತನಕ ಯುದ್ಧ ಮಾಡುವುದನ್ನು ನಿಲ್ಲಿಸಿರಲಿಲ್ಲ. ನನಗೆ ಕ್ಷಮೆ ದೊರೆಯುವುದಾದರೂ ಹೇಗೆ?" ಅವನಿಗೆ ಧೈರ್ಯ ನೀಡಿ ಅವನ ಪತ್ನಿ ಅವನನ್ನು ಹಝ್‌ರತ್ ಮುಹಮ್ಮದ್ ಪೈಗಂಬರರ ﷺ ಸಮೀಪಕ್ಕೆ ಕರೆದು ತಂದಳು. ಅವನು ಆಗಮಿಸಿದಾಗ ಅವನೊಂದಿಗೆ ಹಝ್‌ರತ್ ಪೈಗಂಬರ್ ﷺ ಅದ್ಭುತಕರವಾದ ರೀತಿಯಲ್ಲಿ ವರ್ತಿಸಿದರು. ಇಕ್ರಿಮ ವಿರೋಧಿಗಳ ನಾಯಕನಾದುದರಿಂದ ಅವನನ್ನು ಗೌರವಿಸಲು ಎದ್ದು ನಿಂತು ಸ್ವಾಗತಿಸಿದರು ಮತ್ತು ಇಕ್ರಿಮನೊಂದಿಗೆ, ನಾನು ನಿಜವಾಗಿಯೂ ನಿನ್ನನ್ನು ಕ್ಷಮಿಸಿರುವೆನು ಎಂದು ಹೇಳಿದರು. (ಮುಅತ್ತ ಇಮಾಮ್ ಮಾಲಿಕ್)

ಅನಂತರ ಇಕ್ರಿಮ ಕೇಳಿದನು: ನಾನು ಮುಸ್ಲಿಮನಾಗದೆ ನನ್ನ ಪೂರ್ವ ಧರ್ಮದಲ್ಲಿದ್ದರೂ ನೀವು ನನ್ನನ್ನು ಕ್ಷಮಿಸಿದಿರೇನು? ಆಗ ಹಝ್‌ರತ್ ಮುಹಮ್ಮದ್ ಪೈಗಂಬರ್ ﷺ ಹೇಳಿದರು: ಹೌದು, ನಾನು ಕ್ಷಮಿಸಿರುವೆನು. ಆಗ ಇಕ್ರಿಮನ ಹೃದಯ ಇಸ್ಲಾಮಿಗೋಸ್ಕರ ತೆರೆಯಲ್ಪಟ್ಟಿತು. ಅವನು ತಾನಾಗಿಯೇ ಹೇಳಿದನು: "ಓ ಮುಹಮ್ಮದ್ (ﷺ) ತಾವು ಅತ್ಯಂತ ಸಹಿಷ್ಣುತೆಯುಳ್ಳವರೂ ಕರುಣೆಯಿಂದ ತುಂಬಿದವರೂ ಕುಟುಂಬ ಸಂಬಂಧಗಳನ್ನು ದೃಢಪಡಿಸುವವರೂ ಆಗಿರುವಿರಿ."

ಹಝ್‌ರತ್ ಮುಹಮ್ಮದ್ ಪೈಗಂಬರರ ﷺ ಉತ್ತಮ ಸ್ವಭಾವ ಗುಣಗಳ ಅದ್ಭುತ ದೃಶ್ಯವನ್ನು ಕಂಡು ಇಕ್ರಿಮ ಮುಸ್ಲಿಮನಾದನು.

(ಅಸ್ಸೀರತುಲ್ ಹಲ್‌ಬಿಯ್ಯ – ಸಂಪುಟ 3 ಪುಟ 109)

ಇಸ್ಲಾಮ್ ಧರ್ಮ ವ್ಯಾಪಕವಾಗಿ ಹಬ್ಬಿದುದು ಇಂತಹ ಸ್ವಭಾವ ಗುಣಗಳ ಪ್ರಕಟಣೆಗಳ ಮೂಲಕ ಮತ್ತು ಮನಸ್ಸಾಕ್ಷಿ ಸ್ವಾತಂತ್ರ್ಯ ಹಾಗೂ ಧಾರ್ಮಿಕ ಸ್ವಾತಂತ್ರ್ಯವನ್ನು ಅನುಮತಿಸಿದುದರಿಂದಾಗಿದೆ. ಉತ್ತಮ ಸ್ವಭಾವಗುಣ ಮತ್ತು ಧಾರ್ಮಿಕ ಸ್ವಾತಂತ್ರ್ಯದ ಬಾಣವು ಒಂದು ಕ್ಷಣದಲ್ಲಿ ಇಕ್ರಿಮನ ಹಾಗಿರುವವನನ್ನು ಗಾಯಗೊಳಿಸಿತು. ಹಝ್‌ರತ್

ಪೈಗಂಬರ್ ﷺ ಗುಲಾಮರಿಗೂ ಕೈದಿಗಳಿಗೂ ಅವರು ಇಚ್ಛಿಸುವ ಧರ್ಮವನ್ನು ಅಂಗೀಕರಿಸಲು ಅನುಮತಿ ನೀಡಿದ್ದರು. ಜನರಿಗೆ ಇಸ್ಲಾಮ್ ಧರ್ಮದ ಬಗ್ಗೆ ತಿಳುವಳಿಕೆ ಇಲ್ಲದ ಕಾರಣ ಇಸ್ಲಾಮ್ ಧರ್ಮದ ಬಗ್ಗೆ ಜನರಿಗೆ ತಿಳಿಸಲು ಅಲ್ಲಾಹನು ಆಜ್ಞಾಪಿಸಿದ್ದರಿಂದ ಇಸ್ಲಾಮ್ ಧರ್ಮದ ಪ್ರಚಾರ ಮಾಡಲಾಗಿತ್ತು. ಇದು ಸಹ ಅಲ್ಲಾಹನ ಸಾಮೀಪ್ಯ ಅವರಿಗೆ ಸಿಗುವಂತಾಗಲಿ ಎಂಬ ಅಭಿಲಾಷೆಯಿಂದ ಮತ್ತು ಸಹಾನುಭೂತಿಯಿಂದ ಆಗಿತ್ತು.

ಒಬ್ಬ ಕೈದಿಯ ಬಗ್ಗೆ ಹೀಗೆ ವರದಿಯಾಗಿದೆ: ಸಈದ್ ಬಿನ್ ಅಬೀ ಸಈದ್ ಹೀಗೆ ವರದಿ ಮಾಡುತ್ತಾರೆ – ಹಝ್ರತ್ ಅಬೂಹುರೈರ(ರ) ಹೀಗೆ ಹೇಳಿದರು: ಹಝ್ರತ್ ಮುಹಮ್ಮದ್ ಪೈಗಂಬರ್ ﷺ ನಜ್‌ದ್ ಕಡೆಗೆ ಸೈನ್ಯವನ್ನು ಕಳುಹಿಸಿದಾಗ ಬನೂ ಹನೀಫ ಗೋತ್ರದ ಒಬ್ಬ ವ್ಯಕ್ತಿಯನ್ನು ಸೆರೆ ಹಿಡಿದು ತಂದರು. ಅವನ ಹೆಸರು ಸುಮಾಮ ಬಿನ್ ಅಸಾಲ್ ಎಂದಾಗಿತ್ತು. ಸಹಾಬ (ಪೈಗಂಬರರ ಶಿಷ್ಯರು) ಅವನನ್ನು ಮಸ್‌ಜಿದ್ ನಬವಿಯ ಕಂಬಕ್ಕೆ ಕಟ್ಟಿದರು. ಹಝ್ರತ್ ಪೈಗಂಬರ್ ﷺ ಅವನ ಸಮೀಪಕ್ಕೆ ಬಂದು ಕೇಳಿದರು: "ನಿನ್ನೊಂದಿಗೆ ಹೇಗೆ ವರ್ತಿಸಬೇಕೆಂದು ನೀನು ಬಯಸುವೆ?" ಅವನು ಹೇಳಿದನು: "ನಾನು ಶುಭ ಪ್ರತೀಕ್ಷೆ ಹೊಂದಿದ್ದೇನೆ. ನೀವು ನನ್ನನ್ನು ಕೊಂದರೆ ರಕ್ತಪಾತ ನಡೆಸಿದ ಒಬ್ಬನನ್ನು ಕೊಂದಂತೆ ಆಗುವುದು. ನೀವು ನನ್ನನ್ನು ಬಿಡುಗಡೆಗೊಳಿಸಿದರೆ ನಿಮ್ಮ ಉಪಕಾರವನ್ನು ಸ್ಮರಿಸುವವನಾಗಿ ನನ್ನನ್ನು ಕಾಣುವಿರಿ. ನಿಮಗೆ ಸಂಪತ್ತು ಬೇಕಾದರೆ ನೀವು ಇಚ್ಛಿಸುವಷ್ಟು ನೀಡಲು ನನ್ನ ಗೋತ್ರ ಸಿದ್ಧವಿದೆ."

ಮರುದಿನ ಹಝ್ರತ್ ಪೈಗಂಬರ್ ﷺ ಸುಮಾಮನನ್ನು, ತಾನು ಏನನ್ನು ಬಯಸುವೆ ಎಂದು ಪುನಃ ಪ್ರಶ್ನಿಸಿದರು. ಆಗ ಸುಮಾಮ ಹೇಳಿದನು: "ನಾನು ನಿನ್ನೆಯೇ ಹೇಳಿದ್ದೇನೆ. ನೀವು ನನ್ನನ್ನು ಬಿಡುಗಡೆಮಾಡುವುದಾದರೆ ನಿಮ್ಮ ಉಪಕಾರವನ್ನು ಸ್ಮರಿಸುವವನನ್ನು ನೀವು ಬಿಡುಗಡೆ ಮಾಡುವಿರಿ." ಅವನನ್ನು ಅಲ್ಲಿಯೇ ಬಿಟ್ಟು ಹಝ್ರತ್ ಪೈಗಂಬರರು ﷺ ಹೋದರು.

ಮೂರನೆಯ ದಿನ ಹಝ್ರತ್ ಪೈಗಂಬರ್ ﷺ ಬಂದು ಸುಮಾಮನನ್ನು ಪ್ರಶ್ನಿಸಿದಾಗ ಅವನು ಹೇಳಿದನು: "ನಾನು

ಹೇಳಬೇಕಾದುದನ್ನು ಹೇಳಿಯಾಗಿದೆ." ಆಗ ಹಝ್ರತ್ ಪೈಗಂಬರ್ ﷺ ಅವನನ್ನು ಬಂಧನದಿಂದ ಬಿಡುಗಡೆಗೊಳಿಸಲು ಹೇಳಿದರು. ಸುಮಾಮ ಬಿಡುಗಡೆಗೊಂಡ ನಂತರ ಮಸ್‌ಜಿದ್ ಸಮೀಪವಿದ್ದ ಖರ್ಜೂರದ ತೋಟಕ್ಕೆ ಹೋದನು ಮತ್ತು ಸ್ನಾನ ಮಾಡಿದನು. ಮಸ್‌ಜಿದನ್ನು ಪ್ರವೇಶಿಸಿ ಶಹಾದತ್ ಕಲಿಮ ಉಚ್ಚರಿಸಿ ಹೀಗೆ ಹೇಳಿದನು: "ಓ ಮುಹಮ್ಮದ್ ﷺ, ಅಲ್ಲಾಹನಾಣೆ ನನಗೆ ಲೋಕದಲ್ಲಿ ಅತ್ಯಂತ ಅಪ್ರಿಯವಾದುದು ತಮ್ಮ ಮುಖವಾಗಿತ್ತು. ಈಗ ನನಗೆ ಅತ್ಯಂತ ಪ್ರಿಯವಾದ ಮುಖ ತಮ್ಮದಾಗಿದೆ. ಅಲ್ಲಾಹನಾಣೆ, ನನಗೆ ಅತ್ಯಂತ ಅಪ್ರಿಯವಾದ ಧರ್ಮ ತಮ್ಮ ಧರ್ಮವಾಗಿತ್ತು. ಆದರೆ ಈಗ ನನಗೆ ಅತ್ಯಂತ ಪ್ರಿಯವಾದುದು ತಾವು ತಂದ ಧರ್ಮವಾಗಿದೆ. ಅಲ್ಲಾಹನಾಣೆ, ನನಗೆ ಅತ್ಯಂತ ಅಪ್ರಿಯವಾದ ನಗರ ನಿಮ್ಮ ನಗರವಾಗಿತ್ತು. ಈಗ ಇದೇ ನಗರ ನನಗೆ ಅತ್ಯಂತ ಪ್ರಿಯವಾದ ನಗರವಾಗಿದೆ. ನಾನು ಉಮ್‌ರ ಮಾಡುವುದಕ್ಕೆ ಹೋಗುತ್ತಿದ್ದಾಗ ನಿಮ್ಮ ಕುದುರೆ ಸವಾರರು ನನ್ನನ್ನು ಬಂಧಿಸಿದರು. ಇವರ ಬಗ್ಗೆ ತಮ್ಮ ಅಪ್ಪಣೆ ಏನು?" ಆಗ ಹಝ್ರತ್ ಪೈಗಂಬರ್ ﷺ ಅವನು ಇಸ್ಲಾಮ್ ಧರ್ಮ ಸ್ವೀಕರಿಸಿದುದಕ್ಕೆ ಅವನಿಗೆ ಶುಭಾಶಯ ಕೋರಿದರು. ಮತ್ತು ಉಮ್‌ರ ಮಾಡಲು ಅನುಮತಿ ನೀಡಿ ಹೇಳಿದರು: "ನೀನು ಉಮ್‌ರ ಮಾಡು. ಅಲ್ಲಾಹನು ಅದನ್ನು ಸ್ವೀಕರಿಸಲಿ." ಅವನು ಮಕ್ಕವನ್ನು ತಲಪಿದಾಗ ಯಾರೋ ಅವನೊಂದಿಗೆ ಕೇಳಿದನು: ನೀನು ಸಾಬಿ ಆಗಿರುವಿಯೋ? ಆಗ ಸುಮಾಮ ಹೇಳಿದನು: ನಾನು ಸಾಬಿಯಾಗಿಲ್ಲ. ನಾನು ಮುಹಮ್ಮದ್ ಪೈಗಂಬರರನ್ನು ﷺ ನಂಬಿರುವೆನು. ಅಲ್ಲಾಹನಾಣೆ, ಮುಹಮ್ಮದ್ ಪೈಗಂಬರ್ ﷺ ಅನುಮತಿ ನೀಡುವ ತನಕ ನಿಮ್ಮ ಬಳಿಗೆ ಯಮಾಮದಿಂದ ಗೋದಿಯ ಒಂದು ಕಾಳು ಕೂಡ ಬರಲಾರದು. (ಬುಖಾರಿ ಕಿತಾಬುಲ್ ಮಗಾಝಿ).

ಇನ್ನೊಂದು ವರದಿ ಹೀಗಿದೆ: ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದ ನಂತರ ಸುಮಾಮ ಉಮ್‌ರಕ್ಕೋಸ್ಕರ ಮಕ್ಕಕ್ಕೆ ಹೋದಾಗ ಮಕ್ಕದ ಅವಿಶ್ವಾಸಿಗಳು ಸುಮಾಮ ಮುಸ್ಲಿಮನಾದುದನ್ನು ತಿಳಿದು ಅವರಿಗೆ ಹೊಡೆಯಲು ಪ್ರಯತ್ನಿಸಿದರು ಅಥವಾ ಹೊಡೆದರು. ಆಗ ಅವರು ಹೇಳಿದರು: ನಿಮ್ಮ ಬಳಿಗೆ ಗೋದಿಯ ಒಂದು ಕಾಳು ಕೂಡ ಬರಲಾರದು – ಹಝ್ರತ್ ಮುಹಮ್ಮದ್ ಪೈಗಂಬರ್ ﷺ ಅನುಮತಿ ನೀಡುವ ತನಕ.

ಸುಮಾಮ ತನ್ನ ಗೋತ್ರದ ಬಳಿಗೆ ಹೋಗಿ ಹೇಳಿದಾಗ ಗೋದಿ ಪೂರೈಕೆ ನಿಂತು ಹೋಯಿತು. ಆಗ ಮಕ್ಕದವರ ಆಹಾರ ಪರಿಸ್ಥಿತಿ ಕೆಟ್ಟು ಹೋಯಿತು. ಅಬೂ ಸುಫ್‌ಯಾನ್ ಹಝ್ರತ್ ಮುಹಮ್ಮದ್ ಪೈಗಂಬರರನ್ನು ﷺ ಕಂಡು "ನಿಮ್ಮವರಾದ ಜನರು ಹಸಿವೆಯಿಂದ ಸಾಯುತ್ತಿದ್ದಾರೆ. ನೀವು ಅವರ ಮೇಲೆ ದಯೆದೋರಿರಿ" ಎಂದು ಬೇಡಿಕೊಂಡರು. ಆಗ ಹಝ್ರತ್ ಮುಹಮ್ಮದ್ ಪೈಗಂಬರ್ ﷺ "ನೀವು ಮುಸ್ಲಿಮರಾಗುವ ತನಕ ಗೋದಿ ನಿಮಗೆ ತಲಪಲಾರದು" ಎಂದು ಹೇಳಲಿಲ್ಲ. ಅವರು ಕೂಡಲೇ ಸುಮಾಮರಿಗೆ ಸಂದೇಶ ಕಳುಹಿಸಿದರು: "ಈ ನಿರ್ಬಂಧ ಕೊನೆಗೊಳಿಸಿರಿ. ಇದು ದೌರ್ಜನ್ಯವಾಗಿದೆ. ಮಕ್ಕಳಿಗೂ ದೊಡ್ಡವರಿಗೂ ರೋಗಿಗಳಿಗೂ ವೃದ್ಧರಿಗೂ ಆಹಾರದ ಆವಶ್ಯಕತೆ ಇದೆ. ಅದನ್ನು ಪೂರೈಸಬೇಕು." (ಅಸ್ಸೀರತುನ್ನಬವಿಯ್ಯ ಇಬ್ನು ಹಿಶಾಮ್).

ಇನ್ನೊಂದು ವಿಷಯವನ್ನು ಗಮನಿಸಿರಿ. ಬಂಧಿತನಾದ ಸುಮಾಮನೊಂದಿಗೆ, "ಈಗ ನೀನು ನಮ್ಮ ಸ್ವಾಧೀನದಲ್ಲಿ ಇರುವೆ. ನೀನು ಮುಸ್ಲಿಮನಾಗು" ಎಂದೇನೂ ಹೇಳಲಿಲ್ಲ. ಅವನೊಂದಿಗೆ ಮೂರು ದಿವಸಗಳ ಕಾಲ ಉತ್ತಮವಾಗಿ ವರ್ತಿಸಲಾಯಿತು. ಅನಂತರ ಬಿಡುಗಡೆಗೊಳಿಸಲಾಯಿತು. ನೀವು ಸುಮಾಮರನ್ನು ಸಹ ಗಮನಿಸಿರಿ. ಅವರು ಸಹ ಪ್ರಜ್ಞೆವುಳ್ಳವರಾಗಿದ್ದರು. ಅವರಿಗೆ ಸ್ವಾತಂತ್ರ್ಯ ನೀಡಿದ ಕೂಡಲೆ ಅವರು ತನ್ನನ್ನು ಹಝ್ರತ್ ಮುಹಮ್ಮದ್ ಪೈಗಂಬರರ ﷺ ದಾಸನಾಗಿರಲು ಅರ್ಪಿಸಿದರು. ಇದೇ ದಾಸ್ಯದ ಮೂಲಕ ತನ್ನ ಲೌಕಿಕ ಮತ್ತು ಆಧ್ಯಾತ್ಮಿಕ ಒಳಿತಿದೆ ಎಂದು ಮನವರಿಕೆ ಮಾಡಿಕೊಂಡರು.

ಒಬ್ಬ ಯಹೂದಿ ಗುಲಾಮನಿಗೆ ಸಂಬಂಧಿಸಿ ನೋಡಿರಿ. ಅವನೊಂದಿಗೆ, "ನೀನು ನನ್ನ ಗುಲಾಮನಾಗಿರುವೆ. ನಾನು ಹೇಳಿದ ಹಾಗೆ ಮಾಡು" ಎಂದು ಹೇಳಲಿಲ್ಲ. ಆ ಗುಲಾಮನಿಗೆ ರೋಗ ಬಾಧಿಸಿತು. ಅವನ ಸ್ಥಿತಿ ಅಪಾಯಕರವಾಗಿದೆ ಎಂದು ತಿಳಿದಾಗ ಅವನ ಅಂತಿಮ ಗತಿಯ ಬಗ್ಗೆ ಹಝ್ರತ್ ಪೈಗಂಬರರಿಗೆ ﷺ ಚಿಂತೆ ತಲೆದೋರಿತು. ಅವನು ಇಹಲೋಕ ಬಿಟ್ಟು ಹೋಗುವಾಗ ಅಲ್ಲಾಹನ ಅಂತಿಮ ಶರೀಅತನ್ನು ಅಂಗೀಕರಿಸದ ಸ್ಥಿತಿಯಲ್ಲಿ ಇರಬಾರದೆಂದೂ ಅವನು ಅದನ್ನು ಅಂಗೀಕರಿಸಿ ಮೃತನಾಗಲಿ ಎಂದೂ ಹಝ್ರತ್ ಪೈಗಂಬರ್ ﷺ ಇಚ್ಛಿಸಿದರು. ಅವನಿಗೆ ಅಲ್ಲಾಹನಿಂದ ಕ್ಷಮೆ ದೊರಕಲಿ ಎಂದು ಆಶಿಸಿದರು. ಅವರು ಅವನನ್ನು

ಸಂದರ್ಶಿಸಿ ಬಹಳ ಪ್ರೀತಿಯಿಂದ "ಇಸ್ಲಾಮ್ ಧರ್ಮವನ್ನು ಸ್ವೀಕರಿಸು" ಎಂದು ಹೇಳಿದರು.

ಹಝ್ರತ್ ಅನಸ್(ರ) ಈ ಘಟನೆ ಬಗ್ಗೆ ಹೀಗೆ ವರದಿ ಮಾಡಿದ್ದಾರೆ: ಹಝ್ರತ್ ಮುಹಮ್ಮದ್ ಪೈಗಂಬರರ ﷺ ಒಬ್ಬ ಯಹೂದಿ ಗುಲಾಮ ಹುಡುಗ ರೋಗ ಬಾಧಿತನಾದನು. ಹಝ್ರತ್ ಪೈಗಂಬರ್ ﷺ ಅವನನ್ನು ಸಂದರ್ಶಿಸಲು ಹೋದರು. ಅವನ ತಲೆಯ ಸಮೀಪ ನಿಂತು ಹೇಳಿದರು: "ನೀನು ಇಸ್ಲಾಮ್ ಧರ್ಮವನ್ನು ಸ್ವೀಕರಿಸು."

ಇನ್ನೊಂದು ವರದಿ ಪ್ರಕಾರ ಅವನು ತನ್ನ ಹಿರಿಯರ ಕಡೆಗೆ ನೋಡಿದನು. ಅವರ ಅನುಮತಿ ಪಡೆದು ಅಥವಾ ಸ್ವಂತ ಇಷ್ಟ ಪ್ರಕಾರ ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದನು. (ಸಹೀಹ್ ಬುಖಾರಿ)

ಆ ಹುಡುಗ ಇಸ್ಲಾಮ್ ಧರ್ಮ ಸ್ವೀಕರಿಸಿದುದು ಹಝ್ರತ್ ಪೈಗಂಬರ್ ﷺ ಅವನೊಂದಿಗೆ ಪ್ರೀತಿಯಿಂದ ವರ್ತಿಸಿದ ಕಾರಣ ಮತ್ತು ಅವನಿಗೆ ನೀಡಲಾದ ಸ್ವಾತಂತ್ರ್ಯದ ಪ್ರಭಾವದಿಂದಾಗಿತ್ತು. ಅವನು ಈ ಕಾರಣದಿಂದ ಇಸ್ಲಾಮ್ ಸತ್ಯ ಧರ್ಮವೆಂದೂ ಅದನ್ನು ಸ್ವೀಕರಿಸುವುದರಿಂದ ರಕ್ಷಣೆ ಸಿಗುವುದೆಂದೂ ಮನವರಿಕೆ ಮಾಡಿದ್ದನು. ವಾತ್ಸಲ್ಯಮಯರಾದ ತನ್ನ ಯಜಮಾನ ತನಗೆ ಕೆಡುಕನ್ನು ಬಯಸಲಾರರೆಂದು ಅವನು ಮನಗಂಡಿದ್ದನು. ಅವರು ಖಂಡಿತವಾಗಿಯೂ ಸತ್ಯದಲ್ಲಿದ್ದಾರೆ; ಅನ್ಯರನ್ನು ಅತ್ಯುತ್ತಮವಾದುದರ ಕಡೆಗೆ ಆಹ್ವಾನಿಸುತ್ತಾರೆ; ಅತ್ಯುತ್ತಮ ಕೆಲಸ ಮಾಡಲು ಆಹ್ವಾನಿಸುತ್ತಾರೆ; ಅದರ ಬಗ್ಗೆಯೇ ಉಪದೇಶಿಸುತ್ತಾರೆ ಎಂದೆಲ್ಲ ಅವನು ಯೋಚಿಸಿದನು.

ಹಝ್ರತ್ ಮುಹಮ್ಮದ್ ಪೈಗಂಬರ್ ﷺ ಇಂತಹ ಸ್ವಾತಂತ್ರ್ಯ ನೀಡಿದ್ದರು. ಲೋಕದಲ್ಲಿ ಇಂತಹ ಉದಾಹರಣೆ ಎಂದೂ ಎಲ್ಲಿಯೂ ಕಾಣಲು ಅಸಾಧ್ಯ.

ಹಝ್ರತ್ ಮುಹಮ್ಮದ್ ಪೈಗಂಬರ್ ﷺ ತಾನು ಪ್ರವಾದಿ ಎಂದು ವಾದಿಸುವ ಮೊದಲು ಸಹ ಮನಸ್ಸಾಕ್ಷಿಯ ಸ್ವಾತಂತ್ರ್ಯ, ಧಾರ್ಮಿಕ ಸ್ವಾತಂತ್ರ್ಯ, ಜೀವಿತದ ಸ್ವಾತಂತ್ರ್ಯವನ್ನು ಇಷ್ಟಪಡುತ್ತಿದ್ದರು ಮತ್ತು ಗುಲಾಮಗಿರಿಯನ್ನು ಅಸಹ್ಯಪಡುತ್ತಿದ್ದರು. ಹಝ್ರತ್ ಖದೀಜ(ರ) ವಿವಾಹವಾದ ನಂತರ ತನ್ನ ಸಂಪತ್ತನ್ನೂ ಗುಲಾಮರನ್ನೂ ಹಝ್ರತ್ ಮುಹಮ್ಮದ್ ಪೈಗಂಬರರ ﷺ

ಸ್ವಾಧೀನಕ್ಕೆ ನೀಡಿದರು. ಆಗ ಹಝ್ರತ್ ಪೈಗಂಬರ್ ﷺ ಹಝ್ರತ್ ಖದೀಜರೊಂದಿಗೆ[ರ] ಹೇಳಿದರು: "ಈ ಎಲ್ಲ ವಸ್ತುಗಳನ್ನು ನನ್ನ ಸ್ವಾಧೀನಕ್ಕೆ ನೀನು ಕೊಡುತ್ತಿರುವೆ. ಆದುದರಿಂದ ಅದನ್ನು ನನ್ನ ಇಷ್ಟ ಪ್ರಕಾರ ವಿನಿಯೋಗಿಸುವೆನು." ಆಗ ಹಝ್ರತ್ ಖದೀಜ[ರ] ಹೇಳಿದರು: "ಅದಕ್ಕೋಸ್ಕರವೇ ನಾನು ನಿಮಗೆ ನೀಡಿದೆನು." ಹಝ್ರತ್ ಪೈಗಂಬರ್ ﷺ ಹೇಳಿದರು: "ನಾನು ಗುಲಾಮರನ್ನು ಸ್ವತಂತ್ರರನ್ನಾಗಿ ಬಿಟ್ಟು ಬಿಡುವೆನು." ಹಝ್ರತ್ ಖದೀಜ[ರ] ಹೇಳಿದರು: "ನೀವು ಏನು ಇಚ್ಛಿಸುತ್ತೀರೋ ಹಾಗೆ ಮಾಡಿರಿ. ನಾನು ನಿಮ್ಮ ಸ್ವಾಧೀನಕ್ಕೆ ಎಲ್ಲವನ್ನೂ ನೀಡಿದ್ದೇನೆ. ಈ ಸಂಪತ್ತು ಎಲ್ಲವೂ ನಿಮ್ಮದಾಗಿದೆ. ಈಗ ನನಗೆ ಅದರಲ್ಲೇನೂ ಹಕ್ಕಿಲ್ಲ." ಆಗ ಹಝ್ರತ್ ಪೈಗಂಬರ್ ﷺ ಹಝ್ರತ್ ಖದೀಜರ[ರ] ಗುಲಾಮರನ್ನು ಕರೆದು ಹೇಳಿದರು– "ನೀವು ಇಂದಿನಿಂದ ಸ್ವತಂತ್ರರಾಗಿರುವಿರಿ."

ಪೈಗಂಬರ್ ﷺ ಸಂಪತ್ತಿನ ಬಹಳ ದೊಡ್ಡ ಭಾಗವನ್ನು ಬಡವರಿಗೆ ಹಂಚಿದರು. ಹಝ್ರತ್ ಪೈಗಂಬರ್ ﷺ ವಿಮೋಚಿಸಿದ ಗುಲಾಮರಲ್ಲಿ ಒಬ್ಬ ಝೈದ್ ಎಂಬವರಾಗಿದ್ದರು. ಅವರು ಇತರ ಗುಲಾಮರಿಗಿಂತ ಹೆಚ್ಚು ಚುರುಕು ಮತ್ತು ಬುದ್ಧಿಶಾಲಿಯಾಗಿ ಕಂಡುಬರುತ್ತಿದ್ದರು. ಅವರು ಹೀಗೆ ಯೋಚಿಸಿದರು: "ನನಗೆ ಗುಲಾಮಗಿರಿಯಿಂದ ವಿಮೋಚನೆ ಲಭಿಸಿದೆ. ಆದರೆ ನಾನು ಸದಾ ಹಝ್ರತ್ ಮುಹಮ್ಮದ್ ಪೈಗಂಬರರ ﷺ ದಾಸನಾಗಿ ಇರುವುದೇ ನನಗೆ ಉತ್ತಮವಾಗಿದೆ." ಝೈದ್ ಹೇಳಿದರು: "ನೀವು ನನ್ನನ್ನು ಸ್ವತಂತ್ರನನ್ನಾಗಿ ಮಾಡಿರುವಿರಿ. ಆದರೆ ನಾನು ಸ್ವತಂತ್ರನಾಗಿರಲು ಇಚ್ಛಿಸುವುದಿಲ್ಲ. ನಾನು ನಿಮ್ಮ ಜೊತೆಗೆ ನಿಮ್ಮ ಗುಲಾಮನಾಗಿ ಜೀವಿಸುವೆನು." ಝೈದ್ ಹಝ್ರತ್ ಪೈಗಂಬರರನ್ನು ﷺ ಬಿಟ್ಟು ಹೋಗದೆ ಅವರ ಜೊತೆಗೆ ನಿಂತರು. ಪರಸ್ಪರ ಪ್ರೀತಿಯು ವರ್ಧಿಸುತ್ತಾ ಇದ್ದಿತ್ತು. ಝೈದ್ ಶ್ರೀಮಂತ ಕುಟುಂಬಕ್ಕೆ ಸೇರಿದವರಾಗಿದ್ದರು. ಅವರು ತಿನ್ನಲು ಕುಡಿಯಲು ಕೊರತೆಯಿಲ್ಲದ ಕುಟುಂಬಕ್ಕೆ ಸೇರಿದವರಾಗಿದ್ದರು. ಡಕಾಯಿತರು ಅವರನ್ನು ಅಪಹರಿಸಿ ಮಾರಾಟ ಮಾಡಿದ್ದರು. ಅವರ ತಂದೆ ತಾಯಂದಿರು ಮತ್ತು ಸಂಬಂಧಿಕರು ಅವರನ್ನು ಹುಡುಕುತ್ತಿದ್ದರು. ತಮ್ಮ ಹುಡುಗ ಮಕ್ಕದಲ್ಲಿರುವುದಾಗಿ ಅವರಿಗೆ ತಿಳಿಯಿತು. ಅವನು ಹಝ್ರತ್

ಮುಹಮ್ಮದ್ ಪೈಗಂಬರರ ﷺ ಮನೆಯಲ್ಲಿರುವುದಾಗಿ ತಿಳಿದಾಗ ಅವರ ಸಮೀಪಕ್ಕೆ ಹೋಗಿ ಹೇಳಿದರು: "ನೀವು ನಿಮಗಿಷ್ಟವಿರುವಷ್ಟು ಹಣವನ್ನು ನಮ್ಮಿಂದ ಪಡೆದು ನಮ್ಮ ಪುತ್ರನನ್ನು ಬಿಡುಗಡೆಗೊಳಿಸಿರಿ. ಅವನ ತಾಯಿ ಅಳುತ್ತಿದ್ದಾಳೆ. ಅವಳ ಸ್ಥಿತಿ ಬಹಳ ಹಾಳಾಗಿದೆ." ಹಝ್‌ರತ್ ಪೈಗಂಬರ್ ﷺ ಹೇಳಿದರು: "ನಾನು ಅವನನ್ನು ಇದರ ಮೊದಲೇ ಸ್ವತಂತ್ರನನ್ನಾಗಿ ಮಾಡಿರುವೆನು. ಅವನು ಸ್ವತಂತ್ರನಾಗಿದ್ದಾನೆ. ಅವನು ಹೋಗಲು ಬಯಸುವುದಾದರೆ ಹೋಗಲಿ. ನನಗೆ ನೀವು ಹಣವೇನೂ ನೀಡಬೇಕಾಗಿಲ್ಲ." ಝೈದರ ತಂದೆ ಹೇಳಿದರು: "ಮಗನೆ, ನಾವು ಹೋಗುವ." ಆದರೆ ಝೈದ್ ಹೇಳಿದರು: "ನಾನು ನಿಮ್ಮನ್ನು ಭೇಟಿಯಾದುದು ಸಂತೋಷ. ನಾನು ಮುಂದೆ ತಾಯಿಯನ್ನೂ ಕಾಣಲು ಬರುವೆನು. ಆದರೆ ಈಗ ನಾನು ನಿಮ್ಮ ಜೊತೆಗೆ ಬರಲಾರೆನು. ನಾನು ಹಝ್‌ರತ್ ಪೈಗಂಬರರ ﷺ ಗುಲಾಮನಾಗಿದ್ದೇನೆ. ಅವರಿಂದ ಬೇರ್ಪಟ್ಟು ಹೋಗುವ ಪ್ರಶ್ನೆಯೇ ಇಲ್ಲ. ತಂದೆ ತಾಯಂದಿರಿಗಿಂತ ನಾನು ಅವರನ್ನು ಈಗ ಹೆಚ್ಚಿಗೆ ಪ್ರೀತಿಸುತ್ತೇನೆ."

ಝೈದರ ತಂದೆ, ಚಿಕ್ಕಪ್ಪ ಮೊದಲಾದವರು ಬಹಳ ಒತ್ತಾಯ ಮಾಡಿದರೂ ಅವರು ಅವರ ಮಾತಿಗೆ ಒಪ್ಪಿಗೆ ನೀಡಲಿಲ್ಲ. ಝೈದರ ಈ ಪ್ರೀತಿಯನ್ನು ಕಂಡು ಹಝ್‌ರತ್ ಮುಹಮ್ಮದ್ ಪೈಗಂಬರ್ ﷺ ಹೇಳಿದರು: "ಝೈದ್ ಇದರ ಮೊದಲೇ ಸ್ವತಂತ್ರನಾಗಿದ್ದಾನೆ. ಆದರೆ ಅವನು ಇಂದಿನಿಂದ ನನ್ನ ಪುತ್ರನಾಗಿದ್ದಾನೆ." ಈ ಪರಿಸ್ಥಿತಿಯನ್ನು ನೋಡಿ ಝೈದರ ತಂದೆ ಮತ್ತು ಚಿಕ್ಕಪ್ಪ ಅಲ್ಲಿಂದ ತಮ್ಮ ಊರಿಗೆ ಮರಳಿ ಹೋದರು. ಝೈದ್ ಯಾವಾಗಲೂ ಅಲ್ಲೇ ವಾಸಿಸಲು ತೊಡಗಿದರು.

(ದೀಬಾಚ ತಫ್ಸೀರುಲ್ ಖುರ್‌ಆನಿನಿಂದ ಸಂಕ್ಷಿಪ್ತವಾಗಿ)

ಪ್ರವಾದಿ ಎಂದು ವಾದಿಸಿದ ನಂತರ ಹಝ್‌ರತ್ ಮುಹಮ್ಮದ್ ಪೈಗಂಬರರ ﷺ ಸ್ವಾತಂತ್ರ್ಯದ ಬಗ್ಗೆ ನಿಲುವಿನ ಮಟ್ಟ ವರ್ಧಿಸಿತು. ಹಝ್‌ರತ್ ಮುಹಮ್ಮದ್ ಪೈಗಂಬರರ ﷺ ಪರಿಶುದ್ಧ ಪ್ರಕೃತಿಯೊಂದಿಗೆ ಅವರಿಗೆ ಅವತೀರ್ಣವಾದ ಶರೀಅತ್ ಗ್ರಂಥದ ಆಜ್ಞೆ ಸಹ ಗುಲಾಮರಿಗೆ ಅವರ ಹಕ್ಕುಗಳನ್ನು ಕೊಡಬೇಕೆಂದಾಗಿತ್ತು. ಗುಲಾಮರಿಗೆ ಅವರ ಹಕ್ಕುಗಳನ್ನು ನೀಡಲು ಸಾಧ್ಯವಿಲ್ಲದಿದ್ದರೆ ಅವರನ್ನು ವಿಮೋಚಿಸಿರಿ ಎಂದು ಆಜ್ಞಾಪಿಸಲಾಗಿತ್ತು.

ಒಂದು ಹದೀಸಿನಲ್ಲಿ ಹೀಗೆ ವರದಿಯಾಗಿದೆ: ಒಬ್ಬ ಅನುಯಾಯಿ ತನ್ನ ಗುಲಾಮನನ್ನು ಹೊಡೆಯುತ್ತಿರುವುದನ್ನು ಹಝ್ರತ್ ಪೈಗಂಬರ್ ﷺ ಕಂಡಾಗ ಬಹಳ ಕೋಪವನ್ನು ಪ್ರಕಟಿಸಿದರು. ಆಗ ಹಝ್ರತ್ ಪೈಗಂಬರರ ﷺ ಅನುಯಾಯಿ ಆ ಗುಲಾಮನನ್ನು ಸ್ವತಂತ್ರಗೊಳಿಸಿ ಹೇಳಿದರು: **"**ಈಗ ನಾನು ಈ ಗುಲಾಮನನ್ನು ಗುಲಾಮಗಿರಿಯಿಂದ ಬಿಡುಗಡೆಗೊಳಿಸುತ್ತೇನೆ.**"** ಆಗ ಹಝ್ರತ್ ಪೈಗಂಬರ್ ﷺ ಹೇಳಿದರು: **"**ನೀವು ಆತನನ್ನು ಬಿಡುಗಡೆಗೊಳಿಸದಿರುತ್ತಿದ್ದರೆ ನೀವು ಅಲ್ಲಾಹನ ಶಿಕ್ಷೆಗೆ ಗುರಿಯಾಗುತ್ತಿದ್ದಿರಿ.**"** (ಸಹೀಹ್ ಮುಸ್ಲಿಮ್)

ಅನ್ಯ ಮತಾವಲಂಬಿಗಳಿಗೆ ತಮ್ಮ ಅಭಿಪ್ರಾಯ ಸ್ವಾತಂತ್ರ್ಯದ ಹಕ್ಕು ನೀಡಿದ ಬಗ್ಗೆ ಒಂದು ಉದಾಹರಣೆ ಹಝ್ರತ್ ಪೈಗಂಬರರ ﷺ ಸರಕಾರ ಮದೀನದಲ್ಲಿ ಸ್ಥಾಪಿತವಾದ ಕಾಲಕ್ಕೆ ಸಂಬಂಧಿಸಿದೆ.

ಒಂದು ಹದೀಸಿನಲ್ಲಿ ಹಝ್ರತ್ ಅಬೂಹುರೈರ(ರ) ಹೀಗೆ ವರದಿ ಮಾಡುತ್ತಾರೆ: ಇಬ್ಬರು ಪರಸ್ಪರ ಬೈದುಕೊಂಡು ಜಗಳ ಮಾಡುತ್ತಾ ಇದ್ದರು. ಅವರಲ್ಲೊಬ್ಬ ಮುಸ್ಲಿಮ್, ಇನ್ನೊಬ್ಬ ಯಹೂದಿ. ಮುಸ್ಲಿಮ್ ಹೇಳಿದನು: ಮುಹಮ್ಮದ್ ಪೈಗಂಬರರನ್ನು ﷺ ಸರ್ವಲೋಕದಿಂದ ಆಯ್ಕೆಮಾಡಿ ಶ್ರೇಷ್ಠತೆ ನೀಡಿದ ಅಲ್ಲಾಹನಾಣೆ! ಯಹೂದಿ ಹೇಳಿದನು: ಪ್ರವಾದಿ ಮೂಸಾರನ್ನು ಸರ್ವಲೋಕದಿಂದ ಆಯ್ಕೆಮಾಡಿ ಶ್ರೇಷ್ಠತೆ ನೀಡಿದ ದೇವನಾಣೆ! ಆಗ ಮುಸ್ಲಿಮನು ಕೈ ಎತ್ತಿ ಯಹೂದಿಗೆ ಹೊಡೆದನು. ಯಹೂದಿ ಹಝ್ರತ್ ಪೈಗಂಬರರಿಗೆ ﷺ ದೂರಿತ್ತನು. ಹಝ್ರತ್ ಪೈಗಂಬರ್ ﷺ ಜಗಳದ ಬಗ್ಗೆ ಮುಸ್ಲಿಮನಿಂದ ವಿವರಗಳನ್ನು ಕೇಳಿದ ನಂತರ ಹೇಳಿದರು: **"ಲಾ ತುಖಯ್ಯಿರೂನಿ ಅಲಾ ಮೂಸಾ –** ನನಗೆ ಪ್ರವಾದಿ ಮೂಸಾರಿಗಿಂತ ಶ್ರೇಷ್ಠತೆ ನೀಡಬೇಡಿರಿ.**"** (ಬುಖಾರಿ)

ಇದು ಹಝ್ರತ್ ಮುಹಮ್ಮದ್ ಪೈಗಂಬರರ ﷺ ಸ್ವಾತಂತ್ರ್ಯ, ಧಾರ್ಮಿಕ ಸ್ವಾತಂತ್ರ್ಯ, ಮನಸ್ಸಾಕ್ಷಿ ಸ್ವಾತಂತ್ರ್ಯದ ಬಗ್ಗೆ ಅವರ ಅಭಿಪ್ರಾಯದ ಉನ್ನತ ಮಟ್ಟವಾಗಿತ್ತು. ಆಗ ಮದೀನದಲ್ಲಿ ಹಝ್ರತ್ ಮುಹಮ್ಮದ್ ಪೈಗಂಬರರ ﷺ ಸರಕಾರವಿತ್ತು. ಅವರು ಮದೀನಕ್ಕೆ ವಲಸೆ ಬಂದ ನಂತರ ಅಲ್ಲಿ ಶಾಂತಿಯ ವಾತಾವರಣ ಸೃಷ್ಟಿಸಲು ಮದೀನದ ಗೋತ್ರಗಳು ಮತ್ತು ಯಹೂದಿಯರ ಜೊತೆ ಒಂದು ಒಪ್ಪಂದ ಮಾಡಿದ್ದರು. ಮುಸ್ಲಿಮರು

ಬಹುಸಂಖ್ಯಾತರಾದ ಕಾರಣದಿಂದ ಅಥವಾ ಮುಸ್ಲಿಮರಾಗದ ಜನರು ಸಹ ಮುಸ್ಲಿಮರೊಂದಿಗೆ ಸಹಕರಿಸಿದ ಕಾರಣದಿಂದ ಮದೀನದ ಸರಕಾರ ವಾಸ್ತವಿಕವಾಗಿ ಹಝ್‌ರತ್ ಮುಹಮ್ಮದ್ ಪೈಗಂಬರರ ﷺ ಕೈವಶವಾಗಿತ್ತು. ಆದರೆ ಸರಕಾರದ ಆಧಿಪತ್ಯ ದೊರಕಿದ ಕಾರಣ ಮುಸ್ಲಿಮೇತರ ಪ್ರಜೆಗಳ ಭಾವನೆಗಳ ಬಗ್ಗೆ ಲಕ್ಷ್ಯ ನೀಡಬಾರದು ಎಂಬ ಧೋರಣೆ ಆ ಸರಕಾರಕ್ಕಿರಲಿಲ್ಲ. ಎಲ್ಲ ಸಂದೇಶವಾಹಕರಿಗಿಂತ ಹಝ್‌ರತ್ ಮುಹಮ್ಮದ್ ಪೈಗಂಬರ್ ﷺ ಶ್ರೇಷ್ಠರು ಎಂದು ಪವಿತ್ರ ಖುರ್‌ಆನ್ ಸಾಕ್ಷ್ಯ ಹೇಳಿದ್ದರೂ ತನ್ನನ್ನು ಇತರ ಸಂದೇಶವಾಹಕರೊಂದಿಗೆ ಹೋಲಿಸಿ ಹೇಳಿ ವಾತಾವರಣವನ್ನು ಕೆಡಿಸಬಾರದೆಂದು ಹಝ್‌ರತ್ ಪೈಗಂಬರ್ ﷺ ಇಚ್ಛಿಸಿದರು. ಹಝ್‌ರತ್ ಪೈಗಂಬರ್ ﷺ ಆ ಮುಸ್ಲಿಮನ ವರ್ತನೆ ಬಗ್ಗೆ ಅತೃಪ್ತಿ ಸೂಚಿಸಿದರು: "ನೀವು ನಿಮ್ಮ ಜಗಳಗಳಲ್ಲಿ ಸಂದೇಶವಾಹಕರನ್ನು ತರಬೇಡಿರಿ. ನಿಮ್ಮ ದೃಷ್ಟಿಯಲ್ಲಿ ನಾನು ಎಲ್ಲ ಸಂದೇಶವಾಹಕರಿಗಿಂತ ಶ್ರೇಷ್ಠನಾಗಿರುವೆನು. ಅಲ್ಲಾಹನೂ ಇದರ ಬಗ್ಗೆ ಸಾಕ್ಷ್ಯ ನೀಡಿದ್ದಾನೆ. ಆದರೆ ನಮ್ಮ ಸರಕಾರದಲ್ಲಿ ಒಬ್ಬ ವ್ಯಕ್ತಿಯ ಪ್ರವಾದಿಯ ಬಗ್ಗೆ ಯಾರೋ ಒಬ್ಬನು ಏನೋ ಹೇಳಿದುದರಿಂದ ಅವನ ಹೃದಯಕ್ಕೆ ನೋವಾಗಬಾರದು. ಇದಕ್ಕೆ ನಾನು ಅನುಮತಿಯನ್ನು ನೀಡಲಾರೆನು. ನನ್ನನ್ನು ಗೌರವಿಸುವ ನೀವು ಇತರ ಸಂದೇಶವಾಹಕರನ್ನೂ ಗೌರವಿಸಬೇಕು."

ಇದು ಹಝ್‌ರತ್ ಮುಹಮ್ಮದ್ ಪೈಗಂಬರರ ﷺ ನ್ಯಾಯಪಾಲನೆ, ಅಭಿಪ್ರಾಯ ಸ್ವಾತಂತ್ರ್ಯದ ಮಟ್ಟವಾಗಿದೆ. ಮುಸ್ಲಿಮರನ್ನು ಮತ್ತು ಮುಸ್ಲಿಮೇತರರನ್ನು ಲಕ್ಷ್ಯದಲ್ಲಿರಿಸಿ ಇದನ್ನು ಸ್ಥಾಪಿಸಿದರು. ಕೆಲವು ಸಂದರ್ಭಗಳಲ್ಲಿ ಅವರು ಮುಸ್ಲಿಮೇತರರ ಭಾವನೆಗಳಿಗೆ ಹೆಚ್ಚು ಗಮನ ನೀಡುತ್ತಿದ್ದರು.

### ಮಾನವೀಯ ಮೌಲ್ಯಗಳನ್ನು ಮತ್ತು ಧಾರ್ಮಿಕ ಸೌಹಾರ್ದವನ್ನು ಸ್ಥಾಪಿಸಲು ಹಝ್‌ರತ್ ಪೈಗಂಬರರ ﷺ ಅಪ್ರತಿಮ ಕೃತ್ಯ ರೂಪದ ಉದಾಹರಣೆಗಳು

ಹಝ್‌ರತ್ ಪೈಗಂಬರ್ ﷺ ಮಾನವೀಯ ಮೌಲ್ಯಗಳನ್ನು ಕಾಪಾಡಲು ಮತ್ತು ಧಾರ್ಮಿಕ ಸೌಹಾರ್ದ ಸ್ಥಾಪಿಸಲು ಮಾಡಿದ ಒಂದು ಕೆಲಸದ ಉದಾಹರಣೆ ಹೀಗಿದೆ: ಅಬ್ದುರ್ರಹ್ಮಾನ್ ಬಿನ್ ಅಬೀ ಲೈಲ ವರದಿ ಮಾಡುತ್ತಾರೆ – ಸಹ್‌ಲ್ ಬಿನ್ ಹನೀಫ್ ಮತ್ತು ಖೈಸ್ ಬಿನ್ ಸಅದ್‌ರು

ಖಾದಿಸಿಯ್ಯ ಎಂಬ ಸ್ಥಳದಲ್ಲಿ ಕುಳಿತಿದ್ದಾಗ ಅವರ ಸಮೀಪದಿಂದ ಒಂದು ಮೃತ ಶರೀರವನ್ನು ದಫನು ಮಾಡಲು ಸಾಗಿಸುವುದಾಗಿ ಕಂಡರು. ಆಗ ಅವರಿಬ್ಬರೂ ಎದ್ದು ನಿಂತರು. ಆಗ ಅವರಿಗೆ ಅದು ಒಬ್ಬ ಮುಸ್ಲಿಮೇತರನ ಮೃತಶರೀರ ಎಂದು ತಿಳಿಸಿದಾಗ ಅವರಿಬ್ಬರೂ ಹೀಗೆ ಹೇಳಿದರು: ಒಮ್ಮೆ ಹಝ್ರತ್ ಮುಹಮ್ಮದ್ ಪೈಗಂಬರರ ﷺ ಸಮೀಪದಿಂದ ಒಂದು ಜನಾಝ (ಮೃತ ಶರೀರ) ದಾಟಿ ಹೋಗುತ್ತಿದ್ದಾಗ ಅವರು ಗೌರವ ಸೂಚಕವಾಗಿ ಎದ್ದು ನಿಂತರು. ಅದು ಒಬ್ಬ ಯಹೂದಿಯ ಜನಾಝ ಎಂದು ಅವರಿಗೆ ತಿಳಿಸಿದಾಗ ಅವರು ಹೇಳಿದರು: **ಅಲೈಸತ್ ನಫ್ಸನ್** – ಏನು ಅವನು ಮನುಷ್ಯನಲ್ಲವೇ? (ಸಹೀಹ್ ಬುಖಾರಿ)

ಇದು ಅನ್ಯ ಧರ್ಮಕ್ಕೂ ಮನುಷ್ಯತ್ವಕ್ಕೂ ನೀಡಿದ ಗೌರವವಾಗಿದೆ. ಇಂತಹ ಉದಾಹರಣೆಗಳಿಂದ ಧಾರ್ಮಿಕ ಸೌಹಾರ್ದದ ವಾತಾವರಣ ಸೃಷ್ಟಿಸಲ್ಪಡುತ್ತದೆ. ಇಂತಹ ಕೆಲಸಗಳಿಂದ ಪರಸ್ಪರ ಮೃದುಭಾವನೆಗಳು ಹುಟ್ಟುತ್ತವೆ. ಇಂತಹ ಭಾವನೆಗಳಿಂದಲೇ ಪ್ರೀತಿ ಮತ್ತು ಶಾಂತಿಯ ವಾತಾವರಣ ಉಂಟಾಗುತ್ತದೆ. ಇಂದಿನ ಕಾಲದ ಲೌಕಿಕ ವಾದಿಗಳ ಕೆಲಸಗಳಿಂದ ದ್ವೇಷ ಅಸೂಯೆಗಳ ವಾತಾವರಣ ಮಾತ್ರ ಸೃಷ್ಟಿಸಲ್ಪಡುತ್ತದೆ.

ಇನ್ನೊಂದು ಹದೀಸು ಹೀಗಿದೆ: ಖೈಬರ್ ಕೋಟೆ ಜಯಿಸಿದಾಗ ಯಹೂದಿಯರ ಧರ್ಮ ಗ್ರಂಥವಾದ ತೌರಾತ್‌ನ ಕೆಲವು ಪ್ರತಿಗಳು ಮುಸ್ಲಿಮರಿಗೆ ದೊರಕಿದುವು. ಯಹೂದಿಯರು ಹಝ್ರತ್ ಮುಹಮ್ಮದ್ ಪೈಗಂಬರರನ್ನು ﷺ ಕಂಡು, ತಮಗೆ ತಮ್ಮ ಪವಿತ್ರ ಗ್ರಂಥದ ಪ್ರತಿಗಳನ್ನು ಮರಳಿ ನೀಡಬೇಕೆಂದು ಅಪೇಕ್ಷಿಸಿದಾಗ ಹಝ್ರತ್ ಪೈಗಂಬರ್ ﷺ ಯಹೂದಿಯರ ಧಾರ್ಮಿಕ ಗ್ರಂಥಗಳನ್ನು ಮರಳಿಸಬೇಕೆಂದು ತನ್ನ ಸಹಾಬರಿಗೆ(ಶಿಷ್ಯರಿಗೆ) ಆಜ್ಞಾಪಿಸಿದರು. (ಅಸ್ಸೀರತುಲ್ ಹಲ್‌ಬಿಯ್ಯ)

ಆ ಸಮಯದಲ್ಲಿ ಯಹೂದಿಯರ ತಪ್ಪು ಕೆಲಸಗಳ ಕಾರಣದಿಂದ ಅವರಿಗೆ ಶಿಕ್ಷೆ ನೀಡಲಾಗುತ್ತಿತ್ತು. ಅಂತಹ ಸಂದರ್ಭಗಳಲ್ಲೂ ಪೈಗಂಬರ್ ﷺ ತಮ್ಮ ವಿರೋಧಿಗಳ ಧಾರ್ಮಿಕ ಭಾವನೆಗಳಿಗೆ ನೋವುಂಟಾಗುವ ರೀತಿಯಲ್ಲಿ ವರ್ತಿಸುತ್ತಿರಲಿಲ್ಲವೆಂದು ಸ್ಪಷ್ಟವಾಗುತ್ತದೆ.

## ಹಝ್‌ರತ್ ಪೈಗಂಬರ್ ﷺ ಮದೀನದ ಯಹೂದಿಯರೊಂದಿಗೆ ಮಾಡಿದ ಶಾಂತಿಯ ಒಪ್ಪಂದ

ನಾನು ವಿವರಿಸಿದವು ಕೆಲವು ವ್ಯಕ್ತಿಗಳಿಗೆ ಸಂಬಂಧಿಸಿದ ಸಂಭವಗಳಾಗಿವೆ. ಮದೀನದಲ್ಲಿ ಅನ್ಯರೊಂದಿಗೆ ಒಂದು ಒಪ್ಪಂದವಾದ ಬಗ್ಗೆ ನಾನು ಇದರ ಮೊದಲು ಪ್ರಸ್ತಾಪಿಸಿದ್ದೆ. ಆ ಒಪ್ಪಂದದ ಶರತ್ತುಗಳ ಬಗ್ಗೆ ನಾನು ವಿವರಿಸುವೆನು. ಹಝ್‌ರತ್ ಮುಹಮ್ಮದ್ ಪೈಗಂಬರ್ ﷺ ಮದೀನದಲ್ಲಿ ಸೌಹಾರ್ದದ ವಾತಾವರಣವನ್ನು ಸೃಷ್ಟಿಸಲು ಹೇಗೆ ಪ್ರಯತ್ನಿಸಿದರು? ಆ ಸಮಾಜದಲ್ಲಿ ಶಾಂತಿಯನ್ನು ಸ್ಥಾಪಿಸಲು ಹಝ್‌ರತ್ ಪೈಗಂಬರ್ ﷺ ಏನು ಮಾಡಲು ಬಯಸುತ್ತಿದ್ದರು? ಅಲ್ಲಿ ಶಾಂತಿ ಸ್ಥಾಪನೆಯಾಗಿ ಮಾನವೀಯ ಮೌಲ್ಯಗಳು ಸ್ಥಾಪಿತವಾಗಲು ಯಾವ ಪ್ರಯತ್ನ ಮಾಡಿದರು? ಎಂಬುದೆಲ್ಲ ಇದರಿಂದ ಸ್ಪಷ್ಟವಾಗುತ್ತದೆ.

ಯಹೂದಿಯರೊಂದಿಗೆ ಹಝ್‌ರತ್ ಮುಹಮ್ಮದ್ ಪೈಗಂಬರ್ ﷺ ಮಾಡಿದ ಒಪ್ಪಂದದ ಶರತ್ತುಗಳಲ್ಲಿ ಕೆಲವು ಈ ಕೆಳಗಿನವುಗಳಾಗಿವೆ:

1. ಮುಸ್ಲಿಮರು ಮತ್ತು ಯಹೂದಿಯರು ಪರಸ್ಪರ ಸಹಾನುಭೂತಿ ಮತ್ತು ಪ್ರಾಮಾಣಿಕತೆಯಿಂದ ವರ್ತಿಸಿ ಜೀವಿಸುವರು. ಒಂದು ವರ್ಗದವರು ಇನ್ನೊಂದು ವರ್ಗದವರ ವಿರುದ್ಧ ದೌರ್ಜನ್ಯ ಮಾಡಬಾರದು. (ಈ ಶರತ್ತನ್ನು ಯಹೂದಿಯರು ಉಲ್ಲಂಘಿಸುತ್ತಾ ಇದ್ದರು. ಹೀಗಿದ್ದರೂ ಹಝ್‌ರತ್ ಪೈಗಂಬರ್ ﷺ ಸಹಾನುಭೂತಿಯಿಂದ ಅವರೊಂದಿಗೆ ವರ್ತಿಸುತ್ತಿದ್ದರು. ಆದರೆ ಅವರ ಅಕ್ರಮ ಕೃತ್ಯಗಳು ಮಿತಿಮೀರಿದಾಗ ಯಹೂದಿಯರ ವಿರುದ್ಧ ಕ್ರಮ ಕೈಗೊಳ್ಳಲು ನಿರ್ಬಂಧಿತರಾದರು.)

2. ಪ್ರತಿಯೊಂದು ಜನಾಂಗಕ್ಕೆ ಧಾರ್ಮಿಕ ಸ್ವಾತಂತ್ರ್ಯವಿರುವುದು. (ಮುಸ್ಲಿಮರು ಬಹುಸಂಖ್ಯಾತರಾಗಿದ್ದರೂ ನೀವು ನಿಮ್ಮ ಧರ್ಮ ಪ್ರಕಾರ ನಂಬಿಕೆಗಳನ್ನು ಹೊಂದಲು ಸ್ವತಂತ್ರರು.)

3. ಎಲ್ಲ ಪ್ರಜೆಗಳ ಜೀವ ಮತ್ತು ಸಂಪತ್ತು ಸಂರಕ್ಷಿಸಲ್ಪಡುವುವು. ದೌರ್ಜನ್ಯ ಮಾಡುವವರನ್ನು ಹೊರತು ಉಳಿದೆಲ್ಲರನ್ನೂ ಗೌರವಿಸಲಾಗುವುದು. (ಅಪರಾಧ ಮಾಡುವವನಿಗೆ ಅವನು ಮುಸ್ಲಿಮನಾದರೂ ಮುಸ್ಲಿಮೇತರನಾದರೂ ಶಿಕ್ಷೆ ಸಿಗುವುದು. ಜನರ ಸಂರಕ್ಷಣೆ ಸಮಾಜದ ಮತ್ತು ಸರಕಾರದ ಕೆಲಸವಾಗಿದೆ.)

4. ಪ್ರತಿಯೊಂದು ಭಿನ್ನಾಭಿಪ್ರಾಯ ಮತ್ತು ಜಗಳ ತೀರ್ಪು ನೀಡಲು ಹಝ್‌ರತ್ ಮುಹಮ್ಮದ್ ಪೈಗಂಬರರ ﷺ ಸಮಕ್ಷಮ ಅರ್ಪಿಸಲ್ಪಡುವುದು. ಪ್ರತಿಯೊಂದು ವಿಷಯದ ಬಗ್ಗೆ ತೀರ್ಪು ದೇವಾಜ್ಞೆಗಳ ಪ್ರಕಾರ ನೀಡಲಾಗುವುದು. (ದೇವಾಜ್ಞೆ ಎಂದರೆ ಪ್ರತಿಯೊಂದು ಜನಾಂಗಕ್ಕೆ ಅದರ ಧರ್ಮಶಾಸನ ಪ್ರಕಾರ ತೀರ್ಪು ನೀಡಲಾಗುವುದು ಎಂದು ಅರ್ಥ. ಆದರೆ ತೀರ್ಪಿಗೋಸ್ಕರ ಹಝ್‌ರತ್ ಪೈಗಂಬರರನ್ನು ﷺ ಸಮೀಪಿಸಬೇಕು. ಏಕೆಂದರೆ ಸರಕಾರದ ಉನ್ನತ ಆಡಳಿತಾಧಿಕಾರಿ ಅವರಾಗಿದ್ದರು. ಆದುದರಿಂದ ತೀರ್ಪಿನ ಬಗ್ಗೆ ಅಧಿಕಾರ ಅವರಿಗೆ ಮತ್ತು ತೀರ್ಪು ಆಯಾ ಧರ್ಮಶಾಸನ ಪ್ರಕಾರವೇ ನೀಡಬೇಕಾಗಿತ್ತು. ಯಹೂದಿಯರಿಗೆ ಸಂಬಂಧಿಸಿ ಕೆಲವು ತೀರ್ಪುಗಳು ಯಹೂದಿಯರ ಧರ್ಮಶಾಸನ ಪ್ರಕಾರವಾಗಿತ್ತು. ಇದರ ಬಗ್ಗೆ ಆ ತೀರ್ಪು ದೌರ್ಜನ್ಯಕರವೆಂದು ಕ್ರೈಸ್ತರು ಆಕ್ಷೇಪಿಸುತ್ತಾರೆ. ಇತರ ವಿರೋಧಿಗಳೂ ಆಕ್ಷೇಪಿಸುತ್ತಾರೆ. ವಾಸ್ತವಿಕ ವಿಷಯವೇನೆಂದರೆ, ಯಹೂದಿಯರು ಹೇಳಿದ ಪ್ರಕಾರ ಅವರ ಧರ್ಮಶಾಸನ ಅನುಸಾರ ತೀರ್ಪು ನೀಡಲಾಗಿತ್ತು.)

5. ಯಾವುದೇ ವಿಭಾಗ ಹಝ್‌ರತ್ ಪೈಗಂಬರರ ﷺ ಅನುಮತಿ ಪಡೆಯದೆ ಯುದ್ಧ ಮಾಡಲು ಹೊರಡಬಾರದು. ಏಕೆಂದರೆ ಒಂದು ಸರಕಾರದ ಅಧೀನದಲ್ಲಿ ಜೀವಿಸುವಾಗ ಆ ಸರಕಾರಕ್ಕೆ ವಿಧೇಯರಾಗಬೇಕಾದುದು ಆವಶ್ಯಕವಾಗಿದೆ. (ಈ ಶರತ್ತು ಈಗಿನ ಕಾಲದ ಜಿಹಾದೀ ಸಂಘಟನೆಗಳಿಗೂ ಅನ್ವಯಿಸುತ್ತದೆ ಮತ್ತು ಮಾರ್ಗದರ್ಶಿಯಾಗಿದೆ. ಅವರು ಯಾವ ಸರಕಾರದ ಕೆಳಗೆ ಜೀವಿಸುತ್ತಿರುವರೋ ಆ ಸರಕಾರದ ಅನುಮತಿ ಇಲ್ಲದೆ ಯಾವುದೇ ರೀತಿಯ ಜಿಹಾದ್ ಮಾಡಬಾರದು. ಆದರೆ ಅವರು ತಾವಿರುವ ಸರಕಾರದ ಸೈನ್ಯದಲ್ಲಿ ಸೇರಿ ಆ ಸರಕಾರ ಯುದ್ಧ ಮಾಡುವುದಾದರೆ ಯುದ್ಧದಲ್ಲಿ ಪಾಲುಗೊಳ್ಳಬಹುದು.)

6. ಯಹೂದಿಯರ ಮತ್ತು ಮುಸ್ಲಿಮರ ವಿರುದ್ಧ ಯಾರಾದರೂ ಯುದ್ಧ ಮಾಡಿದರೆ ಅವರು ಒಬ್ಬರಿನ್ನೊಬ್ಬರ ಸಹಾಯಕ್ಕೆ ಬರಬೇಕು. (ಎರಡು ವಿಭಾಗಗಳಲ್ಲಿ ಒಂದರ ವಿರುದ್ಧ ಯಾರಾದರೂ ಯುದ್ಧ ಮಾಡಿದರೆ ಇನ್ನೊಂದು ವಿಭಾಗ ಸಹಾಯಕ್ಕೆ ಬರುವುದು ಮತ್ತು ಶತ್ರುಗಳೊಂದಿಗೆ ರಾಜಿ ಒಪ್ಪಂದವಾದರೆ ಅದರ ಪರಿಣಾಮವಾಗಿ ಯಾವುದಾದರೂ ಲಾಭ ಸಿಗುವುದಾದರೆ ಆ ಲಾಭವನ್ನು ಎರಡು ವಿಭಾಗದ ಜನರಿಗೂ

ಹಂಚಿಕೊಡಲಾಗುವುದು.) ಇದೇ ರೀತಿ ಮದೀನವನ್ನು ಯಾರಾದರೂ ಆಕ್ರಮಿಸಿದರೆ ಎಲ್ಲರೂ ಒಗ್ಗೂಡಿ ಆಕ್ರಮಣಗಾರರನ್ನು ಎದುರಿಸುವರು.

7. ಮಕ್ಕದ ಖುರೈಶಿಗಳಿಗೆ ಮತ್ತು ಅವರ ಬೆಂಬಲಿಗರಿಗೆ ಯಹೂದಿಯರು ಯಾವುದೇ ರೀತಿಯ ಸಹಾಯ ಅಥವಾ ಆಶ್ರಯವನ್ನು ನೀಡಬಾರದು. (ಮಕ್ಕದ ವಿರೋಧಿಗಳಾದ ಅವಿಶ್ವಾಸಿಗಳು ಮುಸ್ಲಿಮರನ್ನು ಮಕ್ಕದಿಂದ ಹೊರಗೆ ಹಾಕಿದ್ದರು. ಮುಸ್ಲಿಮರು ಮದೀನಕ್ಕೆ ಬಂದು ಆಶ್ರಯ ಪಡೆದಿದ್ದರು. ಆದುದರಿಂದ ಮದೀನದ ಸರಕಾರದಲ್ಲಿ ವಾಸಿಸುವವರು ಆ ಶತ್ರು ಜನಾಂಗದವರೊಂದಿಗೆ ಯಾವುದೇ ರೀತಿಯ ಒಪ್ಪಂದ ಮಾಡಬಾರದು ಮತ್ತು ಅವರ ನೆರವು ಪಡೆಯಬಾರದು.)

8. ಪ್ರತಿಯೊಂದು ವಿಭಾಗ ತನ್ನ ಖರ್ಚು ವೆಚ್ಚಗಳನ್ನು ತಾನೇ ವಹಿಸಿ ಕೊಳ್ಳುವುದು.

9. ಈ ಒಪ್ಪಂದದ ಕಾರಣ ಯಾವುದೇ ದೌರ್ಜನ್ಯಗಾರ ಅಥವಾ ಅಪರಾಧಿ ಶಿಕ್ಷೆಯನ್ನು ಅನುಭವಿಸುವುದರಿಂದ ರಕ್ಷಿಸಲ್ಪಡಲಾರನು. ಅಪರಾಧಿಗೆ ಶಿಕ್ಷೆ ನೀಡಲಾಗುವುದು ಅಥವಾ ಅವನಿಗೆ ಸೇಡು ತೀರಿಸಲಾಗುವುದು. (ಹಿಂದೆ ಹೇಳಿದ ಹಾಗೆ ದೌರ್ಜನ್ಯ ಮಾಡುವವನಿಗೆ, ಪಾಪಕೃತ್ಯ ಮಾಡುವವನಿಗೆ, ತಪ್ಪು ಕೆಲಸ ಮಾಡುವವನಿಗೆ ಶಿಕ್ಷೆ ಸಿಗುವುದು. ಯಾವುದೇ ವ್ಯತ್ಯಾಸವಿಲ್ಲದೆ ಮುಸ್ಲಿಮನಾದ, ಯಹೂದಿಯಾದ ಅಥವಾ ಅನ್ಯ ಧರ್ಮದವನಾದ ಅಪರಾಧಿಗೆ ಶಿಕ್ಷೆ ವಿಧಿಸಲ್ಪಡುವುದು.)

(ಸೀರತ್ ಖಾತಮುನ್ನಬಿಯ್ಯೀನ್‌ನಿಂದ ಸಂಕ್ಷಿಪ್ತವಾಗಿ)

## ಧರ್ಮ ಸ್ವಾತಂತ್ರ್ಯ ಮತ್ತು ನಜ್‌ರಾನಿನ ಜನರಿಗೆ ಶಾಂತಿಯ ದೃಢ ಪತ್ರಿಕೆ

ಧಾರ್ಮಿಕ ಸೌಹಾರ್ದ ಮತ್ತು ಧಾರ್ಮಿಕ ಸ್ವಾತಂತ್ರ್ಯವನ್ನು ಕಾಪಾಡಲು ಹಝ್ರತ್ ಮುಹಮ್ಮದ್ ಪೈಗಂಬರ್ ﷺ ನಜ್‌ರಾನಿನ ಕ್ರೈಸ್ತರ ಪ್ರತಿನಿಧಿ ಸಂಘಕ್ಕೆ ಮಸ್‌ಜಿದ್ ನಬವಿಯಲ್ಲಿ ಆರಾಧಿಸಲು ಅನುಮತಿ ನೀಡಿದರು. ಅವರು ಪೂರ್ವದಿಕ್ಕಿಗೆ ಅಭಿಮುಖೀಕರಿಸಿ ತಮ್ಮ ಆರಾಧನೆ ನಡೆಸಿದರು. ಆ ಸಂದರ್ಭದಲ್ಲಿ ಶಿಷ್ಯರ ಅಭಿಪ್ರಾಯ ಹಾಗೆ ಮಾಡಲು ಅನುಮತಿಸಬಾರದು ಎಂದಾಗಿತ್ತು. ಆದರೆ ಹಝ್ರತ್ ಪೈಗಂಬರ್ ﷺ ಹೇಳಿದರು: ಅದರಿಂದ ಯಾವ ವ್ಯತ್ಯಾಸವೂ ಉಂಟಾಗದು.

ನಜ್‌ರಾನಿನ ಜನರಿಗೆ ಹಝ್ರತ್ ಮುಹಮ್ಮದ್ ಪೈಗಂಬರ್ ﷺ ಶಾಂತಿಯ ದೃಢಪತ್ರಿಕೆಯಲ್ಲಿ ಹೀಗೆ ಹೇಳಿದ್ದರು: ಮುಸ್ಲಿಮ್ ಸೈನ್ಯದ ಮೂಲಕ ನಜ್‌ರಾನಿನ ಕ್ರೈಸ್ತರ ದೇಶದ ಗಡಿಗಳನ್ನು ಸಂರಕ್ಷಿಸುವ ಜವಾಬ್ದಾರಿ ತನಗಿದೆ. ಅವರ ಇಗರ್ಜಿಗಳು, ಅವರ ಆರಾಧನಾಲಯಗಳು, ಪ್ರವಾಸಿ ಮಂದಿರಗಳು ಅವು ಎಷ್ಟು ದೂರ ಪ್ರದೇಶಗಳಲ್ಲಿದ್ದರೂ ಅಥವಾ ನಗರಗಳಲ್ಲಿದ್ದರೂ ಪರ್ವತಗಳ ಮೇಲಿದ್ದರೂ ಕಾಡು ಪ್ರದೇಶಗಳಲ್ಲಿದ್ದರೂ ಅವುಗಳ ಸಂರಕ್ಷಣೆಯ ಹೊಣೆಗಾರಿಕೆ ಮುಸ್ಲಿಮರದ್ದಾಗುವುದು. ಅವರಿಗೆ ತಮ್ಮ ಧರ್ಮದ ಪ್ರಕಾರ ಆರಾಧನೆ ಮಾಡಲು ಸ್ವಾತಂತ್ರ್ಯವಿರುವುದು. ಅವರ ಆರಾಧನೆಯ ಸ್ವಾತಂತ್ರ್ಯವನ್ನು ರಕ್ಷಿಸುವ ಹೊಣೆಗಾರಿಕೆ ಮುಸ್ಲಿಮರದ್ದಾಗಿದೆ. "ಅವರು ಮುಸ್ಲಿಮ್ ಸರಕಾರದ ಪ್ರಜೆಗಳಾದ ಕಾರಣ ಅವರನ್ನು ಸಂರಕ್ಷಿಸುವ ಹೊಣೆಗಾರಿಕೆ ನನಗಿದೆ" ಎಂದು ಹಝ್ರತ್ ಪೈಗಂಬರ್ ﷺ ಹೇಳಿದ್ದರು.

ಆ ಶಾಂತಿ ದೃಢಪತ್ರಿಕೆಯಲ್ಲಿ ಹೀಗೆ ಸಹ ಬರೆಯಲಾಗಿತ್ತು: ಮುಸ್ಲಿಮರು ತಮ್ಮ ಯುದ್ಧಕ್ಕೋಸ್ಕರ ಕ್ರೈಸ್ತ ಧರ್ಮದ ಜನರನ್ನು ಅವರ ಇಚ್ಛೆಗೆ ವಿರುದ್ಧವಾಗಿ ತಮ್ಮ ಸೈನ್ಯದಲ್ಲಿ ಸೇರಿಸಲಾರರು. ಕ್ರೈಸ್ತರ ಪಾದರಿಗಳಿಗೆ ಮತ್ತು ಧಾರ್ಮಿಕ ನಾಯಕರಿಗೆ ಯಾವ ಪದವಿಗಳು ಲಭಿಸಿದೆಯೋ ಅವುಗಳಿಂದ ಅವರನ್ನು ಸ್ಥಾನ ಭ್ರಷ್ಟರನ್ನಾಗಿ ಮಾಡಲಿಕ್ಕಿಲ್ಲ. ಅವರೆಲ್ಲರೂ ತಮ್ಮ ಸ್ಥಾನಕ್ಕನುಸಾರವಾಗಿ ಕೆಲಸವನ್ನು ಮುಂದುವರಿಸುವರು. ಅವರ ಆರಾಧನಾಲಯಗಳಲ್ಲಿ ಹಸ್ತಕ್ಷೇಪ ನಡೆಯಲಾರದು. ಅವುಗಳನ್ನು ಯಾವುದೇ ಪರಿಸ್ಥಿತಿಯಲ್ಲಿ ಬೇರೆ ಉಪಯೋಗಕ್ಕೆ ಒಳಪಡಿಸಲಿಕ್ಕಿಲ್ಲ. ಅವುಗಳನ್ನು ಅತಿಥಿ ಮಂದಿರಗಳಾಗಿ ಪರಿವರ್ತಿಸಲಿಕ್ಕಿಲ್ಲ. ಅಲ್ಲಿ ಯಾರನ್ನೂ ವಾಸಿಸಲು ಬಿಡಲಿಕ್ಕಿಲ್ಲ. ಅವರ ಅನುಮತಿ ಇಲ್ಲದೆ ಬೇರೆ ಉದ್ದೇಶಗಳಿಗೋಸ್ಕರ ಬಳಸಲಿಕ್ಕಿಲ್ಲ. ಕ್ರೈಸ್ತ ಪಾದರಿಗಳು ಎಲ್ಲಿದ್ದರೂ ಅವರಿಂದ ಜಿಝಿಯಾ ಮೊದಲಾದ ತೆರಿಗೆಗಳು ವಸೂಲು ಮಾಡಲಿಕ್ಕಿಲ್ಲ. ಯಾವನೇ ಮುಸ್ಲಿಮನಿಗೆ ಕ್ರೈಸ್ತ ಧರ್ಮಾವಲಂಬಿ ಪತ್ನಿ ಇದ್ದರೆ ಅವಳಿಗೆ ತನ್ನ ರೀತಿಯಲ್ಲಿ ಆರಾಧಿಸುವ ಸ್ವಾತಂತ್ರ್ಯವಿರುವುದು. ಯಾರಾದರೂ ತಮ್ಮ ಧರ್ಮ ಪಂಡಿತರ ಸಲಹೆ ಕೇಳಲು ಬಯಸುವುದಾದರೆ ಹಾಗೆ ಮಾಡಬಹುದು. ಇಗರ್ಜಿ ಇತ್ಯಾದಿಗಳ ದುರಸ್ತಿಗೋಸ್ಕರ ಮುಸ್ಲಿಮರಿಂದ ಆರ್ಥಿಕ ಸಹಾಯ ಬೇಡಿದರೆ ಅಥವಾ ಇನ್ನಿತರ ಸಹಾಯ ಅಪೇಕ್ಷಿಸಿದರೆ ಮುಸ್ಲಿಮರು ಸಹಾಯ ನೀಡಬೇಕು. ಏಕೆಂದರೆ ಇದು ಉತ್ತಮ ಕೆಲಸವಾಗಿದೆ. ಇದು ಸಾಲ ರೂಪದಲ್ಲಾಗಲಿ ಉಪಕಾರದ ರೂಪದಲ್ಲಾಗಲಿ ನೀಡುವ ಸಹಾಯವಲ್ಲ. ಇದು

ಒಪ್ಪಂದಗಳನ್ನು ಉತ್ತಮವಾಗಿ ಈಡೇರಿಸಲಿಕ್ಕಾಗಿದೆ. ಈ ರೀತಿಯ ಸಾಮಾಜಿಕ ಸಂಬಂಧದ ಮತ್ತು ಪರಸ್ಪರ ನೆರವು ನೀಡುವ ಕೆಲಸ ಮಾಡಬೇಕು. (ಝಾದುಲ್ ಮಆದ್‌ನಿಂದ ಸಂಕ್ಷಿಪ್ತವಾಗಿ)

ಧಾರ್ಮಿಕ ಸ್ವಾತಂತ್ರ್ಯವನ್ನೂ ಸೌಹಾರ್ದವನ್ನೂ ಸ್ಥಾಪಿಸಲು ಹಝ್ರತ್ ಪೈಗಂಬರ್ ﷺ ಕೈಗೊಂಡ ಉನ್ನತ ಮಟ್ಟದ ಕೆಲಸಗಳು ಮೇಲಿನವುಗಳಾಗಿವೆ. ಇಂತಹ ಮಹಾನುಭಾವರ ಬಗ್ಗೆ ದೌರ್ಜನ್ಯ ಮಾಡುವವರೆಂದೂ ಖಡ್ಗ ಬಲದಿಂದ ಇಸ್ಲಾಮಿನ ಪ್ರಚಾರ ಮಾಡಿದರೆಂದೂ ದೋಷಾರೋಪಿಸುವುದು ಅತ್ಯಂತ ದೌರ್ಜನ್ಯ ಭರಿತ ಕೃತ್ಯವಾಗಿದೆ.

ಹಝ್ರತ್ ವಾಗ್ದತ್ತ ಮಸೀಹ್(ಅ) ಹೀಗೆ ಹೇಳುತ್ತಾರೆ:

> "ಅರಬ್ ದೇಶದಲ್ಲಿದ್ದ ಗ್ರಂಥ ನೀಡಲ್ಪಟ್ಟ ಜನರು (ಯಹೂದಿಯರು ಮತ್ತು ಕ್ರೈಸ್ತರು) ಮತ್ತು ಬಹುದೇವಾರಾಧಕರು ಅತ್ಯಂತ ಕೆಟ್ಟ ನಡತೆ ಹೊಂದಿದವರಾಗಿದ್ದರು. ಅವರು ಕೆಟ್ಟ ಕೆಲಸ ಮಾಡಿ ತಾವು ಒಳ್ಳೆಯ ಕೆಲಸ ಮಾಡಿದ್ದೇವೆ ಎಂದು ಭಾವಿಸುತ್ತಿದ್ದರು. ಅವರು ಅಪರಾಧ ಕೃತ್ಯಗಳಿಂದ ದೂರ ಸರಿಯುತ್ತಿರಲಿಲ್ಲ. ಅವರು ಸಾಮಾಜಿಕ ಶಾಂತಿಯನ್ನು ಕೆಡಿಸುತ್ತಿದ್ದರು. ಅಲ್ಲಾಹನು ತನ್ನ ಪೈಗಂಬರರಿಗೆ ﷺ ಸರಕಾರದ ಲಗಾಮನ್ನು ಕೊಟ್ಟು ಅವರ ಕೈಗಳ ಮೂಲಕ ಬಡವರನ್ನು ರಕ್ಷಿಸಲು ಇಚ್ಛಿಸಿದನು. ಅರಬ್ ದೇಶ ಯಾವುದೇ ಸರಕಾರದ ನಿಯಂತ್ರಣವಿಲ್ಲದೆ ಸ್ವತಂತ್ರವಾಗಿತ್ತು. ಅವರು ಯಾವುದೇ ದೊರೆ ಅಥವಾ ಸರಕಾರದ ಅಧೀನಕ್ಕೊಳಗಾಗಿರಲಿಲ್ಲ. ಆದುದರಿಂದ ಪ್ರತಿಯೊಂದು ಗುಂಪಿನ ಜನರು ಯಾವುದೇ ಹತೋಟಿಗೊಳಗಾಗದೆ ಅತ್ಯಂತ ಧೈರ್ಯದಿಂದ ಜೀವಿಸುತ್ತಿದ್ದರು. ಅಲ್ಲಿ ಅವರಿಗೆ ಅಪರಾಧಕ್ಕೆ ಶಿಕ್ಷೆ ವಿಧಿಸುವ ನಿಯಮಗಳಿರಲಿಲ್ಲ. ಆದುದರಿಂದ ಅಲ್ಲಿನ ಜನರು ದಿನಂಪ್ರತಿ ಅಪರಾಧ ಕೃತ್ಯಗಳನ್ನು ಮಾಡುತ್ತಾ ಮುಂದುವರಿಯುತ್ತಿದ್ದರು. ಅಲ್ಲಾಹನು ಆ ದೇಶದ ಮೇಲೆ ದಯೆದೋರಿದನು. ಹಝ್ರತ್ ಮುಹಮ್ಮದ್ ಪೈಗಂಬರರನ್ನು ﷺ ಆ ದೇಶಕ್ಕೆ ಸಂದೇಶವಾಹಕರನ್ನಾಗಿ ಮಾತ್ರವಲ್ಲ ಆ ದೇಶದ

ದೊರೆಯನ್ನಾಗಿಯೂ ಮಾಡಿ ಕಳುಹಿಸಿದನು. ಪವಿತ್ರ ಖುರ್‌ಆನ್ ಸಿವಿಲ್, ಕ್ರಿಮಿನಲ್ ಮತ್ತು ಆರ್ಥಿಕತೆಗೆ ಸಂಬಂಧಿಸಿದ ಎಲ್ಲ ಮಾರ್ಗದರ್ಶನಗಳು ಪೂರ್ಣ ರೂಪದಲ್ಲಿರುವ ನಿಯಮ ಸಂಹಿತೆ ಆಗಿರುತ್ತದೆ. ಹೀಗೆ ಹಝ್ರತ್ ಮುಹಮ್ಮದ್ ಪೈಗಂಬರ್ﷺ ಒಬ್ಬ ದೊರೆಯಾಗಿರುವ ಕಾರಣ ಎಲ್ಲ ಜನ ವಿಭಾಗಗಳ ನ್ಯಾಯಾಧೀಶರೂ ಆಗಿದ್ದರು. ಎಲ್ಲ ಧರ್ಮಗಳ ಜನರು ತಮ್ಮ ಮೊಕದ್ದಮೆಗಳ ಬಗ್ಗೆ ಅವರಿಂದ ತೀರ್ಪು ಮಾಡಿಸಿಕೊಳ್ಳುತ್ತಿದ್ದರು.

"ಒಮ್ಮೆ ಒಬ್ಬ ಮುಸ್ಲಿಮ್ ಮತ್ತು ಯಹೂದಿಗೆ ಸಂಬಂಧಿಸಿದ ಮೊಕದ್ದಮೆ ಹಝ್ರತ್ ಮುಹಮ್ಮದ್ ಪೈಗಂಬರರﷺ ನ್ಯಾಯಾಲಯದಲ್ಲಿ ವಿಚಾರಣೆಗೆ ಬಂದಾಗ ಅದರ ತೀರ್ಪು ಯಹೂದಿಯ ಪರವಾಗಿ ನೀಡಿದರು. (ಇದರ ಬಗ್ಗೆ ಹಿಂದೆ ಪ್ರಸ್ತಾಪಿಸಲಾಗಿದೆ.)

"ಕೆಲವು ಅವಿವೇಕಿಗಳಾದ ವಿರೋಧಿಗಳು ಪವಿತ್ರ ಖುರ್‌ಆನನ್ನು ಗಾಢವಾಗಿ ಅಧ್ಯಯನ ಮಾಡುವುದಿಲ್ಲ. ಅವರು ಪ್ರತಿಯೊಂದು ಘಟನೆಯನ್ನು ಹಝ್ರತ್ ಮುಹಮ್ಮದ್ ಪೈಗಂಬರ್ﷺ ಸಂದೇಶವಾಹಕ ಆಗಿದ್ದರು ಎಂಬ ವಿಚಾರದ ಕೆಳಗೆ ತಂದು ಆಕ್ಷೇಪಿಸುತ್ತಾರೆ. ಆದರೆ ವಾಸ್ತವಿಕವಾಗಿ ಅವರು ವಿಧಿಸಿದ ಶಿಕ್ಷೆಗಳು ಅವರ ಖಿಲಾಫತ್ ಅಥವಾ ದೊರೆತನದ ಸ್ಥಾನದ ಪ್ರಕಾರ ನೀಡಿದುದಾಗಿತ್ತು.

"ಬನೀ ಇಸ್ರಾಈಲ್ ಜನಾಂಗದಲ್ಲಿ ಹಝ್ರತ್ ಮೂಸಾ ಅಲೈಹಿಸ್ಸಲಾಮರ ನಂತರ ನಬಿ (ಪ್ರವಾದಿ) ಮತ್ತು ದೊರೆ ಬೇರೆ ಬೇರೆ ಆಗಿರುತ್ತಿದ್ದರು. ದೊರೆಗಳು ರಾಜಕೀಯ ಕ್ರಮಗಳ ಮೂಲಕ ಶಾಂತಿಯನ್ನು ಕಾಪಾಡುತ್ತಿದ್ದರು. ಆದರೆ ಹಝ್ರತ್ ಮುಹಮ್ಮದ್ ಪೈಗಂಬರರಿಗೆﷺ ಈ ಎರಡು ಹುದ್ದೆಗಳನ್ನು ಒಟ್ಟಿಗೆ ಅಲ್ಲಾಹನು ನೀಡಿದನು. ಅಪರಾಧಿಗಳನ್ನು ಬೇರ್ಪಡಿಸಿ ಉಳಿದ ಜನರೊಂದಿಗೆ ವರ್ತಿಸುವ ರೀತಿಯ ಬಗ್ಗೆ ಪವಿತ್ರ ಖುರ್‌ಆನ್‌ನಲ್ಲಿರುವ ಈ ಕೆಳಗಿನ ವಚನ ತಿಳಿಸುತ್ತದೆ:

**ಖುಲ್ಲಿಲ್ಲಧೀನ ಊತುಲ್ ಕಿತಾಬ ವಲ್ಉಮ್ಮಿಯ್ಯೀನ ಅಅಸ್ಲಮ್ತುಮ್ ಫಇನ್ ಅಸ್ಲಮೂ ಫಖದಿಹ್ತದವ್ ವಇನ್ ತವಲ್ಲವ್ ಫಇನ್ನಮಾ ಅಲೈಕಲ್ ಬಲಾಗ್.**

'(ಓ ಪೈಗಂಬರ್,) ನೀನು ಗ್ರಂಥ ನೀಡಲ್ಪಟ್ಟವರೊಡನೆ ಮತ್ತು ಅನಕ್ಷರಸ್ಥರೊಡನೆ ಹೇಳು: ಏನು ನೀವು ಇಸ್ಲಾಮ್ ಧರ್ಮವನ್ನು ಸೇರುತ್ತೀರೋ? ಅವರು ಇಸ್ಲಾಮ್ ಧರ್ಮವನ್ನು ಸ್ವೀಕರಿಸಿದರೆ ಅವರು ಮಾರ್ಗದರ್ಶನ ಪಡೆದವರಾಗುವರು. ಅವರು ಮುಖ ತಿರುಗಿಸಿ ಹೋದರೆ ನಿನ್ನ ಕೆಲಸ ದೇವ ಸಂದೇಶ ತಲಪಿಸುವುದು ಮಾತ್ರವಾಗಿದೆ.' (ಪವಿತ್ರ ಖುರ್ಆನ್ 3:21)

"ಪವಿತ್ರ ಖುರ್ಆನಿನ ಈ ವಚನದಲ್ಲಿ 'ನಿನ್ನ ಕೆಲಸ ಯುದ್ಧ ಮಾಡುವುದಾಗಿದೆ' ಎಂದು ಹಝ್ರತ್ ಮುಹಮ್ಮದ್ ಪೈಗಂಬರರೊಂದಿಗೆ ﷺ ಹೇಳಿಲ್ಲ. ಇದರಿಂದ ತಿಳಿಯುವುದೇನೆಂದರೆ, ಅಪರಾಧಿ ಕೃತ್ಯಗಳನ್ನು ಮಾಡುವವರ ವಿರುದ್ಧ, ಮುಸ್ಲಿಮರನ್ನು ಕೊಲ್ಲುವವರ ವಿರುದ್ಧ, ಅಥವಾ ಸಾರ್ವಜನಿಕ ಶಾಂತಿ ಕೆಡಿಸುವವರ ವಿರುದ್ಧ ಮತ್ತು ಕಳ್ಳತನ ಡಕಾಯಿತಿಗಳಲ್ಲಿ ನಿರತರಾಗುವವರ ವಿರುದ್ಧ ಮಾತ್ರ ಯುದ್ಧ ಮಾಡಲು ಆಜ್ಞಾಪಿಸಲಾಗಿದೆ. ಈ ಯುದ್ಧ ಮಾಡಿದುದು ಹಝ್ರತ್ ಮುಹಮ್ಮದ್ ಪೈಗಂಬರ್ ﷺ ದೊರೆಯಾಗಿರುವ ಸ್ಥಿತಿಯಲ್ಲಿಯೇ ಹೊರತು ಸಂದೇಶವಾಹಕನಾಗಿರುವ ಸ್ಥಿತಿಯಲ್ಲಿ ಅಲ್ಲ. (ಹಝ್ರತ್ ಪೈಗಂಬರ್ ﷺ ಸರಕಾರದ ಪರಮಾಧಿಕಾರಿಯಾದ ಕಾರಣ ಯುದ್ಧ ಮಾಡುತ್ತಿದ್ದರೇ ಹೊರತು ಪ್ರವಾದಿ ಎಂಬ ನೆಲೆಯಲ್ಲಿ ಅಲ್ಲ.) ಅಲ್ಲಾಹನು ಇದರ ಬಗ್ಗೆ ಹೀಗೆ ಹೇಳಿದ್ದಾನೆ: **"ವಖಾತಿಲೂ ಫೀ ಸಬೀಲಿಲ್ಲಾಹಿಲ್ಲಧೀನ ಯುಖಾತಿಲೂನಕುಮ್ ವಲಾ ತಅ್ತದೂ ಇನ್ನಲ್ಲಾಹ ಲಾ ಯುಹಿಬ್ಬುಲ್ ಮುಅ್ತದೀನ್"**

'ಅಲ್ಲಾಹನ ಮಾರ್ಗದಲ್ಲಿ ನಿಮ್ಮ ವಿರುದ್ಧ ಯುದ್ಧ ಮಾಡುವ ಜನರೊಂದಿಗೆ ನೀವು ಯುದ್ಧ ಮಾಡಿರಿ. ನೀವು ಅತಿರೇಕದಿಂದ

ವರ್ತಿಸಬೇಡಿರಿ. ಅತಿರೇಕದಿಂದ ವರ್ತಿಸುವವರನ್ನು ಅಲ್ಲಾಹನು ಇಷ್ಟಪಡುವುದಿಲ್ಲ'." (ಪವಿತ್ರ ಖುರ್‌ಆನ್ 2:191)

(ಚಶ್ಮಃ ಮಅರಿಫತ್ – ರೂಹಾನೀ ಖಝಾಇನ್ – ಸಂಪುಟ 23 ಪುಟ 242–243)

ಆದುದರಿಂದ ಯಾವ ಪರಿಶುದ್ಧ ಪೈಗಂಬರರಿಗೆ ﷺ ಈ ನಿಯಮ ಸಂಹಿತೆ ಅವತೀರ್ಣಗೊಂಡಿದೆಯೋ, ಆ ಪೈಗಂಬರರು ಈ ಆಜ್ಞೆಗಳಿಗೆ ಸಂಬಂಧಿಸಿ ಮಿತಿಮೀರಿ ವರ್ತಿಸುವರೇ? ಹಝ್ರತ್ ಪೈಗಂಬರ್ ﷺ ಮಕ್ಕವನ್ನು ಜಯಿಸಿದ ಸಂದರ್ಭದಲ್ಲಿ, "ನೀವು ಇಸ್ಲಾಮ್ ಧರ್ಮವನ್ನು ಸೇರಿದರೆ ನಿಮಗೆ ರಕ್ಷಣೆ ದೊರಕುವುದು" ಎಂಬ ಶರತ್ತನ್ನು ವಿಧಿಸದೆ ಎಲ್ಲರಿಗೆ ಸಾರ್ವತ್ರಿಕ ಕ್ಷಮೆಯ ಘೋಷಣೆ ಮಾಡಿದರು. ಇದರ ಒಂದು ಉದಾಹರಣೆಯನ್ನು ನಾವು ನೋಡಿದ್ದೇವೆ. ಈ ಕ್ಷಮಾದಾನದ ವಿವಿಧ ರೂಪಗಳಿದ್ದುವು. ಆದರೆ ಒಮ್ಮೆಯೂ ಹಝ್ರತ್ ಮುಹಮ್ಮದ್ ಪೈಗಂಬರ್ ﷺ "ನೀವು ಆವಶ್ಯಕವಾಗಿಯೂ ಇಸ್ಲಾಮ್ ಧರ್ಮವನ್ನು ಸ್ವೀಕರಿಸಿರಿ. ಆಗ ನಿಮಗೆ ಕ್ಷಮೆ ನೀಡಲಾಗುವುದು" ಎಂಬ ಶರತ್ತನ್ನು ವಿಧಿಸಿರಲಿಲ್ಲ. ವಿವಿಧ ಸ್ಥಳಗಳಿಗೆ ಹೋಗಿ ಆಶ್ರಯ ಪಡೆಯುವ ಜನರಿಗೆ, ತನ್ನ ಶಿಷ್ಯರೊಬ್ಬರ ಪತಾಕೆಯ ಕೆಳಗೆ ಬಂದು ಸೇರುವವರಿಗೆ, ಕಅ್‌ಬದ ವಠಾರದಲ್ಲಿ ಪ್ರವೇಶಿಸುವವರಿಗೆ, ನಿರ್ದಿಷ್ಟ ವ್ಯಕ್ತಿಯ ಮನೆಯಲ್ಲಿ ಆಶ್ರಯ ಪಡೆದವರಿಗೆ ಕ್ಷಮೆ ನೀಡಲಾಗುವುದೆಂದು ಘೋಷಿಸಲಾಗಿತ್ತು. ಇದು ಬೇರೆ ಎಲ್ಲಿಯೂ ಕಾಣದಂತಹ ಮಹೋನ್ನತ ಉದಾಹರಣೆಯಾಗಿದೆ. ಮಕ್ಕದ ಜನರೊಂದಿಗೆ ಹೀಗೆ ಹೇಳಲಾಯಿತು:

**ಲಾ ತಸ್‌ರೀಬ ಅಲೈಕುಮುಲ್ ಯೌಮ್** – "ಇಂದು ನಿಮ್ಮ ಮೇಲೆ ಯಾವ ದೋಷಾರೋಪಣೆಯೂ ಇಲ್ಲ."

ಹಝ್ರತ್ ಮುಹಮ್ಮದ್ ಪೈಗಂಬರರಿಗೆ ﷺ ಸಾವಿರಾರು ದುರೂದ್ ಪ್ರಾರ್ಥನೆಗಳನ್ನು ಅರ್ಪಿಸುತ್ತೇವೆ. ಅವರು ಅತ್ಯುನ್ನತ ಜೀವಿತ ಮಾದರಿಯನ್ನು ಪ್ರಕಟಿಸಿದರು ಮತ್ತು ನಮಗೆ ಅದರ ಬಗ್ಗೆ ಉಪದೇಶಿಸಿದರು.

ಹಝ್ರತ್ ಮುಹಮ್ಮದ್ ಪೈಗಂಬರರ ﷺ ಉಪದೇಶಗಳ ಪ್ರಕಾರ ವರ್ತಿಸಲು ನಮಗೆ ಅಲ್ಲಾಹನು ಸೌಭಾಗ್ಯವನ್ನು ನೀಡಲಿ – ಆಮೀನ್. (ಜುಮುಅ ಖುತ್‌ಬ 10–03–2006)

## ಶಾಂತಿ ಸ್ಥಾಪನೆ ಮತ್ತು ತಪ್ಪು ಗ್ರಹಿಕೆಗಳನ್ನು ನಿವಾರಿಸಲು ಅಹ್ಮದಿಯಾ ಜಮಾಅತ್ ಸ್ಥಾಪಕರ ಉತ್ತಮ ಉಪದೇಶಗಳು ಮತ್ತು ಸಲಹೆಗಳು

ವಿವಿಧ ಧರ್ಮಗಳು ಮತ್ತು ಜನರು ತಪ್ಪು ಗ್ರಹಿಕೆಗಳನ್ನು ನಿವಾರಿಸಿ ಪರಸ್ಪರ ಪ್ರೀತಿ ಮತ್ತು ಸೌಹಾರ್ದದಿಂದ ಜೀವಿಸಲು ಅಹ್ಮದಿಯಾ ಜಮಾಅತ್ ಸ್ಥಾಪಕರಾದ ವಾಗ್ದತ್ತ ಮಹ್‌ದೀ ಮಸೀಹ್ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್[ಅ] ಸರ್ವಧರ್ಮ ಸಮ್ಮೇಳನಗಳನ್ನು ಜರಗಿಸಬೇಕೆಂಬ ಪ್ರಸ್ತಾಪವನ್ನು ವಿಕ್ಟೋರಿಯಾ ಮಹಾರಾಣಿಯ ವಜ್ರ ಜೂಬಿಲಿಯ ಸಂದರ್ಭದಲ್ಲಿ ಅವರ ಮುಂದೆ ಇರಿಸಿ ಹೀಗೆ ಹೇಳಿದರು:

"ಸರ್ವಧರ್ಮ ಸಮ್ಮೇಳನದಲ್ಲಿ ಪ್ರತಿಯೊಬ್ಬನು ತನ್ನ ಧರ್ಮದ ವೈಶಿಷ್ಟ್ಯಗಳನ್ನು ವಿವರಿಸಬೇಕಾದುದು ಮತ್ತು ಅನ್ಯಧರ್ಮದವರ ಬಗ್ಗೆ ಹೇಳದಿರುವುದು ಆವಶ್ಯಕವಾಗಿದೆ."

(ತುಹ್‌ಫ ಖೈಸರಿಯ್ಯ, ರೂಹಾನೀ ಖಝಾಇನ್-ಸಂಪುಟ 12 ಪುಟ 279)

ಹಝ್ರತ್ ವಾಗ್ದತ್ತ ಮಸೀಹ್[ಅ] ಈ ಆವಶ್ಯಕತೆ ಬಗ್ಗೆ ಬೆಳಕು ಬೀರುತ್ತಾ ಹೀಗೆ ಹೇಳಿದರು: "ಸಾಮಾನ್ಯವಾಗಿ ಧರ್ಮಗಳ ನಾಯಕರು ಮತ್ತು ಪಾದರಿಗಳು ಜನರಿಗೆ ತಪ್ಪು ಮಾಹಿತಿ ನೀಡುತ್ತಾ ಇರುತ್ತಾರೆ. ಆ ಕಾರಣದಿಂದ ಜನರಲ್ಲಿ ಕೋಪ ವರ್ಧಿಸುತ್ತದೆ."

ಪುನಃ ಅವರು ಹೀಗೆ ಹೇಳಿದರು:

"ಅವರಲ್ಲಿ ಸದುದ್ದೇಶವಿರುತ್ತಿದ್ದರೆ ಪವಿತ್ರ ಖುರ್‌ಆನ್ ಬಗ್ಗೆ ಇಂತಹ ಆಕ್ಷೇಪ ಮಾಡುತ್ತಿರಲಿಲ್ಲ. ಅವರ ಆಕ್ಷೇಪ ಪ್ರವಾದಿ ಮೂಸಾರ[ಅ] ತೌರಾತ್ ಗ್ರಂಥದ ಮೇಲೆಯೂ ಅನ್ವಯಿಸುತ್ತದೆ. ಈ ಜನರಿಗೆ ದೇವ ಭಯವಿರುತ್ತಿದ್ದರೆ ಮುಸ್ಲಿಮರು ಅಂಗೀಕರಿಸದ ಮತ್ತು ಅಸತ್ಯ ಭರಿತ ಗ್ರಂಥಗಳನ್ನು ತಮ್ಮ ವಾದಗಳಿಗೆ ಸಾಕ್ಷ್ಯಾಧಾರವಾಗಿ ಮುಂದಿರಿಸುತ್ತಿರಲಿಲ್ಲ. ನ್ಯಾಯದ ದೃಷ್ಟಿಯಿಂದ ಹೇಳುವುದಾದರೆ, ಯುರೋಪಿನ ಜನರೆಲ್ಲರೂ ದೇವದೂತರ ಗುಣಗಳನ್ನು ಹೊಂದಿದರೂ ಪಾದರಿಗಳು ಅದರಲ್ಲಿ ಸೇರಲಿಕ್ಕಿಲ್ಲ. ಯುರೋಪಿನ ಕ್ರೈಸ್ತರು ಇಸ್ಲಾಮನ್ನು ದ್ವೇಷದಿಂದಲೂ ಹೀನ ಭಾವದಿಂದಲೂ ನೋಡುವುದರ ಕಾರಣ ಈ ಪಾದರಿಗಳು ಅವಾಸ್ತವಿಕ ಕಥೆಗಳನ್ನು ಜನರಿಗೆ ಪುರಾತನ ಕಾಲದಿಂದ ಹೇಳುತ್ತಾ ಬಂದು ಹೀನೈಸುವ ಪಾಠ ಅವರಿಗೆ ಕಲಿಸುತ್ತಾ ಇದ್ದುದರಿಂದಾಗಿದೆ.

**"**ಕೆಲವು ಅವಿವೇಕಿಗಳಾದ ಮುಸ್ಲಿಮರ ನಡತೆ ಚೆನ್ನಾಗಿಲ್ಲವೆಂದು ನಾನು ಒಪ್ಪಿಕೊಳ್ಳುತ್ತೇನೆ. ಅವಿವೇಕದ ಅಭ್ಯಾಸಗಳು ಅವರಲ್ಲಿವೆ. ಕೆಲವು ಮೃಗಸಮಾನರಾದ ಮುಸ್ಲಿಮರು ದೌರ್ಜನ್ಯಭರಿತ ರಕ್ತಪಾತವನ್ನು ಜಿಹಾದ್ ಎಂದು ಕರೆಯುತ್ತಾರೆ. ನ್ಯಾಯಪಾಲನೆ ಮಾಡುವ ಅರಸನ ವಿರುದ್ಧ ವರ್ತಿಸುವುದರ ಹೆಸರು ವಿದ್ರೋಹ ಎಂದಾಗಿದೆ; ಜಿಹಾದ್ ಎಂದಲ್ಲ. ಪ್ರತಿಜ್ಞೆ ಮುರಿಯುವುದು, ಒಳಿತು ಮಾಡಬೇಕಾದಲ್ಲಿ ಕೆಡುಕು ಮಾಡುವುದು, ನಿರಪರಾಧಿಗಳನ್ನು ಕೊಲ್ಲುವುದು ಮೊದಲಾದ ಕೆಲಸಗಳನ್ನು ಮಾಡುವವ ದೌರ್ಜನ್ಯಗಾರನೇ ಹೊರತು ಗಾಝಿಯಲ್ಲ (ಧರ್ಮವೀರನಲ್ಲ)....

**"**ದೌರ್ಜನ್ಯ ಮಾಡಲು ಖಡ್ಗ ಎತ್ತುವವನಿಗೆ ಖಡ್ಗದ ಮೂಲಕ ಶಿಕ್ಷೆ ನೀಡಲು ಪವಿತ್ರ ಖುರ್‌ಆನ್ ಹೇಳುತ್ತದೆ. ಶಾಂತಿಯನ್ನು ಸ್ಥಾಪಿಸುವವರ ಮತ್ತು ಪ್ರಜೆಗಳನ್ನು ಪಾಲಿಸುತ್ತಾ ಎಲ್ಲ ಜನಾಂಗಗಳಿಗೆ ಸ್ವಾತಂತ್ರ್ಯದ ಹಕ್ಕು ನೀಡುವವರ ವಿರುದ್ಧ ವಿದ್ರೋಹ ಮಾಡುವ ಉಪದೇಶ ಪವಿತ್ರ ಖುರ್‌ಆನ್ ನೀಡುವುದಿಲ್ಲ. ಅಲ್ಲಾಹನ ವಚನಗಳನ್ನು ಅಪಕೀರ್ತಿಗೆ ಗುರಿಪಡಿಸುವುದು ವಂಚನೆಯಾಗಿದೆ. ಆದುದರಿಂದ ಧರ್ಮಗಳ ವಾಸ್ತವಿಕತೆಯನ್ನು ಬಹಿರಂಗಪಡಿಸಲು ಸರ್ವಧರ್ಮ ಸಮ್ಮೇಳನಗಳನ್ನು ಮಾನವ ಹಿತಕ್ಕೋಸ್ಕರ ಹಿಂದೂಸ್ಥಾನದ ಮಹಾರಾಣಿಯವರ ವತಿಯಿಂದ ನಡೆಸುವುದು ಅತ್ಯಂತ ಆವಶ್ಯಕವಾಗಿದೆ.**"** (ತುಹ್‌ಫ ಖೈಸರಿಯ್ಯ, ರೂಹಾನೀ ಖಝಾಇನ್– ಸಂಪುಟ 12 ಪುಟ 280–281)

## ಪ್ರತಿಯೊಬ್ಬರೊಂದಿಗೆ ಸಹಾನುಭೂತಿಯಿಂದ ವರ್ತಿಸುವುದೇ ಮಾನವೀಯತೆ ಆಗಿದೆ

ಹಝ್ರತ್ ವಾಗ್ದತ್ತ ಮಸೀಹ್[ಅ] ಹೇಳುತ್ತಾರೆ: ಸಹಾನುಭೂತಿಯ ಉಪದೇಶವನ್ನೀಯದ ಧರ್ಮವು ಧರ್ಮವಲ್ಲ. ಸಹಾನುಭೂತಿ ತೋರಿಸದ ಮನುಷ್ಯನೂ ಮನುಷ್ಯನಲ್ಲ. ನಮ್ಮ ದೇವನು ಯಾವುದೇ ಜನಾಂಗದೊಂದಿಗೆ ವ್ಯತ್ಯಾಸ ಮಾಡಲಿಲ್ಲ. ಉದಾಹರಣೆಗೆ, ಆರ್ಯಾವರ್ತದ ಪುರಾತನ ಜನಾಂಗಗಳಿಗೆ ನೀಡಿದಂತಹ ಮಾನವೀಯ ಶಕ್ತಿ ಸಾಮರ್ಥ್ಯಗಳನ್ನು ಅರಬಿಯರಿಗೂ ಫಾರ್ಸಿಯರಿಗೂ ಸಿರಿಯಾದವರಿಗೂ ಚೀನದವರಿಗೂ ಜಪಾನಿನವರಿಗೂ ಯುರೋಪ್ ಮತ್ತು ಅಮೇರಿಕದ ಜನಾಂಗಗಳಿಗೂ ನೀಡಿರುವನು. ಎಲ್ಲ ಜನಾಂಗಗಳಿಗೂ ದೇವನ ಭೂಮಿ ಒಂದು ಅಂಗಳವಾಗಿದೆ. ಸೂರ್ಯ, ಚಂದ್ರ ಮತ್ತು ಇತರ ಅನೇಕ ನಕ್ಷತ್ರಗಳು

ಎಲ್ಲರಿಗೂ ಪ್ರಕಾಶಮಾನವಾದ ದೀಪದ ಹಾಗಿವೆ ಮತ್ತು ಇತರ ಸೇವೆಗಳನ್ನೂ ಸಲ್ಲಿಸುತ್ತವೆ. ದೇವನಿಂದ ಸೃಷ್ಟಿಸಲ್ಪಟ್ಟ ಗಾಳಿ, ನೀರು, ಬೆಂಕಿ ಮತ್ತು ಮಣ್ಣು ಹಾಗೂ ಇತರ ಎಲ್ಲ ಸೃಷ್ಟಿಸಲ್ಪಟ್ಟ ವಸ್ತುಗಳಾದ ಧಾನ್ಯ, ಹಣ್ಣು ಹಂಪಲುಗಳು ಮತ್ತು ಗಿಡಮೂಲಿಕೆಗಳಿಂದ ಎಲ್ಲ ಜನಾಂಗಗಳು ತಮ್ಮ ಪ್ರಯೋಜನ ಪಡೆಯುತ್ತಾರೆ. ದೈವಿಕವಾದ ಈ ವಿಶೇಷ ಸ್ವಭಾವ ಗುಣಗಳು ನಮಗೆ ನೀಡುವ ಪಾಠವೇನೆಂದರೆ, ನಾವೆಲ್ಲರೂ ಎಲ್ಲ ಮಾನವರೊಂದಿಗೆ ಔದಾರ್ಯ ಭಾವನೆಯಿಂದ ವರ್ತಿಸಬೇಕು. ಸಂಕುಚಿತ ಹೃದಯವಾಗಲಿ ಸಂಕುಚಿತ ಮನೋಭಾವವಾಗಲಿ ನಮ್ಮಲ್ಲಿ ಇರಬಾರದು.

"ಸ್ನೇಹಿತರೇ, ನಮ್ಮಲ್ಲಿ ಯಾವುದಾದರೊಂದು ಜನಾಂಗ ದೇವನ ಸ್ವಭಾವಗುಣಗಳಿಗೆ ಗೌರವ ನೀಡದೆ ಅವನ ಪರಿಶುದ್ಧ ಸ್ವಭಾವ ಗುಣಗಳಿಗೆ ವಿರುದ್ಧವಾಗಿ ತಮ್ಮ ನಡೆವಳಿಕೆಗಳನ್ನು ಮಾಡಿಕೊಂಡರೆ ಆ ಜನಾಂಗ ಬೇಗನೆ ನಾಶವಾಗುವುದು. ಆ ಜನಾಂಗದವರು ತಮ್ಮನ್ನು ಮಾತ್ರವಲ್ಲ, ತಮ್ಮ ಮಕ್ಕಳನ್ನೂ ವಿನಾಶಕ್ಕೆ ತಳ್ಳುವರು. ಎಲ್ಲ ದೇಶಗಳ ಸಾತ್ವಿಕರು ಸಾಕ್ಷ್ಯ ನುಡಿದಿರುವುದೇನೆಂದರೆ, ದೇವನ ಗುಣ ವಿಶೇಷಗಳನ್ನು ಅನುಸರಿಸಿ ವರ್ತಿಸುವುದು ಮಾನವರ ಬಾಳ್ವಿಕೆಗಿರುವ ಜೀವಜಲವಾಗಿದೆ. ಶಾಂತಿ ಸಮಾಧಾನಗಳ ಉದ್ಭವಸ್ಥಾನವಾದ ದೇವನ ಪವಿತ್ರ ಗುಣಗಳನ್ನು ಅನುಸರಿಸಿ ಜೀವಿಸುವುದರಲ್ಲಿ ಮನುಷ್ಯನ ಶಾರೀರಿಕ ಮತ್ತು ಆಧ್ಯಾತ್ಮಿಕ ಜೀವಿತವು ಆಶ್ರಯಿಸಿದೆ." (ಪೈಗಾಮೆ ಸುಲ್‌ಹ್, ರೂಹಾನೀ ಖಝಾಇನ್– ಸಂಪುಟ 23 ಪುಟ 239–240)

## ಅಂಗೀಕರಿಸಲ್ಪಟ್ಟ ಯಾವುದೇ ಪ್ರವಾದಿಯನ್ನೂ ಅಂಗೀಕರಿಸಲ್ಪಟ್ಟ ಯಾವುದೇ ದಿವ್ಯ ಗ್ರಂಥವನ್ನೂ ನಿಂದಿಸಬಾರದು

ಹಝ್ರತ್ ವಾಗ್ದತ್ತ ಮಸೀಹ್[ಅ] ತಾನು ಮೃತನಾಗುವುದಕ್ಕೆ ಒಂದು ದಿವಸ ಮೊದಲು ಬರೆದ **ಪೈಗಾಮೆ ಸುಲ್‌ಹ್** (ಮೈತ್ರಿ ಸಂದೇಶ) ಎಂಬ ತನ್ನ ಭಾಷಣದಲ್ಲಿ ಹೀಗೆ ಹೇಳುತ್ತಾರೆ: "ಉಭಯ ಸಮುದಾಯಗಳಿಗೂ ಮೈತ್ರಿ ಸ್ಥಾಪನೆ ಬಹಳ ಆವಶ್ಯಕವಾಗಿರುವಂತಹ ಸೂಕ್ಷ್ಮ ಸಮಯದಲ್ಲಿ ಸೌಹಾರ್ದ ಸಂಧಾನ ಸ್ಥಾಪಿಸಲು ನಾನು ನಿಮ್ಮನ್ನು ಕರೆಯುತ್ತಿದ್ದೇನೆ. ಲೋಕದಲ್ಲಿ ವಿವಿಧ ವಿಪತ್ತುಗಳು ಬಂದೆರಗುತ್ತಿವೆ. ಭೂಕಂಪಗಳು ಸಂಭವಿಸುತ್ತಿವೆ. ಕ್ಷಾಮ ತಲೆದೋರುತ್ತಿದೆ. ಪ್ಲೇಗು ಸಹ ನಮ್ಮನ್ನು ಬಿಟ್ಟು ಹೋಗಿಲ್ಲ. ದೇವನು ನನಗೆ ತಿಳಿಸಿರುವನು – ಲೋಕವು ತನ್ನ ಕೆಟ್ಟ ಕೆಲಸಗಳನ್ನು ಬಿಟ್ಟು ಬಿಡದಿದ್ದರೆ ಮತ್ತು ಕೆಟ್ಟ ಕೆಲಸಗಳಿಗೋಸ್ಕರ

ಪಶ್ಚಾತ್ತಾಪಗೊಂಡು ಕ್ಷಮೆ ಯಾಚಿಸದಿದ್ದರೆ ಲೋಕದ ಮೇಲೆ ಕಠಿಣವಾದ ವಿಪತ್ತುಗಳು ಬಂದೆರಗುವುವು. ಒಂದು ವಿಪತ್ತು ಬಂದು ಕೊನೆಗೊಳ್ಳುವ ಮೊದಲೇ ಇನ್ನೊಂದು ವಿಪತ್ತು ಪ್ರಕಟವಾಗುವುದು. ಇದೇನು ಆಗಲಿದೆ ಎಂದು ಮನುಷ್ಯರು ಅತ್ಯಂತ ಗಾಬರಿಗೊಳ್ಳುವರು. ಅನೇಕ ಜನರು ವಿಪತ್ತುಗಳಿಗೆ ತುತ್ತಾಗಿ ಭ್ರಾಂತರ ಹಾಗೆ ಆಗುವರು. ಆದುದರಿಂದ ನನ್ನ ದೇಶದ ಸಹೋದರರೇ, ನೀವೆಲ್ಲರೂ ಆ ವಿಪತ್ತಿನ ದಿನಗಳು ಬಂದೆರಗುವ ಮೊದಲೇ ಜಾಗರೂಕರಾಗಿರಿ. ಹಿಂದುಗಳೂ ಮುಸ್ಲಿಮರೂ ಪರಸ್ಪರ ರಾಜಿ ಸಂಧಾನ ನಡೆಸಬೇಕು. ಯಾವುದಾದರೂ ಜನಾಂಗ ಅಕ್ರಮದಿಂದ ವರ್ತಿಸುವ ಕಾರಣ ಶಾಂತಿಗೆ ಅಡ್ಡಿಯಾಗುವುದಾದರೆ, ಆ ಜನಾಂಗ ಆ ಅಕ್ರಮ ಪ್ರವೃತ್ತಿಯನ್ನು ಬಿಟ್ಟು ಬಿಡಬೇಕು. ಹಾಗೆ ಮಾಡದಿದ್ದರೆ ಪರಸ್ಪರ ಹಗೆತನದ ಎಲ್ಲ ಪಾಪದೋಷವು ಆ ಜನಾಂಗದ ಕೊರಳಿಗೆ ಉರುಳಾಗುವುದು.

"ಎರಡು ಜನಾಂಗಗಳ ಮಧ್ಯೆ ಇರುವ ಪರಸ್ಪರ ಧಾರ್ಮಿಕ ಭಿನ್ನಾಭಿಪ್ರಾಯಗಳು ದಿನಗಳೆದಂತೆ ಹೃದಯಗಳಲ್ಲಿ ಬಿರುಕನ್ನು ಉಂಟುಮಾಡುತ್ತಿರುವಾಗ ಮೈತ್ರಿ ಹೇಗೆ ತಾನೆ ಸಾಧ್ಯ? ಎಂದು ಯಾರಾದರೂ ಪ್ರಶ್ನಿಸುವುದಾದರೆ ನಾನು ಅದಕ್ಕೆ ಹೀಗೆ ಉತ್ತರ ನೀಡುತ್ತೇನೆ: ಧಾರ್ಮಿಕ ಭಿನ್ನಾಭಿಪ್ರಾಯವು, ಬುದ್ಧಿ, ನ್ಯಾಯ ಮತ್ತು ಅನುಭವಜ್ಞಾನವನ್ನು ಆಧಾರವಾಗಿಟ್ಟುಕೊಂಡು ರೂಪಿಸಲ್ಪಟ್ಟಿದೆ. ಮನುಷ್ಯನಿಗೆ ಬುದ್ಧಿಯನ್ನು ನೀಡಿರುವುದೇಕೆಂದರೆ, ಅವನು ಬುದ್ಧಿ ಮತ್ತು ನ್ಯಾಯಕ್ಕೆ ವಿರುದ್ಧವಾಗಿ ಮತ್ತು ಅನುಭವ ಜ್ಞಾನಕ್ಕೆ ವಿರುದ್ಧವಾಗಿ ವರ್ತಿಸಬಾರದು ಎಂಬುದಕ್ಕಾಗಿದೆ. ಚಿಕ್ಕ ಚಿಕ್ಕ ಭಿನ್ನಾಭಿಪ್ರಾಯಗಳು ಶಾಂತಿ ಸೌಹಾರ್ದ ಸ್ಥಾಪಿಸಲು ಅಡ್ಡಿಯಾಗಲಿಕ್ಕಿಲ್ಲ. ಆದರೆ ಯಾವುದೇ ಅಂಗೀಕರಿಸಲ್ಪಟ್ಟ ಪ್ರವಾದಿಯನ್ನು ಮತ್ತು ಅಂಗೀಕರಿಸಲ್ಪಟ್ಟ ದಿವ್ಯ ಗ್ರಂಥವನ್ನು ಅಪಮಾನಿಸುವುದು ಮತ್ತು ಸುಳ್ಳೆಂದು ಆಕ್ಷೇಪಿಸಿ ದೂಷಿಸುವುದು ಶಾಂತಿ ಸೌಹಾರ್ದ ಸ್ಥಾಪನೆಗೆ ಅಡ್ಡಿಯಾಗುವ ಭಿನ್ನಾಭಿಪ್ರಾಯವಾಗುವುದು." (ಪೈಗಾಮೆ ಸುಲ್‌ಹ್, ರೂಹಾನೀ ಖಝಾಇನ್– ಸಂಪುಟ 23 ಪುಟ 444)

"ಪ್ರಿಯ ಬಂಧುಗಳೇ, ವಿವಿಧ ಜನಾಂಗಗಳ ಪ್ರವಾದಿಗಳನ್ನೂ ಸಂದೇಶವಾಹಕರನ್ನೂ ಅಪಮಾನಿಸುವುದು ಮತ್ತು ಅವರನ್ನು ಅವಹೇಳನ ಮಾಡುವುದು ಒಂದು ವಿಷವಾಗಿದೆ ಎಂದು ಬಹುಕಾಲದ ಅನುಭವ ಮತ್ತು ಹಲವು ಬಾರಿಯ ಪರೀಕ್ಷೆಗಳು ಸಾಬೀತುಪಡಿಸಿವೆ. ಅದು ದೇಹವನ್ನು ಮಾತ್ರವಲ್ಲ, ಆತ್ಮವನ್ನೂ ನಾಶಗೊಳಿಸಿ ಧರ್ಮವನ್ನೂ ಲೌಕಿಕ ಜೀವಿತವನ್ನೂ

ಧ್ವಂಸಗೊಳಿಸುತ್ತದೆ. ಒಂದು ದೇಶದ ನಿವಾಸಿಗಳು ಒಬ್ಬರಿನ್ನೊಬ್ಬರ ಧಾರ್ಮಿಕ ಮಾರ್ಗದರ್ಶಕರನ್ನು ಅಪಮಾನಿಸಿ ಅಪಕೀರ್ತಿಗೊಳಪಡಿಸುತ್ತಾ ಇದ್ದರೆ ಆ ದೇಶ ನೆಮ್ಮದಿಯಿಂದ ಬಾಳಲಾರದು. ಉಭಯ ಸಮುದಾಯಗಳಲ್ಲಿ ಒಂದು ಸಮುದಾಯದ ಅಥವಾ ಎರಡು ಸಮುದಾಯಗಳು ಪರಸ್ಪರ ಪ್ರವಾದಿಗಳನ್ನೂ ಋಷಿಗಳನ್ನೂ ಅವತಾರ ಪುರುಷರನ್ನೂ ಬೈಯ್ಯುತ್ತಾ ದೂಷಿಸುತ್ತಾ ಇದ್ದರೆ ಆ ಸಮುದಾಯಗಳ ಮಧ್ಯೆ ಸೌಹಾರ್ದ ಸಂಬಂಧ ಮತ್ತು ನೈಜ ಐಕ್ಯತೆ ಖಂಡಿತವಾಗಿ ಉಂಟಾಗಲಾರದು. ತನ್ನ ಪ್ರವಾದಿ ಅಥವಾ ಧಾರ್ಮಿಕ ನಾಯಕನನ್ನು ಅಪಮಾನಿಸುವುದನ್ನು ಆಲಿಸಿದಾಗ ಯಾರಿಗೆ ತಾನೆ ಸಿಟ್ಟು ಉಂಟಾಗಲಾರದು! ಮುಸ್ಲಿಮರು ವಿಶಿಷ್ಟವಾಗಿ ಎಂತಹ ಸಮುದಾಯವಾಗಿದ್ದಾರೆಂದರೆ ಅವರು ತಮ್ಮ ಪೈಗಂಬರರನ್ನು ದೇವನೆಂದಾಗಲಿ ದೇವಪುತ್ರನೆಂದಾಗಲಿ ಮಾಡಿಕೊಂಡಿಲ್ಲವಾದರೂ ಅವರನ್ನು ಭೂಮಿಯಲ್ಲಿ ಹುಟ್ಟಿದ ಎಲ್ಲ ಪುಣ್ಯಾತ್ಮರಿಗಿಂತ ಶ್ರೇಷ್ಠರೆಂದು ಗಣಿಸುತ್ತಾರೆ. ಆದುದರಿಂದ ಒಬ್ಬ ಮುಸ್ಲಿಮನೊಂದಿಗೆ ಅವನ ಪೈಗಂಬರರ ಬಗ್ಗೆ ಮಾತನಾಡುವಾಗ ಗೌರವದಿಂದ ಸಭ್ಯ ಪದಗಳನ್ನು ಬಳಸದಿದ್ದರೆ ಒಬ್ಬ ನೈಜ ಮುಸ್ಲಿಮನೊಂದಿಗೆ ಸೌಹಾರ್ದ ಸಂಬಂಧ ಸ್ಥಾಪಿಸಲು ಸಾಧ್ಯವಾಗದು.

"ನಾವು ಅನ್ಯ ಸಮುದಾಯದ ಪ್ರವಾದಿಗಳ ಬಗ್ಗೆ ಕೆಟ್ಟ ಶಬ್ದಗಳನ್ನು ಎಂದೂ ಬಳಸುವುದಿಲ್ಲ. ಲೋಕದಲ್ಲಿ ವಿವಿಧ ಜನಾಂಗಗಳಲ್ಲಿ ಪ್ರವಾದಿಗಳು ಆಗಮಿಸಿದಾಗ ಕೋಟಿಗಟ್ಟಲೆ ಜನರು ಅವರನ್ನು ನಂಬಿದರು ಮತ್ತು ಲೋಕದ ಯಾವುದಾದರೊಂದು ಪ್ರದೇಶದಲ್ಲಿ ಅವರ ಬಗ್ಗೆ ಪ್ರೀತಿ ಮತ್ತು ಗೌರವಾದರಗಳು ಪ್ರಕಟಗೊಂಡವು. ದೀರ್ಘಕಾಲ ಈ ಪ್ರೀತಿ ಮತ್ತು ವಿಶ್ವಾಸ ಮುಂದುವರಿಯಿತು. ಇವುಗಳೇ ಆ ಪ್ರವಾದಿಗಳು ಸತ್ಯವಂತರೆಂಬುದಕ್ಕೆ ಸಾಕಷ್ಟು ಸಾಕ್ಷ್ಯಾಧಾರವಾಗಿವೆ. ಏಕೆಂದರೆ ಅವರು ದೇವನ ಕಡೆಯಿಂದ ಆಗಮಿಸಿದವರಲ್ಲವಾಗಿದ್ದರೆ ಕೋಟಿಗಟ್ಟಲೆ ಜನರ ಹೃದಯಗಳಲ್ಲಿ ಅವರ ಬಗ್ಗೆ ವಿಶ್ವಾಸ ಸ್ಥಾಪಿತವಾಗುತ್ತಿರಲಿಲ್ಲ. ದೇವನು ತನ್ನ ಆಯ್ಕೆಗೊಂಡ ದಾಸರಿಗೆ ನೀಡುವ ಗೌರವವನ್ನು ಅನ್ಯರಿಗೆ ಖಂಡಿತ ನೀಡುವುದಿಲ್ಲ. ಯಾವನಾದರೂ ಸುಳ್ಳುವಾದಿ ಅವರ ಸ್ಥಾನದಲ್ಲಿ ಕುಳಿತುಕೊಳ್ಳಲು ಇಚ್ಛಿಸುವನಾದರೆ ಅವನು ಬೇಗನೆ ನಾಶವಾಗುವನು. ಅವನು ನಾಶಗೊಳಿಸಲ್ಪಡುವನು."

(ಪೈಗಾಮೆ ಸುಲ್‌ಹ್, ರೂಹಾನೀ ಖಝಾಇನ್– ಭಾಗ 23 ಪುಟ 452–453)

## ಸೌಹಾರ್ದ ಸಂಬಂಧ ಅತ್ಯುತ್ತಮ

ಅವರು ಪುನಃ ಹೇಳುತ್ತಾರೆ: "ಪ್ರಿಯರೇ, ಸೌಹಾರ್ದ ಸಂಬಂಧಕ್ಕಿಂತ ಉತ್ತಮವಾದುದು ಬೇರೊಂದಿಲ್ಲ. ನಾವು ಒಪ್ಪಂದ ಮಾಡಿಕೊಂಡು ಒಂದಾಗುವ, ಒಂದು ಸಮುದಾಯ ಆಗುವ. ಪರಸ್ಪರ ಸುಳ್ಳು ಆರೋಪಗಳಿಂದ ಜನರಲ್ಲಿ ಎಷ್ಟು ಬಿರುಕು ತಲೆದೋರಿದೆ ಮತ್ತು ದೇಶಕ್ಕೆ ಎಷ್ಟು ಹಾನಿ ಸಂಭವಿಸುತ್ತದೆ ಎಂದು ನೀವು ನೋಡುತ್ತಿರುವಿರಿ. ನೀವು ಬನ್ನಿರಿ, ಪರಸ್ಪರ ಅಂಗೀಕಾರ ನೀಡುವುದರ ಮೂಲಕ ದೊರೆಯುವ ಅನುಗ್ರಹಗಳು ಎಷ್ಟೆಂದು ನೋಡಿರಿ. ಮೈತ್ರಿಯ ಸರಿಯಾದ ರೀತಿ ಇದೇ ಆಗಿದೆ. ಆದರೆ ಬೇರೆ ವಿಧಾನಗಳಿಂದ ಮೈತ್ರಿಗಾಗಿ ಪ್ರಯತ್ನಿಸುವುದು ಒಂದು ಕುರುವನ್ನು ಅದು ಇರುವ ಸ್ಥಿತಿಯಲ್ಲಿಯೇ ಬಿಟ್ಟು ಅದರ ಬಾಹ್ಯ ಹೊಳಪನ್ನು ಕಂಡು ಸಂತೋಷಪಡುವ ಹಾಗಿದೆ. ಅದರೊಳಗೆ ದುರ್ವಾಸನೆ ಭರಿತ ಕೀವು ತುಂಬಿರುತ್ತದೆ."

(ಪೈಗಾಮೆ ಸುಲ್‌ಹ್, ರೂಹಾನೀ ಖಝಾಇನ್ – ಸಂಪುಟ 23 ಪುಟ 456)

## ಧರ್ಮದ ಮೂಲೋದ್ದೇಶ

ಅವರು ಇನ್ನೂ ಹೇಳುತ್ತಾರೆ: "ಧರ್ಮವೆಂದರೇನು? ದೇವನು ಮಾಡಬಾರದೆಂದು ಹೇಳಿದ ಕೆಲಸಗಳನ್ನು ಮಾಡದಿರುವುದು, ದೇವನ ಪ್ರೀತಿಯನ್ನು ಗಳಿಸುವ ಮಾರ್ಗಗಳ ಕಡೆಗೆ ಧಾವಿಸುವುದು ಮತ್ತು ಅವನ ಸಕಲ ಸೃಷ್ಟಿಗಳಿಗೂ ಒಳಿತನ್ನು ಮಾಡುವುದು ಹಾಗೂ ಅವರೊಂದಿಗೆ ಸಹಾನುಭೂತಿಯಿಂದ ವರ್ತಿಸುವುದು; ಲೋಕದಲ್ಲಿ ಆಗಮಿಸಿದ ಎಲ್ಲ ಪರಿಶುದ್ಧ ಪ್ರವಾದಿಗಳನ್ನೂ ಸಂದೇಶವಾಹಕರನ್ನೂ ತಂತಮ್ಮ ಕಾಲದಲ್ಲಿ ಆಗಮಿಸಿದ ದೇವನಿಯುಕ್ತರಾದ ಪ್ರವಾದಿಗಳೆಂದೂ ಸುಧಾರಕರೆಂದೂ ಅಂಗೀಕರಿಸುವುದು ಮತ್ತು ಅವರ ಬಗ್ಗೆ ಭೇದಭಾವನೆ ಹೊಂದದೆ ಇರುವುದು ಹಾಗೂ ಮಾನವರೆಲ್ಲರಿಗೂ ಸೇವೆ ಮಾಡುವ ಮನೋಭಾವ ಬೆಳೆಸುವುದು – ಇದು ನಮ್ಮ ಧರ್ಮದ ಸಂಕ್ಷಿಪ್ತ ವಿವರಣೆಯಾಗಿದೆ. ಆದರೆ ಅನ್ಯಾಯದಿಂದ ನಿರ್ಭಯರಾಗಿ ನಮ್ಮ ಆದರಣೀಯ ಹಝ್ರತ್ ಮುಹಮ್ಮದ್ ಪೈಗಂಬರರನ್ನು ﷺ ಕೆಟ್ಟ ಶಬ್ದಗಳನ್ನು ಬಳಸಿ ಬೈಯ್ಯುವವರೊಂದಿಗೆ ಮತ್ತು ಕೊಳಕು ದೋಷಾರೋಪಗಳನ್ನು

ಮಾಡುವವರೊಂದಿಗೆ ನಾವು ಹೇಗೆ ತಾನೆ ಮೈತ್ರಿ ಸ್ಥಾಪಿಸಲು ಸಾಧ್ಯ? ನಾನು ಸತ್ಯವಾಗಿ ಹೇಳುತ್ತೇನೆ – ಮರುಭೂಮಿಯ ಸರ್ಪಗಳೊಂದಿಗೂ ಕಾಡಿನ ತೋಳಗಳೊಂದಿಗೂ ಮೈತ್ರಿ ಸ್ಥಾಪಿಸಲು ಸಾಧ್ಯವಾದರೂ ನಮ್ಮ ಜೀವಕ್ಕಿಂತಲೂ ನಮ್ಮ ತಂದೆ ತಾಯಂದಿರಿಗಿಂತಲೂ ಪ್ರಿಯರಾದ ನಮ್ಮ ಪವಿತ್ರ ಪೈಗಂಬರರ ﷺ ಮೇಲೆ ಕೊಳಕು ಆಕ್ರಮಣಗಳನ್ನು ಮಾಡುವವರೊಂದಿಗೆ ಮೈತ್ರಿ ಸ್ಥಾಪಿಸಲು ಸಾಧ್ಯವಾಗದು. ದೇವನು ನಮ್ಮನ್ನು ಇಸ್ಲಾಮ್ ಧರ್ಮದಲ್ಲಿ ಮೃತಪಡಿಸಲಿ. ನಮ್ಮ ವಿಶ್ವಾಸಕ್ಕೆ ಹಾನಿಯುಂಟಾಗುವ ಯಾವ ಕೆಲಸವನ್ನೂ ಮಾಡಲು ನಾವು ಬಯಸುವುದಿಲ್ಲ....

"ಅತ್ಯಂತ ಖೇದಪೂರ್ವಕವಾಗಿ ನಾನು ಹೇಳುತ್ತೇನೆ: ಇಸ್ಲಾಮ್ ಪರಿಶುದ್ಧ ಮತ್ತು ಸೌಹಾರ್ದ ಸ್ಥಾಪನೆ ಮಾಡುವ ಧರ್ಮವಾಗಿದೆ. ಅದು ಯಾವುದೇ ಧರ್ಮದ ನೇತಾರರನ್ನು ದೂಷಿಸಲಿಲ್ಲ. ಪವಿತ್ರ ಖುರ್‌ಆನ್ ಎಂತಹ ಗೌರವಾರ್ಹ ಗ್ರಂಥವೆಂದರೆ ಅದು ಜನಾಂಗಗಳ ಮಧ್ಯೆ ಸೌಹಾರ್ದಕ್ಕೆ ಅಸ್ತಿಭಾರ ಹಾಕಿದೆ ಮತ್ತು ಪ್ರತಿಯೊಂದು ಜನಾಂಗದ ಪ್ರವಾದಿಯನ್ನು ಅಂಗೀಕರಿಸಿದೆ. ಲೋಕದಲ್ಲಿ ಈ ಅಭಿಮಾನ ವಿಶಿಷ್ಟವಾಗಿ ಪವಿತ್ರ ಖುರ್‌ಆನ್‌ಗೆ ಮಾತ್ರವಿದೆ. ಅದು ಲೋಕದಲ್ಲಿ ಆಗಮಿಸಿದ ಪ್ರವಾದಿಗಳ ಬಗ್ಗೆ ಹೀಗೆ ಉಪದೇಶಿಸಿದೆ: **ಲಾ ನುಫರ್ರಿಖು ಬೈನ ಅಹದಿನ್ ಮಿನ್‌ಹುಮ್ ವನಹ್‌ನು ಲಹು ಮುಸ್ಲಿಮೂನ್**. (ಓ ಮುಸ್ಲಿಮರೇ, ನೀವು ಹೇಳಿರಿ – ನಾವು ಲೋಕದ ಎಲ್ಲ ಪ್ರವಾದಿಗಳನ್ನು ನಂಬುತ್ತೇವೆ.) 'ನಾವು ಅವರಲ್ಲಿ ಕೆಲವರನ್ನು ನಂಬಿ ಮತ್ತು ಬೇರೆ ಕೆಲವರನ್ನು ನಂಬದೆ ಭೇದಭಾವನೆಯಿಂದ ವರ್ತಿಸುವುದಿಲ್ಲ.' (ಪವಿತ್ರ ಖುರ್‌ಆನ್ 2 : 137) ಇಂತಹ ಸೌಹಾರ್ದ ಸ್ಥಾಪಿಸುವಂತಹ ಬೇರೆ ಯಾವುದಾದರೂ ದಿವ್ಯ ಗ್ರಂಥ ಲೋಕದಲ್ಲಿದ್ದರೆ ಅದರ ಹೆಸರನ್ನು ಹೇಳಿರಿ.

"ಅಲ್ಲಾಹನು ತನ್ನ ಅನುಗ್ರಹವನ್ನು ಯಾವುದೇ ಗೋತ್ರಕ್ಕೆ ಸೀಮಿತಗೊಳಿಸಿಲ್ಲ. ಇಸ್ರಾಯೇಲ್ ಗೋತ್ರದಲ್ಲಿ ಪ್ರವಾದಿಗಳಾದ ಯಅ್‌ಖೂಬ್, ಇಸ್‌ಹಾಖ್, ಮೂಸಾ, ದಾವೂದ್, ಈಸಾ, ಈ ಎಲ್ಲರ ಪ್ರವಾದಿತ್ವವನ್ನು ಇಸ್ಲಾಮ್ ಅಂಗೀಕರಿಸಿದ ಹಾಗೆಯೇ ಪ್ರತಿಯೊಂದು ಜನಾಂಗದ ಪ್ರವಾದಿಗಳನ್ನು, ಅವರು ಹಿಂದೂಸ್ಥಾನದಲ್ಲಿ ಬಂದಿರಲಿ, ಪರ್ಶಿಯಾದಲ್ಲಿ ಬಂದಿರಲಿ, ಅವರನ್ನು ವಂಚಕರೆಂದೂ ಸುಳ್ಳುವಾದಿಗಳೆಂದೂ ಕರೆಯಲಿಲ್ಲ. ಬದಲಾಗಿ, ಪ್ರತಿಯೊಂದು ಜನಾಂಗದಲ್ಲೂ ದೇಶದಲ್ಲೂ ಪ್ರವಾದಿಗಳು ಆಗಮಿಸಿದ್ದಾರೆಂದು ಸ್ಪಷ್ಟವಾಗಿ ಹೇಳಿ ಎಲ್ಲ ಜನಾಂಗಗಳು

ಪರಸ್ಪರ ಸೌಹಾರ್ದದಿಂದ ಜೀವಿಸುವುದಕ್ಕೆ ಅಸ್ತಿಭಾರ ಹಾಕಿತು. ಆದರೆ ಸೌಹಾರ್ದವನ್ನು ಪ್ರತಿಪಾದಿಸುವ ಪೈಗಂಬರರನ್ನು ﷺ ವಿವಿಧ ಜನಾಂಗದವರು ಹೀಯಾಳಿಸುತ್ತಾರೆ ಮತ್ತು ಹೀನೈಸುವ ದೃಷ್ಟಿಯಿಂದ ನೋಡುತ್ತಾರೆ.

"ಪ್ರಿಯ ಸ್ವದೇಶವಾಸಿಗಳೇ, ನಾನು ನಿಮ್ಮ ಮುಂದೆ ಈ ರೀತಿ ಹೇಳಿಕೆ ನೀಡಿದುದು ನಿಮ್ಮನ್ನು ದುಃಖಿತರನ್ನಾಗಿ ಮಾಡಲಿಕ್ಕೆ ಅಥವಾ ನಿಮ್ಮ ಹೃದಯಕ್ಕೆ ನೋವುಂಟು ಮಾಡಲಿಕ್ಕೆ ಅಲ್ಲ. ನಾನು ಅತ್ಯಂತ ಸದುದ್ದೇಶದಿಂದ ನಿಮ್ಮೊಂದಿಗೆ ಹೀಗೆ ಹೇಳಲು ಬಯಸುತ್ತೇನೆ: ಕೆಲವು ಜನಾಂಗದ ಜನರು ಎಂತಹ ಸ್ವಭಾವಗುಣ ಹೊಂದಿದ್ದಾರೆಂದರೆ ಮತ್ತು ತಮ್ಮ ಧರ್ಮದ ಭಾಗವಾಗಿ ಮಾಡಿಕೊಂಡಿದ್ದಾರೆಂದರೆ ಅವರು ಅನ್ಯ ಜನಾಂಗದ ಪ್ರವಾದಿಗಳನ್ನು ಬೈಯ್ಯುತ್ತಾರೆ. ಅನಾವಶ್ಯಕವಾಗಿ ಅನ್ಯಧರ್ಮದಲ್ಲಿ ನಡೆಸುವ ಹಸ್ತಕ್ಷೇಪದ ಕಾರಣ ಅವರು ಸೃಷ್ಟಿಕರ್ತನ ದೃಷ್ಟಿಯಲ್ಲಿ ಪಾಪಿಗಳಾಗುತ್ತಾರೆ. ಅವರು ಮನುಷ್ಯ ವರ್ಗದಲ್ಲಿ ಕಾಪಟ್ಯ ಮತ್ತು ಹಗೆತನದ ಬೀಜ ಬಿತ್ತುವ ಪಾಪಕೃತ್ಯ ಸಹ ಮಾಡುತ್ತಾರೆ. ನೀವು ಹೃತ್ಪೂರ್ವಕವಾಗಿ ನನ್ನ ಪ್ರಶ್ನೆಗೆ ಉತ್ತರ ಹೇಳಿರಿ. ಒಬ್ಬನು ಇನ್ನೊಬ್ಬನ ಪಿತನಿಗೆ ಬೈದರೆ ಅಥವಾ ಅವನ ತಾಯಿಯ ಬಗ್ಗೆ ಸುಳ್ಳು ಅಪವಾದ ಮಾಡಿದರೆ ಏನು ಅವನು ತನ್ನ ತಂದೆ ತಾಯಂದಿರ ಗೌರವಕ್ಕೆ ತಾನೇ ಚ್ಯುತಿ ಮಾಡಿದಂತಾಗುವುದಿಲ್ಲವೇ? ಯಾವ ವ್ಯಕ್ತಿಯ ತಂದೆ ತಾಯಂದಿರನ್ನು ಬೈಯ್ಯಲಾಯಿತೋ ಆ ವ್ಯಕ್ತಿ ಅದಕ್ಕೆ ಉತ್ತರವಾಗಿ ಅದೇ ರೀತಿ ಬೈದರೆ ಅದರ ಬಗ್ಗೆ ಹೀಗೆ ಹೇಳುವುದು ಸರಿಯಾಗಲಾರದೆ? – ಉತ್ತರ ರೂಪವಾಗಿ ಬೈಯ್ಯಲು ಕಾರಣವಾದುದು ಮೊದಲು ಬೈದವನು ಆಗಿದ್ದಾನೆ. ಈ ರೀತಿ ಅವನು ತಂದೆ ತಾಯಂದಿರ ಗೌರವಕ್ಕೆ ಕುಂದುಂಟುಮಾಡಿ ಅವರ ಶತ್ರುವಾಗುವನು." (ಪೈಗಾಮೆ ಸುಲ್‌ಹ್, ರೂಹಾನೀ ಖಝಾಇನ್– ಸಂಪುಟ 23, ಪುಟ 458–460)

## ಆಪತ್ತುಗಳಿಂದ ರಕ್ಷಣೆ ಹೊಂದಲು ಪಶ್ಚಾತ್ತಾಪಪಡಿರಿ

ಹಝ್ರತ್ ವಾಗ್ದತ್ತ ಮಸೀಹ್(ಅ) ಇನ್ನೊಂದು ಕಡೆ ಹೀಗೆ ಹೇಳುತ್ತಾರೆ: "ನಿಮಗೆ ನೆನಪಿರಲಿ, ಅಲ್ಲಾಹು ನನಗೆ ಭೂಕಂಪಗಳ ಬಗ್ಗೆ ಸಾಮಾನ್ಯವಾಗಿ ಸಮಾಚಾರ ನೀಡಿದ್ದಾನೆ. ನೀವು ದೃಢವಾಗಿ ನಂಬಿರಿ, ಭವಿಷ್ಯವಾಣಿ ಪ್ರಕಾರ ಅಮೇರಿಕದಲ್ಲಿ ಭೂಕಂಪ ಸಂಭವಿಸಿದ ಹಾಗೆ ಯುರೋಪಿನಲ್ಲೂ ಸಂಭವಿಸಿತು. ಏಶಿಯಾದ ವಿವಿಧ ಪ್ರದೇಶಗಳಲ್ಲೂ

ಭೂಕಂಪ ಸಂಭವಿಸಲಿದೆ. ಅವುಗಳಲ್ಲಿ ಕೆಲವು ಪ್ರಳಯ ಸಮಾನವಾಗಿರುವುದು. ರಕ್ತದ ಹೊಳೆಯೇ ಹರಿಯುವಷ್ಟು ಜನರು ಮೃತರಾಗುವರು. ಪಕ್ಷಿಗಳೂ ಮೃಗಗಳೂ ಈ ಮೃತ್ಯುವಿನಿಂದ ರಕ್ಷಿಸಲ್ಪಡಲಾರವು. ಮನುಷ್ಯನ ಸೃಷ್ಟಿಯ ನಂತರ ಎಂದೂ ಸಂಭವಿಸದಂತಹ ವಿನಾಶ ಭೂಮಿಯ ಮೇಲೆ ಬಂದೆರಗುವುದು. ಬಹುತೇಕ ಸ್ಥಳಗಳು ಅಡಿಮೇಲಾಗಿ ಅಲ್ಲಿ ಹಿಂದೆ ಜನರೇ ಇರಲಿಲ್ಲ ಎಂಬಂತೆ ಕಾಣುವುದು. ಇದರೊಂದಿಗೆ ಅನೇಕ ವಿಪತ್ತುಗಳು ಭೂಮಿಯಲ್ಲೂ ಆಕಾಶದಲ್ಲೂ ಭಯಾನಕ ರೂಪದಲ್ಲಿ ಕಾಣಿಸಿಕೊಳ್ಳುವುವು. ಆಗ ಪ್ರತಿಯೊಬ್ಬ ಬುದ್ಧಿಶಾಲಿಯ ದೃಷ್ಟಿಯಲ್ಲಿ ಆ ಸಂಭವಗಳು ಅಸಾಧಾರಣವಾಗಿ ಕಾಣಿಸುವುವು. ಖಗೋಳಶಾಸ್ತ್ರ ಮತ್ತು ದಾರ್ಶನಿಕ ಶಾಸ್ತ್ರದ ಗ್ರಂಥಗಳಲ್ಲಿ ಅದರ ಬಗ್ಗೆ ಪ್ರಸ್ತಾಪ ಕಾಣಿಸಲಾರದು. ಆಗ ಜನರಲ್ಲಿ ಇದೇನು ಆಗಲಿದೆ ಎಂದು ಗಾಬರಿ ತೋರುವುದು. ಅನೇಕರು ರಕ್ಷಿಸಲ್ಪಡುವರು ಮತ್ತು ಅನೇಕ ಜನರು ನಾಶಗೊಳಿಸಲ್ಪಡುವರು. ಆ ದಿನಗಳು ಬಹಳ ಸಮೀಪವಾಗಿವೆ. ಅವು ಬಾಗಿಲ ಬಳಿ ಇರುವುದಾಗಿ ನಾನು ಕಾಣುತ್ತೇನೆ. ಲೋಕವು ಪ್ರಳಯದ ದೃಶ್ಯಗಳನ್ನು ಕಾಣುವುದು. ಭೂಕಂಪಗಳು ಮಾತ್ರವಲ್ಲ ಬೇರೆ ಅನೇಕ ಭಯಾನಕ ವಿಪತ್ತುಗಳು ಪ್ರಕಟವಾಗುವುವು. ಕೆಲವು ವಿಪತ್ತುಗಳು ಆಕಾಶದಿಂದಲೂ ಕೆಲವು ಭೂಮಿಯಿಂದಲೂ ಬಂದೆರಗುವುವು. ಇವುಗಳಿಗೆ ಕಾರಣವೇನೆಂದರೆ, ಮನುಷ್ಯರು ತಮ್ಮ ಸೃಷ್ಟಿಕರ್ತನ ಆರಾಧನೆಯನ್ನು ಬಿಟ್ಟಿರುವರು. ಅವರು ತಮ್ಮ ಹೃದಯ, ತಮ್ಮ ಧೈರ್ಯ ಮತ್ತು ತಮ್ಮ ಯೋಚನೆಗಳೊಂದಿಗೆ ಲೌಕಿಕ ಚಟುವಟಿಕೆಗಳಲ್ಲಿ ಬಿದ್ದಿರುವರು. ನಾನು ಬರದೆ ಇರುತ್ತಿದ್ದರೆ ಈ ವಿಪತ್ತುಗಳು ಬಂದೆರಗುವುದು ಸ್ವಲ್ಪ ತಡವಾಗುತ್ತಿತ್ತು. ಆದರೆ ನನ್ನ ಆಗಮನದೊಂದಿಗೆ ದೇವನ ಕೋಪದ ರಹಸ್ಯ ನಿರ್ಧಾರಗಳು ದೀರ್ಘಕಾಲ ರಹಸ್ಯವಾಗಿದ್ದವು ಪ್ರಕಟವಾದುವು. ಅಲ್ಲಾಹನು ಹೇಳಿರುವನು: **ವಮಾ ಕುನ್ನಾ ಮುಅಧ್ದಿಬೀನ ಹತ್ತಾ ನಬ್‌ಅಸ ರಸೂಲಾ–** ಒಬ್ಬ ಸಂದೇಶವಾಹಕನನ್ನು ಕಳುಹಿಸುವ ತನಕ ನಾವು (ಜನರನ್ನು) ಶಿಕ್ಷಿಸುವುದಿಲ್ಲ. (ಪವಿತ್ರ ಖುರ್‌ಆನ್ 17: 16)

"ಪಶ್ಚಾತ್ತಾಪಗೊಂಡು ಅಲ್ಲಾಹನ ಕಡೆಗೆ ತಿರುಗುವವರು ರಕ್ಷಿಸಲ್ಪಡುವರು. ಯಾರು ವಿಪತ್ತು ಬಂದೆರಗುವ ಮೊದಲು ಭಯಭಕ್ತಿ ಹೊಂದುತ್ತಾರೋ ಅವರ ಮೇಲೆ ದಯೆ ತೋರಿಸಲ್ಪಡುವುದು. ನೀವು ಈ ಭೂಕಂಪಗಳಿಂದ ರಕ್ಷಿಸಲ್ಪಡುವಿರಿ ಎಂದು ನೀವು ಯೋಚಿಸುತ್ತೀರೇನು? ನೀವು ನಿಮ್ಮ ಸ್ವಂತ ಪ್ರಯತ್ನಗಳಿಂದ ನಿಮ್ಮನ್ನು ರಕ್ಷಿಸಿಕೊಳ್ಳುವಿರೇನು?

ಖಂಡಿತವಾಗಿ ಅದು ಸಾಧ್ಯವಾಗದು. ಆ ದಿನ ಮಾನವರ ಕೆಲಸಗಳು ಮುಕ್ತಾಯಗೊಳ್ಳುವುವು. ಅಮೇರಿಕ ಮೊದಲಾದ ಸ್ಥಳಗಳಲ್ಲಿ ಭೂಕಂಪಗಳು ಸಂಭವಿಸಿದುವು; ಆದರೆ ನಿಮ್ಮ ದೇಶ ಸುರಕ್ಷಿತವಾಗಿದೆ ಎಂದು ನೀವು ಯೋಚಿಸಬೇಡಿ. ನಾನು ನೋಡುತ್ತಿದ್ದೇನೆ. ಪ್ರಾಯಶಃ ನೀವು ಅವರಿಗಿಂತ ಹೆಚ್ಚು ಕಷ್ಟವನ್ನು ಅನುಭವಿಸುವಿರಿ. ಓ ಯುರೋಪು, ನೀನು ಸುರಕ್ಷಿತವಾಗಿಲ್ಲ. ಓ ಏಶಿಯಾ, ನೀನು ಸಹ ಸುರಕ್ಷಿತವಾಗಿಲ್ಲ. ಓ ದ್ವೀಪಗಳ ನಿವಾಸಿಗಳೇ, ಯಾವುದೇ ಮಿಥ್ಯ ದೇವ ನಿಮ್ಮ ಸಹಾಯಕ್ಕೆ ಬರಲಾರನು. ನಾನು ನಗರಗಳನ್ನು ಕುಸಿದು ಬೀಳುತ್ತಿರುವುದಾಗಿ ಕಾಣುತ್ತೇನೆ. ಜನನಿಬಿಡ ಪ್ರದೇಶಗಳನ್ನು ಬರಿದಾಗಿರುವುದಾಗಿ ಕಾಣುತ್ತೇನೆ. ಆ ಏಕ ದೇವನು ಒಂದು ಕಾಲಾವಧಿ ತನಕ ಮೌನವಾಗಿದ್ದನು. ಅವನ ಕಣ್ಣಮುಂದೆ ದುಷ್ಕೃತ್ಯಗಳು ನಡೆಯುತ್ತಿದ್ದವು. ಅವನು ಸುಮ್ಮಗಿದ್ದನು. ಆದರೆ ಅವನು ಈಗ ಉಗ್ರರೂಪದಲ್ಲಿ ತನ್ನ ವದನವನ್ನು ತೋರಿಸುವನು. ಯಾರ ಕಿವಿ ಆಲಿಸುತ್ತಿದೆಯೋ ಆಲಿಸಲಿ. ಆ ಕಾಲವು ದೂರವೇನೂ ಇಲ್ಲ. ಜನರನ್ನು ಅಲ್ಲಾಹನ ಸಂರಕ್ಷಣೆಯ ಅಡಿಯಲ್ಲಿ ಜಮಾಯಿಸಲು ನಾನು ಪ್ರಯತ್ನಿಸಿದೆ. ಆದರೆ ವಿಧಿಲಿಖಿತವು ಈಡೇರಬೇಕಾಗಿತ್ತು. ನಾನು ಸತ್ಯವಾಗಿ ಹೇಳುತ್ತೇನೆ– ಈ ದೇಶದ ಸರದಿ ಸಹ ಬಹಳ ಹತ್ತಿರವಾಗುತ್ತಾ ಇದೆ. ನೂಹರ ಕಾಲದ ಸ್ಥಿತಿ ನಿಮ್ಮ ಕಣ್ಣುಗಳ ಮುಂದೆ ಕಾಣಿಸುವುದು. ಲೂತರ ದೇಶದ ಘಟನೆ ನೀವು ಸ್ವತಃ ನಿಮ್ಮ ಕಣ್ಣುಗಳ ಮುಂದೆ ಕಾಣುವಿರಿ. ಆದರೆ ಅಲ್ಲಾಹನು ಬಹಳ ನಿಧಾನವಾಗಿ ತನ್ನ ಕೋಪವನ್ನು ಪ್ರಕಟಿಸುತ್ತಾನೆ. ನಿಮ್ಮ ಮೇಲೆ ಕರುಣೆದೋರಿಸಲ್ಪಡಲು ನೀವು ಪಶ್ಚಾತ್ತಾಪಗೊಂಡು ಕ್ಷಮೆ ಯಾಚಿಸುತ್ತಾ ಅಲ್ಲಾಹನ ಕಡೆಗೆ ತಿರುಗಿರಿ. ದೇವನನ್ನು ಬಿಟ್ಟು ಬಿಡುವವನು ಒಂದು ಕ್ರಿಮಿಯಾಗಿದ್ದಾನೆ; ಅವನು ಮನುಷ್ಯನಲ್ಲ. ದೇವನಿಗೆ ಭಯಪಡದವನು ಜೀವಂತನಲ್ಲ; ಅವನು ಮೃತನು." (ಹಖೀಖತುಲ್ ವಹೀ, ರೂಹಾನೀ ಖಝಾಇನ್– ಸಂಪುಟ 22 ಪುಟ 268–269)

## ಇಸ್ಲಾಮಿಗೆ ನಷ್ಟವಾದ ವೈಭವವನ್ನು ಪುನಃಸ್ಥಾಪಿಸಲು ಹಝ್ರತ್ ವಾಗ್ದತ್ತ ಮಸೀಹರ(ಅ) ಜಮಾಅತಿಗೆ ಸೇರಿ ಪ್ರಯತ್ನಿಸಬೇಕಾದುದು ಆವಶ್ಯಕ

ಇಸ್ಲಾಮಿನ ಪುನಶ್ಚೇತನಕ್ಕೋಸ್ಕರ, ಇಸ್ಲಾಮ್‌ಗೆ ನಷ್ಟವಾಗಿರುವ ವೈಭವವನ್ನು ಮರಳಿ ತರಲಿಕ್ಕೋಸ್ಕರ, ಹಝ್ರತ್ ಮುಹಮ್ಮದ್ ಪೈಗಂಬರರ ﷺ ವಿರುದ್ಧ ಮಾಡುವ ದೋಷಾರೋಪಗಳನ್ನು ಪ್ರತಿರೋಧಿಸಲು ಅಲ್ಲಾಹನು ಯಾವ ಪಹಿಲ್ವಾನನ್ನು ನಿಲ್ಲಿಸಿರುವನೋ

ಅವರನ್ನು ಹಿಂಬಾಲಿಸುವ ಮೂಲಕ ಮತ್ತು ಅಲ್ಲಾಹನು ಅವರಿಗೆ ನೀಡಿದ ಸಾಕ್ಷ್ಯಾಧಾರಗಳ ಮೂಲಕ ಹಾಗೂ ಅವರ ಉಪದೇಶಗಳನ್ನು ಅನುಸರಿಸುವ ಮೂಲಕ ಇಸ್ಲಾಮ್ ಮತ್ತು ಹಝ್ರತ್ ಮುಹಮ್ಮದ್ ರಸೂಲರ ﷺ ಪತಾಕೆ ಪೂರ್ಣ ಭವ್ಯತೆಯಿಂದ ಲೋಕದಲ್ಲಿ  ಹಾರಾಡುವುದು – **ಇನ್‌ಶಾ ಅಲ್ಲಾಹ್** (ಅಲ್ಲಾಹನು ಇಚ್ಛಿಸಿದರೆ) ಅದು ಹಾರಾಡುತ್ತಲೇ ಇರುವುದು.

ಹಝ್ರತ್ ಮಸೀಹ್ ಮೌಊದ್(ಅ) ಈ ಕಾಲಘಟ್ಟದ ಮಹತ್ವದ ಬಗ್ಗೆ ಜನರ ಗಮನಹರಿಸುತ್ತಾ ಹೇಳಿದುದರ ಸಾರಾಂಶ ಹೀಗಿದೆ: ಈಗ ಇಸ್ಲಾಮ್ ಧರ್ಮಕ್ಕೆ ಕಠಿಣ ಕಷ್ಟದ ದಿನಗಳಾಗಿವೆ. ಆದುದರಿಂದ ಇಸ್ಲಾಮಿಗೆ ನಷ್ಟವಾದ ವೈಭವವನ್ನು ಮರಳಿ ತರಲು ಅಲ್ಲಾಹನು ಒಂದು ಜಮಾಅತನ್ನು ಸ್ಥಾಪಿಸಿದ್ದಾನೆ. ಆದುದರಿಂದ ಮುಸ್ಲಿಮರು ತಮ್ಮ ಹಟವನ್ನು ಬಿಟ್ಟು ಬಿಡಬೇಕು. ಅವರು ಯೋಚಿಸಬೇಕು – ಹಝ್ರತ್ ಮುಹಮ್ಮದ್ ರಸೂಲರ ﷺ ಮೇಲೆ ಎಲ್ಲ ಕಡೆಗಳಿಂದಲೂ ದೂಷಣೆ ನಡೆಯುತ್ತಾ ಇರುವಾಗ ಅವರ ಗೌರವವನ್ನು ಕಾಪಾಡಲು ಅಲ್ಲಾಹನು ಉತ್ಸಾಹ ತೋರಿಸದೆ ಇರುವನೇ? ವಾಸ್ತವಿಕವಾಗಿ ಅವನು ಅವರಿಗೆ ಶುಭಾಶೀರ್ವಾದ ನೀಡುತ್ತಾ ಇರುತ್ತಾನೆ.

ಹಝ್ರತ್ ವಾಗ್ದತ್ತ ಮಸೀಹ್(ಅ) ಹೇಳಿದುದರ ಪೂರ್ಣ ರೂಪ ಹೀಗಿದೆ:

"ಈ ಕಾಲಘಟ್ಟ ಬಹಳ ಅನುಗ್ರಹಭರಿತವಾಗಿದೆ. ಕಲಹಪೀಡಿತ ಈ ದಿನಗಳಲ್ಲಿ ತನ್ನ ಅನುಗ್ರಹದಿಂದ ಹಝ್ರತ್ ಮುಹಮ್ಮದ್ ರಸೂಲರ ﷺ ಶ್ರೇಷ್ಠತೆಯನ್ನು ಪ್ರಕಟಿಸಲು ಅಲ್ಲಾಹನು ಅನುಗ್ರಹೀತ ನಿರ್ಧಾರ ಮಾಡಿದನು. ಇಸ್ಲಾಮ್‌ಗೆ ನೆರವು ನೀಡುವ ವ್ಯವಸ್ಥೆಯನ್ನು ತನ್ನ ಅದೃಶ್ಯ ಶಕ್ತಿ ಮೂಲಕ ಮಾಡಿದನು ಮತ್ತು ಒಂದು ಜಮಾಅತನ್ನು ಸ್ಥಾಪಿಸಿದನು. ಇಸ್ಲಾಮಿನ ಬಗ್ಗೆ ತಮ್ಮ ಹೃದಯಗಳಲ್ಲಿ ನೋವನ್ನು ಹೊಂದಿದವರೊಂದಿಗೆ, ಅವರಿಗೆ ಇಸ್ಲಾಮಿನ ಬಗ್ಗೆ ಗೌರವ ಭಾವನೆ ಇದ್ದರೆ, ನಾನು ಕೇಳುತ್ತೇನೆ – ಅವರು ಹೇಳಲಿ, ಈ ಕಾಲಘಟ್ಟಕ್ಕಿಂತ ಕೆಟ್ಟ ಕಾಲಘಟ್ಟ ಇದರ ಮೊದಲು ದಾಟಿ ಹೋಗಿದೆಯೇ? ಹಝ್ರತ್ ಮುಹಮ್ಮದ್ ಪೈಗಂಬರರ ﷺ ವಿರುದ್ಧ ಬೈದು ಅಪಮಾನ ಮಾಡಲಾಗಿದೆ ಮತ್ತು ಪವಿತ್ರ ಖುರ್‌ಆನನ್ನು ನಿಂದಿಸಲಾಗಿದೆ. ನನಗೆ ಮುಸ್ಲಿಮರ ಸ್ಥಿತಿಯ ಬಗ್ಗೆ ಅತ್ಯಂತ ಹೆಚ್ಚು ವಿಷಾದವೂ ದುಃಖವೂ ಆಗುತ್ತಿದೆ. ಕೆಲವು ಸಾರಿ ದುಃಖದಿಂದ ನಾನು

ಅಸ್ವಸ್ಥನಾಗುತ್ತೇನೆ. ಈ ಅಪಮಾನವನ್ನು ಅರಿತುಕೊಳ್ಳುವ ಪ್ರಜ್ಞೆ ಕೂಡ ಅವರಿಗಿಲ್ಲವಾಗಿದೆ. ಏನು, ಹಝ್ರತ್ ಮುಹಮ್ಮದ್ ಪೈಗಂಬರರ ﷺ ಗೌರವ ಕಾಪಾಡುವ ಕಾಳಜಿ ಅಲ್ಲಾಹನಿಗಿರಲಿಲ್ಲವೇ? ಇಷ್ಟೆಲ್ಲ ಬೈಗಳನ್ನು ಆಲಿಸಿ ಕೂಡ ಅಲ್ಲಾಹನು ಇಸ್ಲಾಮಿನ ವಿರೋಧಿಗಳ ಬಾಯಿ ಮುಚ್ಚಿಸಲು ಒಂದು ದೈವಿಕ ಜಮಾಅತನ್ನು ಸ್ಥಾಪಿಸಿ ಲೋಕದಲ್ಲಿ ಹಝ್ರತ್ ಪೈಗಂಬರರ ﷺ ಶ್ರೇಷ್ಠತೆ ಮತ್ತು ಪರಿಶುದ್ಧತೆಯನ್ನು ಪ್ರಚಾರ ಮಾಡಲು ಏರ್ಪಾಡು ಮಾಡದೆ ಬಿಟ್ಟು ಬಿಡುವನೇ? ಅಲ್ಲಾಹನು ಮತ್ತು ಅವನ ದೂತರು ಹಝ್ರತ್ ಪೈಗಂಬರರಿಗೆ ﷺ ಶುಭಾಶೀರ್ವಾದ ನೀಡುತ್ತಾ ಇರುವಾಗ, ಅವರು ಅಪಮಾನಿತರಾದಾಗ ಅವರ ಗೌರವ ಕಾಪಾಡಲು ಈ ಜಮಾಅತನ್ನು ಅಲ್ಲಾಹನು ಸ್ಥಾಪಿಸಿದನು."

(ಮಲ್‌ಫೂಝಾತ್ – ಭಾಗ 3 ಪುಟ 8–9 ಹೊಸ ಮುದ್ರಣ)

ತಮ್ಮನ್ನು ಹಝ್ರತ್ ವಾಗ್ದತ್ತ ಮಸೀಹರೊಂದಿಗೆ[ಅ] ಸಂಬಂಧಿಸಿದವರೆಂದು ಹೇಳುವವರ ಮೇಲೆ ಬಹಳ ದೊಡ್ಡ ಜವಾಬ್ದಾರಿ ಇದೆ ಎಂದು ಮೇಲಿನ ಉಲ್ಲೇಖದಿಂದ ತಿಳಿಯಬಹುದು.

ಹಝ್ರತ್ ಮುಹಮ್ಮದ್ ರಸೂಲರ ﷺ ವಿರುದ್ಧ ನಿಂದನೆಯ ಬಿರುಗಾಳಿ ಬೀಸುತ್ತಿರುವಾಗ ಅಲ್ಲಾಹನ ದೂತರು ಅವರಿಗೆ ಶುಭಾಶೀರ್ವಾದ ಕೋರುತ್ತಾ ಇರಬಹುದು. ಅವರು ಶುಭಾಶೀರ್ವಾದ ಕೋರುತ್ತಲೇ ಇರುವರು. ಹಝ್ರತ್ ಮುಹಮ್ಮದ್ ಪೈಗಂಬರರ ﷺ ಸತ್ಯಸಂಧ ಪ್ರೇಮಿ ಮತ್ತು ಈ ಕಾಲಘಟ್ಟದ ಇಮಾಮ್ ಆಗಿರುವವರ ಜಮಾಅತಿಗೆ ಸೇರಿದವರಾದ ನಾವು ನಮ್ಮ ಪ್ರಾರ್ಥನೆಗಳಲ್ಲಿ ದುರೂದನ್ನು ಅಧಿಕಗೊಳಿಸಿ ಸತ್ಯಭರಿತ ಹೃದಯದೊಂದಿಗೆ ಅದನ್ನು ಹರಡಬೇಕು. ವಾತಾವರಣದ ಪ್ರತಿಯೊಂದು ಕಣ ಕಣವೂ ದುರೂದಿನಿಂದ ತುಂಬಲಿ. ನಮ್ಮ ಎಲ್ಲ ಪ್ರಾರ್ಥನೆಗಳು ದುರೂದ್ ಮೂಲಕ ಅಲ್ಲಾಹನ ದರಬಾರಿಗೆ ತಲಪಲಿ ಮತ್ತು ಸ್ವೀಕಾರ ಪಡೆಯುವಂತಾಗಲಿ. ಹಝ್ರತ್ ಮುಹಮ್ಮದ್ ರಸೂಲರೊಂದಿಗೆ ﷺ ನಮಗಿರುವ ಪ್ರೀತಿಯ ಪ್ರಕಟಣೆ ಹೀಗೆ ಆಗಬೇಕು. ಅವರ ಕುಟುಂಬದೊಂದಿಗೆ ಸಹ ನಮ್ಮ ಪ್ರೀತಿಯ ಪ್ರಕಟಣೆ ಹೀಗೆಯೇ ಆಗಬೇಕು. ಅಲ್ಲಾಹನು ಮುಸ್ಲಿಮ್ ಸಮುದಾಯಕ್ಕೆ ಬುದ್ಧಿ ನೀಡಲಿ, ಅರಿವು ನೀಡಲಿ. ಅವರು ಅಲ್ಲಾಹನು ಕಳುಹಿಸಿದ ಮಹಾತ್ಮರನ್ನು

ಗುರುತಿಸುವಂತಾಗಲಿ. ಅವರು ಹಝ್ರತ್ ಮುಹಮ್ಮದ್ ರಸೂಲರ ﷺ ಆಧ್ಯಾತ್ಮಿಕ ಪುತ್ರನ ಈ ಜಮಾಅತಿನಲ್ಲಿ ಸೇರಿಕೊಂಡು ರಾಜಿ, ಶಾಂತಿ ಮತ್ತು ಪ್ರೀತಿಯ ವಾತಾವರಣವನ್ನು ಪುನಃ ಸ್ಥಾಪಿಸಿ ಲೋಕದಲ್ಲಿ ಹಝ್ರತ್ ಪೈಗಂಬರರ ﷺ ಸ್ಥಾನವನ್ನು ಉನ್ನತಗೊಳಿಸುವವರಾಗಲಿ. ಅಲ್ಲಾಹನು ಈ ಜನರಿಗೆ ಬುದ್ಧಿಯನ್ನು ದಯಪಾಲಿಸಲಿ. ತಾವು ಹಝ್ರತ್ ಪೈಗಂಬರರೊಂದಿಗೆ ﷺ ಸಂಬಂಧ ಹೊಂದಿದವರೆಂದು ಹೇಳಿಕೊಂಡು ಹದಿನಾಲ್ಕು ನೂರು ವರ್ಷಗಳ ನಂತರ ಸಹ ಮುಹರ್ರಮ್ ತಿಂಗಳಲ್ಲಿ ಮುಸ್ಲಿಮರು ಮುಸ್ಲಿಮರ ರಕ್ತ ಹರಿಸುತ್ತಿದ್ದಾರೆ. ಅವರು ಪಾಠ ಕಲಿಯಲೇ ಇಲ್ಲ. ಈಗ ಸಹ ರಕ್ತಪಾತ ಮಾಡುತ್ತಾ ಇರುತ್ತಾರೆ. ಅಲ್ಲಾಹನು ಅವರಿಗೆ ಬುದ್ಧಿ ನೀಡಲಿ. ಅವರು ಇಂತಹ ಕೆಲಸ ಮಾಡದಿರಲಿ ಮತ್ತು ತಮ್ಮ ಹೃದಯಗಳಲ್ಲಿ ದೇವ ಭಯ ಉಂಟುಮಾಡಲಿ ಹಾಗೂ ಇಸ್ಲಾಮಿನ ನೈಜ ಉಪದೇಶಗಳನ್ನು ಅನುಸರಿಸುವವರಾಗಲಿ. ಅವರು ಹೀಗೆಲ್ಲ ಮಾಡುವುದು ಈ ಕಾಲಘಟ್ಟದ ಇಮಾಮರನ್ನು ಗುರುತಿಸದ ಕಾರಣದಿಂದಾಗಿದೆ; ಅವರು ಹಝ್ರತ್ ಪೈಗಂಬರರ ﷺ ಆಜ್ಞೆಯನ್ನು ತಿರಸ್ಕರಿಸಿದ ಕಾರಣದಿಂದಾಗಿದೆ.

ಈಗ ಪ್ರತಿ ಅಹ್ಮದಿಗೆ ಬಹಳ ದೊಡ್ಡ ಹೊಣೆಗಾರಿಕೆ ಇದೆ. ಅಹ್ಮದಿಯರು ಈ ಕಾಲದ ಇಮಾಮರನ್ನು ಗುರುತಿಸಿದ್ದಾರೆ. ಅವರು ಹಝ್ರತ್ ಮುಹಮ್ಮದ್ ರಸೂಲರಿಗೋಸ್ಕರ ﷺ ಬಹಳ ದುರೂದ್ ಪ್ರಾರ್ಥನೆ ಮಾಡಬೇಕು. ತಮ್ಮನ್ನು ಮತ್ತು ಇತರ ಮುಸ್ಲಿಮರನ್ನು ವಿನಾಶದಿಂದ ರಕ್ಷಿಸಲು ಅಲ್ಲಾಹನನ್ನು ಬೇಡಿಕೊಳ್ಳಬೇಕು.

ಹಝ್ರತ್ ಮುಹಮ್ಮದ್ ರಸೂಲರೊಂದಿಗೆ ﷺ ನಮಗೆ ಇರುವ ಪ್ರೀತಿ ನಮ್ಮೊಂದಿಗೆ ಆವಶ್ಯಪಡುವುದೇನೆಂದರೆ, ನಾವು ಮುಸ್ಲಿಮ್ ಸಮುದಾಯಕ್ಕೋಸ್ಕರ ಪ್ರಾರ್ಥಿಸಬೇಕು. ಅನ್ಯರ ಉದ್ದೇಶಗಳು ಸರಿಯಲ್ಲ. ಇನ್ನೆಷ್ಟು ಕಷ್ಟಗಳಲ್ಲೂ ಪರೀಕ್ಷೆಗಳಲ್ಲೂ ವಿಪತ್ತುಗಳಲ್ಲೂ ಈ ಮುಸ್ಲಿಮರು ಹಿಡಿಗೂಡಲ್ಪಡುವರು ಎಂದು ತಿಳಿಯದು. ಅವರ ವಿರುದ್ಧ ಏನೆಲ್ಲ ಯೋಜನೆಗಳು ರೂಪಿಸಲ್ಪಡುತ್ತವೆ ಎಂದು ತಿಳಿಯದು. ಅಲ್ಲಾಹನೇ ದಯೆದೋರಲಿ.

ಅಲ್ಲಾಹನು ನಮ್ಮನ್ನು ಯಾವಾಗಲೂ ನೇರಮಾರ್ಗದಲ್ಲಿ ನಡೆಸುತ್ತಾ ಇರಲಿ. ನಾವು ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸುವ ದಾಸರಾಗೋಣ. ನಮಗೆ ಈ ಕಾಲಘಟ್ಟದ ಇಮಾಮರನ್ನು ನಂಬುವ ಭಾಗ್ಯ ನೀಡಿದುದಕ್ಕೆ ನಾವು

ಅಲ್ಲಾಹನಿಗೆ ಕೃತಜ್ಞತೆ ಅರ್ಪಿಸೋಣ. ನಾವು ನಂಬಿದ ನಂತರ ನಮ್ಮ ಕರ್ತವ್ಯಗಳನ್ನು ಈಡೇರಿಸುವ ಸೌಭಾಗ್ಯ ನಮಗೆ ಅಲ್ಲಾಹನು ದಯಪಾಲಿಸಲಿ. ಯಾವಾಗಲೂ ನಮ್ಮನ್ನು ಅಲ್ಲಾಹನಿಗೆ ಪ್ರಿಯವಾದ ಮಾರ್ಗದಲ್ಲಿ ನಡೆಯುವರನ್ನಾಗಿ ಮಾಡಲಿ. (ಜುಮುಅ ಖುತ್‌ಬ 24–02–2006)

======================================

**ಅಹ್ಮದಿಯಾ ಜಮಾಅತಿನ ಇಮಾಮರಾದ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ (ಅಯ್ಯದಹುಲ್ಲಾಹು ತಆಲಾ– ಅಲ್ಲಾಹನು ಅವರಿಗೆ ಸರ್ವ ಸಹಾಯಗಳನ್ನು ದಯಪಾಲಿಸಲಿ) 2012 ಸೆಪ್ಟಂಬರ್ ದಿನಾಂಕ 21ರಂದು ನೀಡಿದ ಜುಮುಅ ಖುತ್‌ಬ ಮತ್ತು ಪತ್ರಿಕಾಗೋಷ್ಠಿ ಬಗ್ಗೆ ಲೋಕದ ವಿವಿಧ ಸಂಪರ್ಕ ಮಾಧ್ಯಮಗಳ ವಿಮರ್ಶೆಗಳು**

بِسۡمِ اللّٰہِ الرَّحۡمٰنِ الرَّحِیۡمِ

ಅಹ್ಮದಿಯಾ ಮುಸ್ಲಿಮ್ ಜಮಾಅತ್.  ಪ್ರೆಸ್ ಡೆಸ್ಕ್ ಲಂಡನ್

22–9–2012

**ಮುಸ್ಲಿಮರ ಜಾಗತಿಕ ನಾಯಕರಿಂದ ಇಸ್ಲಾಮ್ ವಿರೋಧಿ ಫಿಲ್ಮ್ ಬಗ್ಗೆ ಖಂಡನೆ**

ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಸರ್ವೋಚ್ಚ ನಾಯಕ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಸಾಹಿಬ್ ಅವರು, ಮುಸ್ಲಿಮರು ಫಿಲ್ಮ್ ಬಗ್ಗೆ ಪ್ರಕಟಿಸಿದ ದುಃಖ ಮತ್ತು ಕೋಪ ಸರಿಯಾದುದೇ ಆಗಿದೆ; ಆದರೆ ಹಿಂಸಾತ್ಮಕ ಪ್ರತಿಕ್ರಿಯೆಯನ್ನು ಖಂಡಿಸಬೇಕು ಎಂದರು. ಅಹ್ಮದಿಯಾ ಜಮಾಅತಿನ ಸರ್ವೋಚ್ಚ ನಾಯಕರೂ ಪಂಚಮ ಖಲೀಫತುಲ್ ಮಸೀಹರೂ ಆಗಿರುವ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ (ಅಯ್ಯದಹುಲ್ಲಾಹು ತಆಲಾ) ಮುಸ್ಲಿಮರ ಭಾವನೆಗಳನ್ನು ರೊಚ್ಚಿಗೆಬ್ಬಿಸುವ INNOCENCE OF MUSLIMS ವಿರುದ್ಧ ಪ್ರತಿಭಟಿಸಲು ಲೋಕದ ಎಲ್ಲ ಮುಸ್ಲಿಮರು ಶಾಂತಿಯಿಂದ ಒಗ್ಗೂಡಬೇಕೆಂದು ಉಪದೇಶಿಸಿದರು. ಅಭಿಪ್ರಾಯ ಪ್ರಕಟಣೆಯ ಸ್ವಾತಂತ್ರ್ಯಕ್ಕೆ ಪರಿಮಿತಿಗಳನ್ನು ನಿಶ್ಚಯಿಸಬೇಕೆಂದೂ ಎಲ್ಲ ಜನರ ಧಾರ್ಮಿಕ ಭಾವನೆಗಳನ್ನು ಸಂರಕ್ಷಿಸಬೇಕೆಂದೂ ಅವರು ಹೇಳಿದರು.

ಲಂಡನ್‌ನ ಬೈತುಲ್ ಫುತೂಹ್ ಮಸ್‌ಜಿದ್‌ನಲ್ಲಿ 2012 ಸೆಪ್ಟಂಬರ್ 21ರಂದು ನೀಡಿದ ಶುಕ್ರವಾರದ ಖುತ್‌ಬದಲ್ಲಿ ಅವರು ಹೀಗೆ ಹೇಳಿದರು: ಈ ಫಿಲ್ಮ್ ಮೂಲಕ ಮತ್ತು ಒಂದು ಪ್ರಸಿದ್ಧ ಫ್ರೆಂಚ್ ಮ್ಯಾಗಜಿನ್‌ನಲ್ಲಿ ಪುನರ್ ಮುದ್ರಿತ ವ್ಯಂಗ್ಯ ಚಿತ್ರಗಳಿಂದ ಜಗತ್ತಿನ ಎಲ್ಲ ಮುಸ್ಲಿಮರಿಗೆ ಬಹಳ ದುಃಖ ಉಂಟಾಗಿದೆ.

ವಿವಿಧ ಸಂಪರ್ಕ ಮಾಧ್ಯಮಗಳ ಪ್ರತಿನಿಧಿಗಳು ಈ ಹೇಳಿಕೆ ನೀಡುವಾಗ ಹಾಜರಿದ್ದರು. ಬಿ.ಬಿ.ಸಿ. ನ್ಯೂಸ್, ಬಿ.ಬಿ.ಸಿ. ನ್ಯೂಸ್ ನೈಟ್, ಸ್ಕೈ ನ್ಯೂಸ್, ಸ್ಕೈ ಅರಬಿ, ರಾಯ್‌ಟರ್, ಪ್ರೆಸ್ ಎಸೋಸಿಯೇಶನ್ ಮತ್ತು ಬೇರೆ ಸಂಸ್ಥೆಗಳ ಪ್ರತಿನಿಧಿಗಳೂ ಅಲ್ಲಿ ಹಾಜರಿದ್ದರು. ಅವರೆಲ್ಲರೂ ಜುಮುಅ ಖುತ್‌ಬದ ನಂತರ ಹಝ್ರತ್ ಖಲೀಫರನ್ನು ಭೇಟಿಯಾದರು.

ಹಝ್ರತ್ ಖಲೀಫತುಲ್ ಮಸೀಹರು ಹೀಗೆ ಹೇಳಿದರು: "ಇಸ್ಲಾಮ್ ವಿರೋಧಿ ಫಿಲ್ಮ್ ನಿರ್ಮಾಣ ಮತ್ತು ಇತರ ಆಕ್ರಮಣಗಳ ಹಿಂದೆ ಇಸ್ಲಾಮ್ ಬಗ್ಗೆ ಇರುವ ಸ್ಥಿರವಾದ ಭಯವು ಇದೆ. ಇಸ್ಲಾಮ್ ಎದುರಿಗೆ ಅವರು ಅನುಭವಿಸಿದ ಸೋಲಿನ ಕಾರಣದಿಂದ ಅವರು ಅಭಿಪ್ರಾಯ ಪ್ರಕಟಣೆಯ ಸ್ವಾತಂತ್ರ್ಯದ ಹೆಸರಿನಲ್ಲಿ ಅವಿವೇಕದ ಅನುಚಿತ ಕೆಲಸಗಳನ್ನು ಮಾಡುತ್ತಿದ್ದಾರೆ."

ವಿವಿಧ ಮುಸ್ಲಿಮ್ ದೇಶಗಳಲ್ಲಿ ಭೀಕರವಾದಿಗಳು ಹಿಂಸಾತ್ಮಕವಾಗಿ ಪ್ರತಿಭಟಿಸಿದುದನ್ನು ಹಝ್ರತ್ ಖಲೀಫರು ಖಂಡಿಸಿದರು. ರಾಯಭಾರಿಗಳನ್ನೂ ರಾಯಭಾರಿ ಕಚೇರಿಗಳ ಉದ್ಯೋಗಿಗಳನ್ನೂ ನಿರಪರಾಧಿ ಜನರನ್ನೂ ಕೊಲ್ಲುವುದು ಇಸ್ಲಾಮ್ ತತ್ವಗಳಿಗೆ ಪೂರ್ಣ ವಿರುದ್ಧವಾಗಿದೆ ಎಂದೂ ಕಟ್ಟಡಗಳನ್ನೂ ಇತರ ಸ್ವತ್ತುಗಳನ್ನೂ ಸುಟ್ಟು ಹಾಕುವುದು ತಪ್ಪು ಕೆಲಸಗಳಾಗಿವೆ ಮತ್ತು ಅವುಗಳಿಂದ ಇಸ್ಲಾಮನ್ನು ಅಪಕೀರ್ತಿಗೆ ಗುರಿ ಪಡಿಸುವವರಿಗೆ ಲಾಭವಾಗಿದೆ ಎಂದೂ ಹೇಳಿದರು.

ಕೆಲವು ಹಕ್ಕುಗಳಿಗೆ ಬೇರೆ ಕೆಲವು ಹಕ್ಕುಗಳ ಮೇಲೆ ಆದ್ಯತೆ ನೀಡುವ ಬಗ್ಗೆ ಹಝ್ರತ್ ಖಲೀಫರು ಹೀಗೆಂದರು: "ಅಭಿಪ್ರಾಯ ಸ್ವಾತಂತ್ರ್ಯದ ಹೆಸರಿನಲ್ಲಿ ಲೋಕದಲ್ಲೆಲ್ಲ ಶಾಂತಿಯನ್ನು ನಾಶಮಾಡಬಾರದು."

ಹಝ್ರತ್ ಖಲೀಫತುಲ್ ಮಸೀಹರು ಜಾಗತಿಕ ನಾಯಕರೊಂದಿಗೆ ಮತ್ತು ಜನರೊಂದಿಗೆ ಹೇಳಿದರು: ಇಂತಹ ವ್ಯಂಗ್ಯ ಚಿತ್ರಗಳನ್ನು ಮತ್ತು ಫಿಲ್ಮ್‌ಗಳನ್ನು ನಿರ್ಮಿಸುವವರಿಗೆ ಬೆಂಬಲ ನೀಡಿ ಮುಸ್ಲಿಮರ ಧಾರ್ಮಿಕ ಭಾವನೆಗಳನ್ನು ನೋಯಿಸಿ ನಿಷ್ಕಳಂಕ ಜನರನ್ನು ಕಷ್ಟಕ್ಕೊಳಪಡಿಸಿ ಲೋಕದಲ್ಲಿ ದ್ವೇಷವನ್ನು ವರ್ಧಿಸಲು ತಾವು ಪ್ರಯತ್ನಿಸುತ್ತಾ ಇಲ್ಲವೇ ಎಂದು ಯೋಚಿಸಬೇಕು.

ಮುಸ್ಲಿಮರನ್ನು ರೊಚ್ಚಿಗೆಬ್ಬಿಸಿದ ಕೃತ್ಯಗಳನ್ನು ಖಂಡಿಸಿ ತಮ್ಮ ಪ್ರತಿಭಟನೆಯನ್ನು ಸೂಚಿಸಲು ಲೋಕದ ಎಲ್ಲ ಮುಸ್ಲಿಮರು ಒಗ್ಗೂಡಿ ಪ್ರಯತ್ನಿಸಬೇಕೆಂದು ಅವರು ಹೇಳಿದರು. ಮುಸ್ಲಿಮ್ ಸರಕಾರಗಳು ಮತ್ತು ಪಾಶ್ಚಿಮಾತ್ಯ ದೇಶಗಳಲ್ಲಿ ವಾಸಿಸುವ ಮುಸ್ಲಿಮರು ಜೊತೆ ಸೇರಿ ಪವಿತ್ರ ಖುರ್‌ಆನಿನ ಶಾಂತಿ ಪ್ರತಿಪಾದಕ ಉಪದೇಶಗಳನ್ನು ಲೋಕದ ಮುಂದಿರಿಸಬೇಕೆಂದು ಅವರು ಹೇಳಿದರು.

ಯಾವಾಗಲೂ ಪ್ರತಿಯೊಂದು ಹಂತದಲ್ಲೂ ಹಝ್ರತ್ ಮುಹಮ್ಮದ್ ಪೈಗಂಬರರ ﷺ ಪವಿತ್ರ ಸ್ವಭಾವಗುಣಗಳ ವಿರುದ್ಧ ಆಕ್ಷೇಪಗಳನ್ನು

ಪ್ರತಿರೋಧಿಸಲು ಒಮ್ಮತದ ಮತ್ತು ಶಾಂತಿಯುತ ಪ್ರಯತ್ನಮಾಡಬೇಕೆಂದು ಅವರು ಹೇಳಿದರು.

"ಭೀಕರ ಕೃತ್ಯ ಇದಕ್ಕೆ ಉತ್ತರವಾಗಲಾರದು. ಇದಕ್ಕೆ ಉತ್ತರ ನೀಡಬೇಕಾದುದು ನಾನು ಹೇಳುತ್ತಾ ಇರುವ ಹಾಗೆ ಆಗಬೇಕು. ಮುಸ್ಲಿಮರು ತಮ್ಮ ಸ್ವಭಾವಗುಣಗಳನ್ನು ಸುಧಾರಣೆ ಮಾಡಬೇಕು. ಮಾನವೀಯತೆಯ ರಕ್ಷಕರಾದ ಹಝ್ರತ್ ಮುಹಮ್ಮದ್ ಪೈಗಂಬರರಿಗೆ ﷺ ದುರೂದ್ ಮತ್ತು ಸಲಾಮ್ ಅರ್ಪಿಸಬೇಕು. ಲೌಕಿಕ ಪ್ರಯತ್ನವಾಗಿ ಮುಸ್ಲಿಮ್ ದೇಶಗಳು ಒಟ್ಟಿಗೆ ಸೇರಬೇಕು ಮತ್ತು ಪಶ್ಚಿಮ ದೇಶಗಳಲ್ಲಿ ವಾಸಿಸುವ ಮುಸ್ಲಿಮರು ತಮ್ಮ ಮತಗಳ ಶಕ್ತಿಯನ್ನು ಪ್ರಕಟಿಸಬೇಕು" ಎಂದು ಅವರು ಹೇಳಿದರು.

ಹುಝೂರ್ ಹೇಳಿದರು: ಕೆಲವು ವರ್ಷಗಳಿಂದ ಇಸ್ಲಾಮಿನ ವಿರುದ್ಧ ಆಕ್ರಮಣಗಳು ವರ್ಧಿಸಿವೆ. ಅದರೊಂದಿಗೆ ಕೆಲವು ಮುಸ್ಲಿಮರ ಅಸಂಬದ್ಧ ವರ್ತನೆಗಳು ಸಹ ಖಂಡನೀಯ ವಿಷಯವಾಗಿವೆ. ಆದರೆ ಒಂದು ವಿಷಯ ಮರೆತು ಬಿಡಬಾರದು. ಬಹುತೇಕ ಸಂದರ್ಭಗಳಲ್ಲಿ ಮುಸ್ಲಿಮೇತರರೇ ಕಲಹವನ್ನು ಉತ್ತೇಜಿಸಿದರು.

ಇಸ್ಲಾಮ್ ಧರ್ಮದ ಸರಿಯಾದ ರೂಪವನ್ನು ಲೋಕದ ಮುಂದಿರಿಸಲು ಅಹ್ಮದಿಯಾ ಜಮಾಅತ್ ಮಾಡುವ ಪ್ರಯತ್ನದ ಬಗ್ಗೆ ಹುಝೂರ್ ಹೀಗೆ ಹೇಳಿದರು:

"ಲೋಕದ ಸೇವೆಗೋಸ್ಕರ ನಮಗೆ ದೊರಕುವ ಸಂದರ್ಭಗಳನ್ನು ಅಹ್ಮದೀ ಮುಸ್ಲಿಮರಾದ ನಾವು ಕಳೆದುಕೊಳ್ಳುವುದಿಲ್ಲ. ಅಮೇರಿಕದಲ್ಲಿ ರಕ್ತದ ಆವಶ್ಯಕತೆ ಉಂಟಾದಾಗ ಅಹ್ಮದೀ ಮುಸ್ಲಿಮರು ಹನ್ನೆರಡು ಸಾವಿರ ಶೀಷೆ ರಕ್ತವನ್ನು ಸಂಗ್ರಹಿಸಿ ನೀಡಿದರು. ಈ ವರ್ಷ ಪುನಃ ರಕ್ತವನ್ನು ಸಂಗ್ರಹಿಸಲಾಗುವುದು. ಈಗ ಅದರ ಬಗ್ಗೆ ಪ್ರಯತ್ನ ಜಾರಿಯಲ್ಲಿದೆ. ನಾನು ಅವರೊಂದಿಗೆ, ಅಹ್ಮದೀ ಮುಸ್ಲಿಮರಾದ ನಾವು ಜೀವ ರಕ್ಷಿಸಲು ತಮ್ಮ ರಕ್ತವನ್ನು ನೀಡುತ್ತಿದ್ದೇವೆ. ಆದರೆ ನೀವು ನಿಮ್ಮ ಕೃತ್ಯಗಳಿಂದ ಮತ್ತು ಕೆಟ್ಟ ಕೃತ್ಯಗಳನ್ನು ಮಾಡುವವರನ್ನು ಬೆಂಬಲಿಸಿ ನಮ್ಮ ಹೃದಯಕ್ಕೆ ತೀವ್ರ ನೋವು ಮಾಡುತ್ತಿರುವಿರಿ."

ಹಝ್ರತ್ ಖಲೀಫತುಲ್ ಮಸೀಹರು ಕೊನೆಗೆ, ಹಝ್ರತ್ ಮುಹಮ್ಮದ್ ಪೈಗಂಬರರನ್ನು ﷺ ಅಪಮಾನಿಸಲು ಮಾಡಿದ ಎಲ್ಲ ಪ್ರಯತ್ನಗಳು ಸೋತು ಹೋಗುವ ಬಗ್ಗೆ ಹೀಗೆ ಹೇಳಿದರು:

ಈ ಕಾಲಘಟ್ಟದ ಇಮಾಮರ ಮಾತುಗಳನ್ನು ನೆನಪಿಡಿರಿ: "ಎಲ್ಲ ಜಯಗಳು ಆಕಾಶದಿಂದ ನಿರ್ಧರಿಸಲ್ಪಡುತ್ತವೆ. ನೀವು ಯಾವ ಸಂದೇಶವಾಹಕರನ್ನು ಅಪಮಾನಿಸಲು ಪ್ರಯತ್ನ ಮಾಡುತ್ತಾ ಇರುವಿರೋ ಅವರು ಲೋಕದ ಮೇಲೆ ಜಯಗಳಿಸುವರು."

ಶುಕ್ರವಾರದ ಜುಮುಅ ಖುತ್‌ಬ ನೀಡಿದ ನಂತರ ಪ್ರೆಸ್ ಕಾನ್‌ಫರೆನ್ಸ್‌ನಲ್ಲಿ ಹುಝೂರ್ ಸಂಪರ್ಕ ಮಾಧ್ಯಮಗಳ ಪ್ರತಿನಿಧಿಗಳೊಂದಿಗೆ ಹೇಳಿದರು: ಮುಸ್ಲಿಮರು ಹಝ್‌ರತ್ ಮುಹಮ್ಮದ್ ಪೈಗಂಬರರನ್ನು ﷺ ಅಸದೃಶ್ಯವಾಗಿ ಪ್ರೀತಿಸುತ್ತಾರೆ. ಒಂದು ಧರ್ಮದವರ ಪ್ರೀತಿಗೆ ಪಾತ್ರರಾದವರನ್ನು ಅಪಹಾಸ್ಯ ಮಾಡಿದರೆ ಆ ಧರ್ಮದ ಪ್ರತಿಯೊಬ್ಬನಿಗೆ ನೋವುಂಟಾಗುತ್ತದೆ. ಇದೇ ಕಾರಣದಿಂದ ಹಝ್‌ರತ್ ಮುಹಮ್ಮದ್ ಪೈಗಂಬರರನ್ನು ﷺ ದೂಷಿಸಿದರೆ ಎಲ್ಲ ಮುಸ್ಲಿಮರಿಗೆ ಅದರಿಂದ ನೋವುಂಟಾಗುತ್ತದೆ.

ಮೇಲೆ ಸೂಚಿಸಿದ ಫಿಲ್ಮ್ ಪ್ರದರ್ಶಿಸಿದ ಕಾರಣದಿಂದ ಉಂಟಾದ ಹಿಂಸಾತ್ಮಕ ಪ್ರತಿಭಟನೆ ಬಗ್ಗೆ ಪ್ರಶ್ನಿಸಿದಾಗ ಹುಝೂರ್ ಹೀಗೆಂದರು:

ಹಿಂಸಾತ್ಮಕ ಪ್ರತಿಭಟನೆ ಮಾಡುವುದು ಸರಿಯಲ್ಲ. ರಾಯಭಾರಿಗಳನ್ನೂ ರಾಯಭಾರಿ ಕಚೇರಿಗಳ ಉದ್ಯೋಗಿಗಳನ್ನೂ ಅಥವಾ ನಿರಪರಾಧಿಗಳಾದ ಯಾರನ್ನೂ ಕೊಲ್ಲುವುದು ಇಸ್ಲಾಮ್ ಧರ್ಮ ತತ್ವಗಳಿಗೆ ವಿರುದ್ಧವಾಗಿದೆ. ಪ್ರತಿಯೊಂದು ರೀತಿಯ ಪ್ರತಿಭಟನೆ ದೇಶದ ಕಾನೂನು ಕಾಯಿದೆಗಳಿಗನುಸಾರವಾಗಿರಬೇಕು. ಅದು ಶಾಂತಿಯುತವಾಗಿರಬೇಕು.

=========================================

THE EXPRESS TRIBUNE
23–9–2012

## ಇಸ್ಲಾಮ್ ವಿರೋಧಿ ಫಿಲ್ಮ್: ಇಸ್ಲಾಮ್ ವಿರೋಧಿ ಫಿಲ್ಮ್ ವಿರುದ್ಧ ಮುಸ್ಲಿಮರ ದುಃಖ ಮತ್ತು ರೋಷದ ಪ್ರಕಟಣೆ ಎಲ್ಲ ವಿಧಗಳಲ್ಲೂ ನ್ಯಾಯಬದ್ಧವಾಗಿದೆ ಎಂದು ಅಹ್ಮದಿಯಾ ಜಮಾಅತ್ ಇಮಾಮ್ ಹೇಳುತ್ತಾರೆ

ಜನರ ಧಾರ್ಮಿಕ ಭಾವನೆಗಳನ್ನು ಸಂರಕ್ಷಿಸಲು ಅಭಿಪ್ರಾಯ ಸ್ವಾತಂತ್ರ್ಯಕ್ಕೆ ಪರಿಮಿತಿಗಳನ್ನು ವಿಧಿಸಬೇಕು. ಇಸ್ಲಾಮ್ ವಿರೋಧಿ ಫಿಲ್ಮ್ ವಿರುದ್ಧ ಮುಸ್ಲಿಮರ ದುಃಖ ಮತ್ತು ರೋಷ ಪ್ರಕಟಣೆ ಎಲ್ಲ ವಿಧಗಳಲ್ಲೂ ನ್ಯಾಯಬದ್ಧವಾಗಿದೆ. ಆದರೆ ಹಿಂಸಾತ್ಮಕ ಪ್ರತಿಭಟನೆ ಖಂಡನೀಯವಾಗಿದೆ ಎಂದು ಅಹ್ಮದಿಯಾ ಜಮಾಅತಿನ ಇಮಾಮರು ಹೇಳಿದರು.

ಮಿರ್ಝಾ ಮಸ್‌ರೂರ್ ಅಹ್ಮದ್ (ಅಹ್ಮದಿಯಾ ಜಮಾಅತಿನ ಇಮಾಮ್) ಮಾಧ್ಯಮಗಳ ಪ್ರತಿನಿಧಿಗಳೊಂದಿಗೆ ಮಾತನಾಡುತ್ತಾ ಹೇಳಿದರು: ಲೋಕದ ಎಲ್ಲ ಮುಸ್ಲಿಮರು ಒಗ್ಗೂಡಿ ಈ ಫಿಲ್ಮ್ ವಿರುದ್ಧ ಪ್ರತಿಭಟಿಸಬೇಕು. ಅದು ಮುಸ್ಲಿಮ್ ಲೋಕದಲ್ಲಿ ತೀವ್ರ ದುಃಖ ಮತ್ತು ರೋಷದ ಭಾವನೆಗಳನ್ನು ಉದ್ರೇಕಿಸಿದೆ.

ಅಹ್ಮದಿಯಾ ಜಮಾಅತಿನ ಇಮಾಮ್ ಹೀಗೆ ಹೇಳಿಕೆ ನೀಡಿದರು: ಇಸ್ಲಾಮಿನ ಎದುರಿಗೆ ಉಂಟಾದ ಸೋಲಿನ ಕಾರಣದಿಂದ ಅಭಿಪ್ರಾಯ ಸ್ವಾತಂತ್ರ್ಯದ ಹೆಸರಿನಲ್ಲಿ ಇಂತಹ ನಿರರ್ಥಕ ಕೆಲಸಗಳನ್ನು ಮಾಡುತ್ತಾರೆ. ಅಭಿಪ್ರಾಯ ಸ್ವಾತಂತ್ರ್ಯದ ಹೆಸರಿನಲ್ಲಿ ಲೋಕದ ಶಾಂತಿಯನ್ನು ಕೆಡಿಸಲು ಅನುಮತಿ ನೀಡಬಾರದು. ಕೆಲವು ದೇಶಗಳಲ್ಲಿ ನಡೆದ ಪ್ರತಿಭಟನೆಗಳಲ್ಲಿ ರಾಯಭಾರಿಗಳು ಸಮೇತ ನಿರಪರಾಧಿಗಳು ಕೊಲ್ಲಲ್ಪಟ್ಟ ಘಟನೆಗಳ ಬಗ್ಗೆ ತೀವ್ರವಾಗಿ ಅವರು ಖಂಡಿಸಿದರು. ಅವರು ಹೇಳಿದರು: ಸ್ವತ್ತು ನಾಶಪಡಿಸುವುದು ಮತ್ತು ಕಟ್ಟಡಗಳಿಗೆ ಬೆಂಕಿ ಹಚ್ಚುವುದು ಅತ್ಯಂತ ಅನ್ಯಾಯಕರವಾಗಿದೆ. ಅವುಗಳಿಂದ ಯಾವ ಗುಂಪಿಗೂ ಲಾಭ ಸಿಗಲಾರದು.

=============================================

TIMES OF INDIA
26–9–2012

## ಇಸ್ಲಾಮ್ ವಿರೋಧಿ ಫಿಲ್ಮ್: ಅಹ್ಮದಿಯಾ ಜಮಾಅತ್ ಶಾಂತಿ ಸಮ್ಮೇಳನ ಜರುಗಿಸಲಿದೆ

ಅಮೃತಸರ: INNOCENCE OF MUSLIMS (ಇನ್ನೊಸೆನ್ಸ್ ಆಫ್ ಮುಸ್ಲಿಮ್ಸ್) ಎಂಬ ವಿವಾದಾತ್ಮಕ ಫಿಲ್ಮ್ ಬಗ್ಗೆ ಒಂದು ಕಡೆ ಮುಸ್ಲಿಮರು ತೀವ್ರ ದುಃಖ ಮತ್ತು ರೋಷವನ್ನು ಪ್ರಕಟಿಸುತ್ತಿರುವಾಗ, ಇನ್ನೊಂದು ಕಡೆ ಅಹ್ಮದಿಯಾ ಜಮಾಅತ್ ತನ್ನ ಕೇಂದ್ರವಾದ ಖಾದಿಯಾನ್‌ನಲ್ಲಿ ಸೆಪ್ಟಂಬರ್ ದಿನಾಂಕ 30ರಂದು ಶಾಂತಿ ಸಮ್ಮೇಳನವನ್ನು ಜರಗಿಸಲು ನಿರ್ಧರಿಸಿದೆ. ಜಾಗತಿಕ ಅಹ್ಮದಿಯಾ ಜಮಾಅತಿನ ಇಮಾಮರ ಆದೇಶ ಪ್ರಕಾರ ಈ ಶಾಂತಿ ಸಮ್ಮೇಳನ ಜರಗಿಸಲ್ಪಡುತ್ತಿದೆ. ಅವರು ಲೋಕದಲ್ಲಿರುವ ಎಲ್ಲ ಮುಸ್ಲಿಮರು ಈ ಫಿಲ್ಮ್ ವಿರುದ್ಧ ಒಗ್ಗೂಡಿ ಶಾಂತಿಯುತವಾಗಿ ಪ್ರತಿಭಟಿಸಬೇಕೆಂದು ಆವಶ್ಯಪಟ್ಟಿದ್ದಾರೆ. ಈ ಫಿಲ್ಮ್‌ನ ಟ್ರೈಲರ್ ಪ್ರದರ್ಶಿಸಿದಾಗ ಹಿಂಸಾತ್ಮಕ ಅಲೆಗಳು ತಲೆದೋರಿ ನಿರಪರಾಧಿ ಜನರು ಕೊಲ್ಲಲ್ಪಟ್ಟದ್ದನ್ನು ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಸಾಹಿಬರು ವಿರೋಧಿಸಿ ವಿವಿಧ ಮುಸ್ಲಿಮ್ ದೇಶಗಳಲ್ಲಿ ಕಂಡು ಬರುತ್ತಿರುವ ಹಿಂಸಾತ್ಮಕ ಕೃತ್ಯಗಳನ್ನು ಖಂಡಿಸಿದ್ದಾರೆ. ರಾಯಭಾರಿಗಳು ಸಮೇತ ನಿರಪರಾಧಿ ಜನರನ್ನು ಕೊಲ್ಲುವುದು ಇಸ್ಲಾಮ್ ಧರ್ಮ ತತ್ವಗಳಿಗೆ ಪೂರ್ಣ ವಿರುದ್ಧವೆಂದು ಅವರು ಹೇಳಿದರು. ಸ್ವತ್ತುಗಳಿಗೆ ಹಾನಿ ಉಂಟುಮಾಡುವುದು, ಕಟ್ಟಡಗಳಿಗೆ ಬೆಂಕಿ ಹಚ್ಚುವುದು, ಖಂಡಿತವಾಗಿಯೂ ಅನ್ಯಾಯದ ಕೃತ್ಯಗಳಾಗಿವೆ. ಅದರಿಂದ ಇಸ್ಲಾಮ್ ಧರ್ಮಕ್ಕೆ ಅಪಕೀರ್ತಿ ಉಂಟುಮಾಡುವವರ ಹೊರತು ಬೇರೆ ಯಾರಿಗೂ ಲಾಭ ಉಂಟಾಗುವುದಿಲ್ಲ. ನಾವು ದ್ವೇಷವನ್ನು ವರ್ಧಿಸುವಂತೆ ಮಾಡುವ ಕೆಲಸಕ್ಕೆ ಉತ್ತೇಜನ ನೀಡುತ್ತೇವೋ ಅಥವಾ ನಾವು ಪ್ರಜ್ಞಾಪೂರ್ವಕವಾಗಿ ಸಾಮೂಹಿಕ ಪ್ರತಿಭಟನೆ ಮಾಡುತ್ತಿದ್ದೇವೋ ಎಂದು ಪರಶೀಲಿಸುವುದು ಆವಶ್ಯಕವಾಗಿದೆ ಎಂದು ಅವರು ಹೇಳಿದರು. ಮುಸ್ಲಿಮ್ ಸರಕಾರಗಳೂ

ಪಶ್ಚಿಮ ದೇಶಗಳಲ್ಲಿ ವಾಸಿಸುವ ಮುಸ್ಲಿಮರೂ ಒಗ್ಗೂಡಿ ಲೋಕದಲ್ಲಿ ಇಸ್ಲಾಮ್ ಮತ್ತು ಪವಿತ್ರ ಖುರ್‌ಆನಿನ ನೈಜ ತತ್ವಗಳನ್ನು ಪ್ರಚಾರಮಾಡಬೇಕೆಂದು ಅವರು ಹೇಳಿದರು. ಪ್ರತಿಯೊಂದು ಸಂದರ್ಭದಲ್ಲೂ ಸ್ಥಳದಲ್ಲೂ ಇಸ್ಲಾಮ್ ಮತ್ತು ಹಝ್ರತ್ ಮುಹಮ್ಮದ್ ಪೈಗಂಬರರ ﷺಪವಿತ್ರ ಕೃತ್ಯಗಳ ವಿರುದ್ಧ ಆಕ್ಷೇಪಗಳನ್ನು ಪ್ರತಿರೋಧಿಸಲು ಐಕ್ಯದಿಂದ ಮತ್ತು ಶಾಂತಿಯುತವಾಗಿ ಪ್ರಯತ್ನಿಸಬೇಕೆಂದು ಅವರು ಹೇಳಿದರು.

ಅಹ್ಮದಿಯಾ ಜಮಾಅತಿನ ಪ್ರೆಸ್ ಕಮಿಟಿಯ ನಿರ್ವಾಹಕ ಸಯ್ಯಿದ್ ತುಫೈಲ್ ಅಹ್ಮದ್ ಶಹ್‌ಬಾಝ್ ಹೀಗೆ ಹೇಳಿದರು: ರಾಜಕೀಯ ನಾಯಕರನ್ನೂ ಧಾರ್ಮಿಕ ನಾಯಕರನ್ನೂ ಈ ಶಾಂತಿ ಸಮ್ಮೇಳನದಲ್ಲಿ ಭಾಗವಹಿಸಲು ಆಮಂತ್ರಿಸಲಾಗಿದೆ.

==========================================

OTTAWA CITIZEN NEWS PAPER

30–9–2012

ಕೆನಡದ ಪ್ರಸಿದ್ಧ ದೈನಿಕ ಒಟ್ಟಾವ ಸಿಟಿಝುನ್ ಹೀಗೆ ಬರೆಯಿತು:

## ಒಟ್ಟಾವದ ಮುಸ್ಲಿಮ್ ನಾಯಕರಿಂದ ಇಸ್ಲಾಮ್ ವಿರೋಧಿ ಫಿಲ್ಮ್ ವಿರುದ್ಧ ಹಿಂಸಾತ್ಮಕ ಪ್ರತಿಕ್ರಿಯೆಯ ಖಂಡನೆ

ಒಟ್ಟಾವದ ಒಂದು ಮುಸ್ಲಿಮ್ ಪಂಗಡದ ನಾಯಕ ಅತ್ಯಂತ ನೀಚ, ನಿರರ್ಥಕ, ರೊಚ್ಚಿಗೆಬ್ಬಿಸುವ ಫಿಲ್ಮ್ ವಿರುದ್ಧ ರಕ್ತಪಾತ ಉಂಟುಮಾಡುವ ಪ್ರತಿಭಟನೆಗಳನ್ನು ಖಂಡಿಸಿದರು. ಲಿಬಿಯಾದ ಬೆನ್‌ಗಾಝಿಯಲ್ಲಿ ಅಮೇರಿಕದ ಕೌನ್ಸಿಲ್ ಕಚೇರಿಯನ್ನು ಆಕ್ರಮಿಸಿ ಅಲ್ಲಿನ ಅಮೇರಿಕದ ಕಾನ್ಸೆಲ್ ಮತ್ತು ಮೂವರು ಉದ್ಯೋಗಸ್ಥರನ್ನು ಕೊಲ್ಲಲಾಯಿತು. ಕ್ಯುಂಬರ್‌ಲೇಂಡ್‌ನಲ್ಲಿರುವ ಅಹ್ಮದಿಯಾ ಮುಸ್ಲಿಮ್ ಜಮಾಅತ್ ಕೇಂದ್ರದಲ್ಲಿ ಶನಿವಾರ ಸಾಯಂಕಾಲ ಒಂದು ಸಭೆಯಲ್ಲಿ ಮಸ್‌ಜಿದ್ ಇಮಾಮ್ ಇಮ್ತಿಯಾಝ್ ಅಹ್ಮದ್ ಅಹ್ಮದಿಯರನ್ನು ಸಂಬೋಧಿಸಿ ಹೇಳಿದರು: ಇನ್ನೊಸೆನ್ಸ್ ಆಫ್ ಮುಸ್ಲಿಮ್ಸ್ ಎಂಬ ಫಿಲ್ಮ್ ವಿರುದ್ಧ ಶಾಂತಿಯುತ ಪ್ರತಿಭಟನೆ ಮಾಡಬಹುದಾಗಿದೆ. ಹದಿನಾಲ್ಕು ನಿಮಿಷ ದೀರ್ಘವುಳ್ಳ ಕೀಳು ಮಟ್ಟದ ಈ ಫಿಲ್ಮ್ ಅಮೇರಿಕದಲ್ಲಿ ನಿರ್ಮಿಸಲ್ಪಟ್ಟು ಇಂಟರ್‌ನೆಟ್‌ನಲ್ಲಿ ಬಿಡುಗಡೆಗೊಳಿಸಲಾಗಿತ್ತು. ಅವರು ಹೇಳಿದರು: ಈ ಫಿಲ್ಮ್ ನಿರ್ಮಾಪಕ ಈ ಫಿಲ್ಮ್ ನಿರ್ಮಿಸಿ ಅತ್ಯಂತ ಕೀಳು, ಕೆಟ್ಟ ಕೆಲಸಮಾಡಿದ್ದಾನೆ. ಅದರಿಂದ ಮುಸ್ಲಿಮ್ ಲೋಕದಲ್ಲಿ ಆತಂಕ ತಲೆದೋರಿದೆ. ಪ್ರತಿಯೊಬ್ಬ ಮುಸ್ಲಿಮ್ ತನ್ನ ಪ್ರತಿಭಟನೆ ಸೂಚಿಸುತ್ತಿದ್ದಾನೆ. ಪತಾಕೆಗಳನ್ನು ಸುಟ್ಟು, ವಿಧ್ವಂಸಕ ಕೆಲಸಗಳನ್ನು ನಡೆಸಿ ರಾಯಭಾರಿ ಕಚೇರಿಗಳ ಮೇಲೆ ಆಕ್ರಮಣ ನಡೆಸಿ ತಮ್ಮ ಕೋಪ ಪ್ರಕಟಿಸುತ್ತಿದ್ದಾರೆ. ಇಮಾಮರು ಕೇಳಿದರು: ಪ್ರತಿಭಟನೆಗಾರರು ಪತಾಕೆಗಳನ್ನು ಸುಟ್ಟು, ಸ್ವತ್ತುಗಳನ್ನೂ ರಾಯಭಾರಿ ಕಚೇರಿಗಳನ್ನೂ ಸುಟ್ಟು, ರಾಯಭಾರಿಗಳನ್ನು ಕೊಂದು ಸೇಡು ತೀರಿಸಿದಂತೆ ಆಗುವುದೇ? ಇದು ನೈಜ ಇಸ್ಲಾಮ್ ತತ್ವಗಳಿಗೆ ವಿರುದ್ಧವಾಗಿದೆ. ಇದು ನೈಜ ಇಸ್ಲಾಮ್ ಅಲ್ಲ.

ಅಹ್ಮದಿಯಾ ಜಮಾಅತ್ ಒಂದು ಅಲ್ಪಸಂಖ್ಯಾತ ಮುಸ್ಲಿಮ್ ಪಂಗಡವಾಗಿದೆ. ಅದು ಧರ್ಮಗಳ ಮಧ್ಯೆ ಮಾತುಕತೆಯನ್ನು ಪ್ರತಿಪಾದಿಸುತ್ತದೆ. ಕ್ಯುಂಬರ್‌ಲೇಂಡ್‌ನಲ್ಲಿ ಜಮಾಯಿಸಿದ ಅಹ್ಮದಿಯರ ಸಂಖ್ಯೆ ಐನೂರೆಂದು ಅಹ್ಮದ್ ಹೇಳುತ್ತಾರೆ.

ಈ ಫಿಲ್ಮ್ ಅಭಿಪ್ರಾಯ ಸ್ವಾತಂತ್ರ್ಯದ ಸಿದ್ಧಾಂತ ಪ್ರಕಾರ ನಿರ್ಮಿಸಲಾಗಿದೆ ಎಂದು ಕೆಲವರು ಪ್ರತಿಪಾದಿಸುವುದನ್ನು ಅಹ್ಮದ್ ಇತರ ಮುಸ್ಲಿಮ್ ನಾಯಕರ ಹಾಗೆಯೇ ತೀವ್ರವಾಗಿ ಖಂಡಿಸಿದರು. ಅವರು ಹೇಳಿದರು: ಯಾವುದೇ ಧರ್ಮದ ಪರಿಶುದ್ಧ ಮಹಾನುಭಾವರ ಬಗ್ಗೆ ಎಲ್ಲ ರೀತಿಯ ಕೆಟ್ಟ ಆರೋಪಗಳನ್ನು ಮಾಡುವುದನ್ನು ಅಭಿಪ್ರಾಯ ಸ್ವಾತಂತ್ರ್ಯ ಎಂದು ಹೆಸರಿಸಲಾಗದು.

ಕಳೆದ ವಾರ ಲಂಡನ್‌ನಲ್ಲಿ ಅಹ್ಮದಿಯಾ ಜಮಾಅತ್ ಇಮಾಮರು ಲೋಕದ ಮುಸ್ಲಿಮರೊಂದಿಗೆ ಹೀಗೆ ಉಪದೇಶಿಸಿದರು: "ಮುಸ್ಲಿಮರೆಲ್ಲರೂ ಫಿಲ್ಮ್ ವಿರುದ್ಧ ಶಾಂತಿಯುತವಾಗಿ ಪ್ರತಿಭಟಿಸಲು ಒಗ್ಗೂಡಬೇಕು." ಆದರೆ ಹಿಂಸಾಚಾರ ಮಾಡುವುದನ್ನು ಅವರು ಖಂಡಿಸಿದರು. ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ (ಅಹ್ಮದಿಯಾ ಜಮಾಅತ್ ಇಮಾಮರು) ಹೀಗೆ ಸಲಹೆ ನೀಡಿದರು: ಧಾರ್ಮಿಕ ನಂಬಿಕೆಗಳ ಸಂರಕ್ಷಣೆಗೋಸ್ಕರ ಅಭಿಪ್ರಾಯ ಪ್ರಕಟಣೆ ಸ್ವಾತಂತ್ರ್ಯಕ್ಕೆ ಕೆಲವು ಪರಿಮಿತಿಗಳನ್ನು ನಿಗದಿಪಡಿಸಬೇಕು ಮತ್ತು ಅಭಿಪ್ರಾಯ ಸ್ವಾತಂತ್ರ್ಯದ ಹೆಸರಿನಲ್ಲಿ ಜಾಗತಿಕ ಶಾಂತಿಯನ್ನು ಧ್ವಂಸಗೊಳಿಸಲು ಅನುಮತಿ ನೀಡಬಾರದು.

ಒಟ್ಟಾವದ ಮಜ್ಲಿಸ್ ಖುದ್ದಾಮುಲ್ ಅಹ್ಮದಿಯಾದ ಖಾಯಿದ್ ಉವೈಸ್ ಮಹ್‌ಮೂದ್ ಪಾಕಿಸ್ತಾನದಲ್ಲಿರುವ ತನ್ನ ಕುಟುಂಬದ ಬಗ್ಗೆ ಆತಂಕಗೊಂಡಿರುವುದಾಗಿ ಹೇಳಿದರು. ಏಕೆಂದರೆ AFP ವರದಿ ಪ್ರಕಾರ ಪಾಕಿಸ್ತಾನದಲ್ಲಿ ಈ ಫಿಲ್ಮ್ ವಿರುದ್ಧ ನಡೆದ ಗಲಭೆಗಳಲ್ಲಿ 21 ಜನರು ಕೊಲ್ಲಲ್ಪಟ್ಟರು ಮತ್ತು ಇನ್ನೂರಕ್ಕಿಂತ ಹೆಚ್ಚು ಜನರು ಗಾಯಗೊಂಡಿರುವರು.

ಮಹ್‌ಮೂದ್ ಹೇಳಿದರು: ಇಸ್ಲಾಮ್ ನಮಗೆ ದೇಶಭಕ್ತಿಯ ಉಪದೇಶ ನೀಡುತ್ತದೆ. ದೇಶಪ್ರೇಮ ಸತ್ಯವಿಶ್ವಾಸದ ಭಾಗವಾಗಿದೆ ಎಂದು

ಹಝ್ರತ್ ಮುಹಮ್ಮದ್ ಪೈಗಂಬರ್ ﷺ ಹೇಳಿರುವರು. ಪಾಕಿಸ್ತಾನದಲ್ಲಿ ಜನರು ತಮ್ಮ ಸಂಪತ್ತನ್ನೇ ಧ್ವಂಸಗೊಳಿಸುತ್ತಿದ್ದಾರೆ ಮತ್ತು ತಮ್ಮ ನೆರೆಹೊರೆಯವರಿಗೆ ಹಾನಿ ಉಂಟುಮಾಡುತ್ತಿದ್ದಾರೆ. ತಾವು ಪ್ರತಿಭಟಿಸಬೇಕಾದ ರೀತಿ ಹೀಗೆ ಅಲ್ಲ.

ಮಹಿಳೆಯರ ಸಂಘಟನೆಯ ನಾಯಕಿ ಯಾಸ್ಮೀನ್ ಮಲಿಕ್ ಒಂದು ಶಾಂತಿಯುತ ಸಲಹೆ ನೀಡುತ್ತಾ ಹೀಗೆ ಹೇಳಿದರು: ಗಲಭೆ ಗೊಂದಲ, ಗೇರಾವ್, ಬೆಂಕಿ ಹಚ್ಚುವಿಕೆ ಮೊದಲಾದವುಗಳಿಗಿಂತ ಉತ್ತಮವಾದುದು ಲೇಖನಿ ಮೂಲಕ ನಮ್ಮ ಭಾವನೆಗಳನ್ನು ಲೋಕದ ಜನರಿಗೆ ತಲುಪಿಸುವುದಾಗಿದೆ.

==========================================

WANDSWORTH
GUARDIAN. U.K
24–9–2012

## ಫಿಲ್ಮ್ ವಿರುದ್ಧ ವಿನಾಶಕರ ಪ್ರತಿಭಟನೆಗಳನ್ನು ಒಬ್ಬ ಮುಸ್ಲಿಮ್ ಧುರೀಣರು ಖಂಡಿಸಿದ್ದಾರೆ

ಒಂದು ಧಾರ್ಮಿಕ ಸಂಘಟನೆಯ ಆಧ್ಯಾತ್ಮಿಕ ನಾಯಕ ಶುಕ್ರವಾರ ದಿನದಂದು ಸಾವಿರಾರು ಜನರು ಅವರ ಪ್ರವಚನವನ್ನು ಕೇಳಲು ಜಮಾಯಿಸಿದಾಗ ಇಸ್ಲಾಮ್ ವಿರೋಧ ಫಿಲ್ಮ್ ವಿರುದ್ಧ ಲೋಕದಲ್ಲಿ ನಡೆಯುತ್ತಿರುವ ಹಿಂಸಾತ್ಮಕ ಪ್ರತಿಭಟನೆಗಳನ್ನು ಖಂಡಿಸಿದರು.

ಅಹ್ಮದಿಯಾ ಜಮಾಅತ್ ಸದಸ್ಯರು ಲಂಡನ್ ಮೋರ್ಡನ್‌ನಲ್ಲಿರುವ ಮಸ್‌ಜಿದ್ ಬೈತುಲ್ ಫುತೂಹ್‌ನಲ್ಲಿ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಅವರ ಪ್ರವಚನವನ್ನು ಕೇಳಲು ಜಮಾಯಿಸಿದ್ದರು. ಪ್ರವಚನ ಒಂದು ಗಂಟೆ ಕಾಲದ ದೈರ್ಘ್ಯವುಳ್ಳದ್ದಾಗಿತ್ತು. ಲೋಕದ ಎಲ್ಲ ದೇಶಗಳಿಗೂ ಬಿತ್ತರಿಸಲ್ಪಡುವ ತನ್ನ ಪ್ರವಚನದಲ್ಲಿ, ಪ್ರತಿಭಟನೆಗಾರರ ವರ್ತನೆಯ ಬಗ್ಗೆ ಅವರು ಖೇದವನ್ನು ಪ್ರಕಟಿಸಿದರು ಮತ್ತು ಹೇಳಿದರು: ಶಾಂತಿಯುತವಾಗಿ ಆ ಫಿಲ್ಮನ್ನು ಖಂಡಿಸಬೇಕು.

ಅಮೇರಿಕದಲ್ಲಿ ನಿರ್ಮಿಸಲಾದ ಕೀಳು ಮಟ್ಟದ ವಾಣಿಜ್ಯೇತರ ಫಿಲ್ಮ್ INNOCENCE OF MUSLIMS (ಇನ್ನೊಸೆನ್ಸ್ ಆಫ್ ಮುಸ್ಲಿಮ್ಸ್) ಇದರ ಹದಿನಾಲ್ಕು ಮಿನಿಟುಗಳ ಜಾಹಿರಾತು ಮಧ್ಯಪೂರ್ವ, ಉತ್ತರ ಆಫ್ರಿಕ, ಏಶಿಯಾ ಮತ್ತು ಆಸ್ಟ್ರೇಲಿಯಾದಲ್ಲಿ ವಿನಾಶಕಾರಿ ಗಲಭೆ ಗೊಂದಲಗಳನ್ನು

ಉತ್ತೇಜಿಸಿತು. ಈ ಫಿಲ್ಮ್‌ನ ಅನೇಕ ಭಾಗಗಳನ್ನು ಯು–ಟ್ಯೂಬ್‌ನಲ್ಲಿ ಸಹ ಬಿಡುಗಡೆಗೊಳಿಸಲಾಗಿತ್ತು. ಅದರಲ್ಲಿ ಒಬ್ಬ ನಟ ಹಝ್ರತ್ ಮುಹಮ್ಮದ್ ಪೈಗಂಬರರ ﷺ ಪಾತ್ರ ಮಾಡುತ್ತಿದ್ದಾನೆ. ಈ ಕೃತ್ಯ ಇಸ್ಲಾಮೀ ಲೋಕದಲ್ಲಿ ತೀವ್ರವಾಗಿ ನಿಷಿದ್ಧ ಎಂದು ಗಣಿಸಲಾಗುತ್ತದೆ.

ಈ ಚಿತ್ರ ಮುಸ್ಲಿಮರ ಭಾವನೆಗಳನ್ನು ಉದ್ರೇಕಿಸುವ ಕಾರಣವೇನೆಂದರೆ, ಅದರಲ್ಲಿ ಹಝ್ರತ್ ಮುಹಮ್ಮದ್ ಪೈಗಂಬರ್ ﷺ ವಿವಿಧ ಮಹಿಳೆಯರೊಂದಿಗೆ ವ್ಯಭಿಚಾರ ಮಾಡುವುದನ್ನೂ ಮಕ್ಕಳೊಂದಿಗೆ ಲೈಂಗಿಕ ಅಕ್ರಮಗಳಿಗೆ ಅನುಮತಿ ನೀಡುವುದನ್ನೂ ತೋರಿಸಲಾಗಿದೆ. (ನಊಧುಬಿಲ್ಲಾಹ್– ಇಂತಹ ಆರೋಪಗಳನ್ನು ಪ್ರಕಟಿಸಿದುದಕ್ಕೆ ಅಲ್ಲಾಹನ ಅಭಯಕೋರುತ್ತೇವೆ)

ಖುತ್‌ಬ ಪ್ರವಚನದ ನಂತರ ಹುಝೂರ್ ಹೇಳಿದರು: ಹಝ್ರತ್ ಮುಹಮ್ಮದ್ ಪೈಗಂಬರರನ್ನು ﷺ ಅಲ್ಪಮಾತ್ರ ಅಪಮಾನಿಸುವುದನ್ನು ಕೂಡ ನಾವು ಸಹಿಸಲಾರೆವು. ನಿಮ್ಮ ಮುಂದೆ ನಿಮ್ಮ ಪಿತನನ್ನು ನಿಂದಿಸಿದರೆ ಅದು ಅಭಿಪ್ರಾಯ ಸ್ವಾತಂತ್ರ್ಯ ಎಂದು ನೀವು ಹೇಳುವಿರೇನು? ನೀವು ಇಂತಹ ಕೃತ್ಯಗಳನ್ನು ಕಠಿಣವಾಗಿ ಪ್ರತಿಭಟಿಸುವಿರಿ. ಅನ್ಯಧರ್ಮಗಳನ್ನು ಹೀನೈಸುವುದು ಕಾನೂನು ಕಾಯಿದೆಗಳಿಗೆ ವಿರುದ್ಧ ಎಂಬ ನಿಯಮಗಳನ್ನು ರೂಪಿಸಬೇಕೆಂದು ಅವರು ಸಲಹೆ ನೀಡಿದರು. ಅವರು ಹೇಳಿದರು: ಹಿಂಸಾತ್ಮಕವಾಗಿ ಪ್ರತಿಭಟಿಸುವವರು ಖಂಡಿತವಾಗಿಯೂ ಇಸ್ಲಾಮ್ ಧರ್ಮದ ನೈಜ ತತ್ವಗಳನ್ನು ಅನುಷ್ಠಾನಕ್ಕೆ ತರುವವರಲ್ಲ. ಇದಕ್ಕೆಲ್ಲ ಕಾರಣ ಅವರಿಗೆ ನಾಯಕರಿಲ್ಲದುದಾಗಿದೆ.

ಅವರು ಪುನಃ ಹೇಳಿದರು: ಈ ಮುಸ್ಲಿಮರು ಪ್ರತಿಭಟಿಸುವ ವಿಧಾನ ಸರಿಯಾದುದಲ್ಲ.

ಅಮೇರಿಕದಲ್ಲಿ ನಿರ್ಮಿಸಲಾದ ಈ ಫಿಲ್ಮ್ ಲೋಕದಲ್ಲಿರುವ ಮುಸ್ಲಿಮರನ್ನು ರಕ್ತಪಾತ ಮತ್ತು ಗಲಭೆ ಗೊಂದಲಗಳನ್ನು ಮಾಡಲು ಉತ್ತೇಜಿಸಿದೆ. ಪಾಕಿಸ್ತಾನದಲ್ಲಿ ಸೆಪ್ಟಂಬರ್ 21ನೇ ದಿನಾಂಕ ಶುಕ್ರವಾರ ನಡೆದ ಹಿಂಸಾತ್ಮಕ ಪ್ರತಿಭಟನೆಗಳಲ್ಲಿ 21 ಜನರು ಕೊಲ್ಲಲ್ಪಟ್ಟರು.

ಕಳೆದ ಶನಿವಾರ ಪಾಕಿಸ್ತಾನ ಸರಕಾರದ ಒಬ್ಬ ಸಚಿವ ಪತ್ರಿಕೆಗಳ ವರದಿಗಾರರೊಂದಿಗೆ ಮಾತನಾಡುತ್ತಾ, "ಅಮೇರಿಕದಲ್ಲಿ ನಿರ್ಮಿಸಲಾದ ಈ ಫಿಲ್ಮ್‌ನ ನಿರ್ಮಾಪಕನನ್ನು ಕೊಲ್ಲುವವನಿಗೆ ಒಂದು ಲಕ್ಷ ಡಾಲರ್ ಬಹುಮಾನ ನೀಡಲಾಗುವುದು" ಎಂದು ಹೇಳಿ, ಅಜ್ಞಾತ ವಾಸದಲ್ಲಿರುವ ಈ ನಿರ್ಮಾಪಕನನ್ನು ಹಿಡಿಗೂಡಲು ಭೀಕರವಾದಿಗಳ ಸಂಘಟನೆಗಳಾದ ಅಲ್‌ಖಾಯಿದ ಮತ್ತು ತಾಲಿಬಾನ್‌ಗಳು ಸಹಾಯ ಮಾಡಬೇಕೆಂದು ಅಪೇಕ್ಷಿಸಿದನು.

ಮಹಿಳೆಯರ ಸಂಘಟನೆ ಲಜ್‌ನ ಇಮಾಇಲ್ಲಾ ಅಧ್ಯಕ್ಷೆ ನಾಸಿರ ರಹ್ಮಾನ್ ಹೀಗೆ ಹೇಳಿದರು: ಅಹ್ಮದಿಯಾ ಜಮಾಅತ್‌ಗೆ ಬಹಳ ತೀವ್ರ ದುಃಖ ಉಂಟಾಗಿದೆ. ಹಝ್ರತ್ ಪೈಗಂಬರರ ﷺ ಪವಿತ್ರ ಜೀವಿತದ ಬಗ್ಗೆ ಕಳಂಕ ಹೇರುವುದಕ್ಕೆ ಪ್ರಯತ್ನಿಸುವುದು ಅತ್ಯಂತ ಹೆಚ್ಚು ಮನ ನೋಯಿಸುವಂಥದ್ದಾಗಿದೆ. ನಮ್ಮ ಹೃದಯಗಳು ರಕ್ತದ ಕಣ್ಣೀರು ಸುರಿಸುತ್ತಿವೆ.

ಪ್ರತಿಭಟಿಸುವವರ ಬಗ್ಗೆ ಅವರು ಹೀಗೆಂದರು: ಇಂತಹ ಕೆಟ್ಟ ಕೆಲಸ ಮಾಡುವವರಿಗೆ ಶಿಕ್ಷೆ ನೀಡುವುದು ಮುಸ್ಲಿಮರ ಕೆಲಸವಲ್ಲ. ಈ ಸಮಸ್ಯೆಯ ಪರಿಹಾರಕ್ಕೆ ಅಲ್ಲಾಹನ ಸನ್ನಿಧಿಯಲ್ಲಿ ಪ್ರಾರ್ಥಿಸಬೇಕು ಮತ್ತು ಈ ವಿಷಯ ತಮ್ಮ ಕೈಗೆತ್ತಿಕೊಳ್ಳಬಾರದು.

ಮಸ್‌ಜಿದ್‌ಗೆ ನಮಾಝ್ ಅನುಷ್ಠಿಸಲು ಬಂದ ಲಂಡನಿನ ಪುಟ್ನಿಯ ಅಹ್ಮದ್ ಮುರ್‌ತಝಾ ಹೀಗೆ ಹೇಳಿದರು: ಇಂತಹ ವಿಷಯಗಳಿಗೆ ಉತ್ತರ ಶಾಂತಿಯುತವಾಗಿ ಜರಗಿಸಲಾಗುವ ವೈಚಾರಿಕವಾದ ಪ್ರತಿವಾದಗಳಲ್ಲಿ ಮಾತ್ರ ನೀಡಬೇಕಾಗಿದೆ. ಎಲ್ಲ ಮುಸ್ಲಿಮರು ಹಝ್ರತ್ ಮುಹಮ್ಮದ್ ಪೈಗಂಬರರನ್ನು ﷺ ಪ್ರೀತಿಸುತ್ತಾರೆ. ಎಲ್ಲ ಜನರಿಗಿಂತ ಹಝ್ರತ್ ಮುಹಮ್ಮದ್ ಪೈಗಂಬರರನ್ನು ﷺ ಹೆಚ್ಚು ಹೆಚ್ಚಾಗಿ ಪ್ರೀತಿಸಬೇಕೆಂದು ನಮಗೆ ಬಾಲ್ಯ ಕಾಲದಿಂದಲೇ ಕಲಿಸಲಾಗುತ್ತಿದೆ. ನಾವು ಅನ್ಯರ ಹಕ್ಕುಗಳನ್ನು ಕಸಿಯಬಾರದು. ಅನ್ಯರ ಭಾವನೆಗಳ ಗಡಿ ಪ್ರಾರಂಭವಾಗುವಲ್ಲಿ ನಮ್ಮ ಅಭಿಪ್ರಾಯ ಸ್ವಾತಂತ್ರ್ಯದ ವಲಯ ಕೊನೆಗೊಳ್ಳುತ್ತದೆ.

ಅಹ್ಮದಿಯಾ ಜಮಾಅತಿನ ಜನರು ಪಾಕಿಸ್ತಾನದಂತಹ ಹಿಂಸೆಭರಿತ ಇಸ್ಲಾಮೀ ದೇಶದಲ್ಲಿ ದೌರ್ಜನ್ಯಗಳಿಗೆ ಗುರಿಯಾಗುತ್ತಿದ್ದಾರೆ. ಅಹ್ಮದಿಯರು ತಮ್ಮ ಆಧ್ಯಾತ್ಮಿಕ ನೇತಾರರನ್ನು (ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಅಲೈಹಿಸ್ಸಲಾಮರನ್ನು) ಇಸ್ಲಾಮ್‌ನಲ್ಲಿ ಆಗಮಿಸಿದ ಒಬ್ಬ ಪ್ರವಾದಿ ಎಂದು ನಂಬುತ್ತಾರೆ. ಆದರೆ ಮುಸ್ಲಿಮರಲ್ಲಿ ಬಹುತೇಕ ಜನರು ಹಝ್ರತ್ ಮುಹಮ್ಮದ್ ಪೈಗಂಬರರನ್ನುﷺ ಅಂತಿಮ ಪ್ರವಾದಿ ಎಂದು ನಂಬುತ್ತಾರೆ.

2010ರಲ್ಲಿ ನಮ್ಮ ಪತ್ರಿಕೆ ಲಂಡನಿನ ದಕ್ಷಿಣ ಭಾಗದಲ್ಲಿ ಅತ್ಯಂತ ಕಠಿಣ ದ್ವೇಷಭರಿತ ಮತಭ್ರಾಂತರು ಅಹ್ಮದಿಯಾ ಪಂಗಡದ ಜನರೊಂದಿಗೆ ಬಹಿರಂಗವಾಗಿ ಅಪಮಾನಕರವಾಗಿ ಮತ್ತು ತಾರತಮ್ಯ ಭಾವನೆಯಿಂದ ವರ್ತಿಸುವ ಬಗ್ಗೆ ಮತ್ತು ಟೂಟಿಂಗ್ ಎಂಬ ಊರಿನಲ್ಲಿ ಅವರ ಜೀವಿತಾಧಾರವನ್ನೂ ಅವರ ರಾಜಕೀಯ ಅಭ್ಯರ್ಥಿಗಳನ್ನು ಆಕ್ರಮಣಗಳಿಗೆ ಗುರಿಪಡಿಸಿದುದನ್ನು ಬಹಿರಂಗೊಳಿಸಿತ್ತು.

ಈ ವರ್ಷದಲ್ಲಿಯೇ ಲಾಹೋರಿನಲ್ಲಿ ಭೀಕರ ಆಕ್ರಮಣಗಾರರು 93 ಅಹ್ಮದಿಯರನ್ನು ಅವರು ಮಸ್‌ಜಿದ್‌ನಲ್ಲಿ ನಮಾಝ್ ಮಾಡುತ್ತಿದ್ದಾಗ ಹತ್ಯೆ ಮಾಡಿದರು. ಹೀಗೆ ಹತ್ಯೆಗೀಡಾದವರಲ್ಲಿ ಸಿಸ್‌ಪಾರಾ ಗಾರ್ಡನ್ಸ್, ಸೌತ್‌ಫೀಲ್ಡ್ಸ್ ನಿವಾಸಿ ಮುಹಮ್ಮದ್ ಅಶ್ರಫ್ ಸಹ ಸೇರಿದ್ದರು. ಅವರು ತಮ್ಮ ವ್ಯಾಪಾರ ಉದ್ದೇಶಕ್ಕೋಸ್ಕರ ಪಾಕಿಸ್ತಾನಕ್ಕೆ ಹೋಗಿದ್ದರು.

=========================================

NEWS TRACK INDIA
24–9–2012

## "ಅಭಿಪ್ರಾಯ ಸ್ವಾತಂತ್ರ್ಯದ ಹೆಸರಿನಲ್ಲಿ ಲೋಕದಲ್ಲಿ ಶಾಂತಿಯನ್ನು ಕೆಡಿಸಬಾರದು"

**–ಅಹ್ಮದಿಯಾ ಜಮಾಅತ್ ಜಾಗತಿಕ ನೇತಾರ**

**ಪಾಕಿಸ್ತಾನದ ಅಹ್ಮದಿಯಾ ಜಮಾಅತ್ ನಾಯಕ ಹೇಳಿದರು: ಇಸ್ಲಾಮ್ ವಿರೋಧಿ ಫಿಲ್ಮ್ ಬಗ್ಗೆ ಮುಸ್ಲಿಮರು ದುಃಖ ಮತ್ತು ರೋಷ ಪ್ರಕಟಿಸಿದುದು ಎಲ್ಲ ರೀತಿಗಳಲ್ಲೂ ನ್ಯಾಯಬದ್ಧವಾಗಿದೆ.**

ಇಸ್ಲಾಮಾಬಾದ್: 24–9–2012 (ANI) ಪಾಕಿಸ್ತಾನದ ಅಹ್ಮದಿಯಾ ಜಮಾಅತಿನ ನಾಯಕರು ಹೇಳಿದರು: ಇಸ್ಲಾಮ್ ವಿರೋಧಿ ಫಿಲ್ಮ್ ಬಗ್ಗೆ ಮುಸ್ಲಿಮರ ದುಃಖ ಮತ್ತು ರೋಷ ಪ್ರಕಟಣೆ ಎಲ್ಲ ರೀತಿಗಳಲ್ಲೂ ನ್ಯಾಯಬದ್ಧವಾಗಿದೆ. ಆದರೆ ಅವರು ಹಿಂಸಾತ್ಮಕ ಪ್ರತಿಭಟನೆಯನ್ನು ಖಂಡಿಸಿದರು.

ದಿ ಎಕ್ಸ್‌ಪ್ರೆಸ್ ಟ್ರಿಬ್ಯೂನ್ ಹಝ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಸಾಹಿಬರ ಹೇಳಿಕೆಯನ್ನು ಹೀಗೆ ಉಲ್ಲೇಖಿಸಿದೆ:

"ಇಸ್ಲಾಮ್ ಎದುರಿಗೆ ಮುಸ್ಲಿಮೇತರರು ಸೋತು ಹೋದ ಕಾರಣದಿಂದ ಅಭಿಪ್ರಾಯ ಸ್ವಾತಂತ್ರ್ಯದ ಹೆಸರಲ್ಲಿ ನಿರರ್ಥಕ ಕೆಟ್ಟ ಕೆಲಸಗಳನ್ನು ಮಾಡುತ್ತಾರೆ."

ಹಝ್‌ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಸಾಹಿಬ್ ಹೀಗೆ ಸಹ ಹೇಳಿದರು: ಲೋಕದಲ್ಲಿರುವ ಎಲ್ಲ ಮುಸ್ಲಿಮರು ಒಗ್ಗೂಡಿ ಈ ಫಿಲ್ಮ್ ವಿರುದ್ಧ ಶಾಂತಿಯಿಂದ ಪ್ರತಿಭಟಿಸಬೇಕು. ಈ ಫಿಲ್ಮ್ ಮುಸ್ಲಿಮ್ ಲೋಕದಲ್ಲಿ ತೀವ್ರ ದುಃಖ ಮತ್ತು ರೋಷದ ಭಾವನೆಗಳನ್ನು ಉತ್ತೇಜಿಸಿದೆ.

ಜನರ ಧಾರ್ಮಿಕ ಭಾವನೆಗಳನ್ನು ಸಂರಕ್ಷಿಸಲು ಅಭಿಪ್ರಾಯ ಸ್ವಾತಂತ್ರ್ಯದ ಪರಿಮಿತಿಗಳನ್ನು ನಿಗದಿಪಡಿಸಬೇಕೆಂದು ಹಝ್‌ರತ್ ಮಿರ್ಝಾ

ಮಸ್‌ರೂರ್ ಅಹ್ಮದ್ ಸಾಹಿಬರು ಆವಶ್ಯಪಟ್ಟರು. ವಿವಿಧ ದೇಶಗಳಲ್ಲಿ ಕಂಡುಬಂದ ಹಿಂಸಾತ್ಮಕ ಪ್ರತಿಭಟನೆಗಳನ್ನು ಅವರು ಖಂಡಿಸಿದರು. ಆ ಪ್ರತಿಭಟನೆಗಳ ಪರಿಣಾಮವಾಗಿ ಕೆಲವು ದೇಶಗಳ ರಾಯಭಾರಿಗಳು ಮತ್ತು ಅವರ ಕಚೇರಿಗಳ ಉದ್ಯೋಗಿಗಳು ಸಹಿತ ನಿರಪರಾಧಿ ಜನರು ಕೊಲ್ಲಲ್ಪಟ್ಟಿದ್ದರು.

ಇಸ್ರಾಯೇಲ್ ಮೂಲದ ಒಬ್ಬ ಅಮೇರಿಕದ ನಾಗರಿಕ ನಿರ್ಮಿಸಿದ ಫಿಲ್ಮ್‌ನಲ್ಲಿ ಹಝ್‌ರತ್ ಮುಹಮ್ಮದ್ ಪೈಗಂಬರರನ್ನು (ನಊಧುಬಿಲ್ಲಾಹ್) ಮೋಸಗಾರ, ಮಕ್ಕಳನ್ನು ಲೈಂಗಿಕವಾಗಿ ಪೀಡಿಸುವವ, ಮಹಿಳೆಯರ ರಸಿಕನೆಂದು ತೋರಿಸಲಾಗಿದೆ. ಈ ಫಿಲ್ಮ್ ಕಾರಣದಿಂದ ಮುಸ್ಲಿಮ್ ಲೋಕದಲ್ಲಿ ಕೋಲಾಹಲಗಳು ಉಂಟಾಗಿವೆ. ಅವುಗಳ ಪರಿಣಾಮವಾಗಿ ಅಮೇರಿಕದ ವಿರುದ್ಧ ಜಾಗತಿಕ ಮಟ್ಟದಲ್ಲಿ ಹಿಂಸಾತ್ಮಕ ಪ್ರತಿಭಟನೆಗಳು ಪ್ರಕಟಗೊಂಡಿವೆ.

==========================================

METRO NEWS OTTAWA, CANADA
28–9–2012

ವರದಿಗಾರ: ಗ್ರೆಹಾಮ್ ಲ್ಯಾಂಕ್‌ಟ್ರೀ.

## ಮುಸ್ಲಿಮ್ ನಾಯಕರಿಂದ ಶಾಂತಿ ಸ್ಥಾಪನೆಗೆ ಅಪೇಕ್ಷೆ. ರೊಚ್ಚಿಗೆಬ್ಬಿಸುವ ಫಿಲ್ಮ್ ಅಭಿಪ್ರಾಯ ಸ್ವಾತಂತ್ರ್ಯದ ಪರಿಮಿತಿಗಳನ್ನು ದಾಟಿ ಹೋಗಿದೆ

ಅಹ್ಮದಿಯಾ ಮುಸ್ಲಿಮ್ ಜಮಾಅತಿನ ಜಾಗತಿಕ ನಾಯಕರಾದ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ (ಪಂಚಮ ಖಲೀಫ) 2012 ಸೆಪ್ಟಂಬರ್ 21ರ ಶುಕ್ರವಾರದ ಪ್ರವಚನದಲ್ಲಿ ಇನ್ನೊಸೆನ್ಸ್ ಆಫ್ ಮುಸ್ಲಿಮ್ಸ್ ಎಂಬ ಫಿಲ್ಮ್ ವಿರುದ್ಧ ಲೋಕದ ಎಲ್ಲ ಮುಸ್ಲಿಮರು ಒಗ್ಗೂಡಿ ಶಾಂತಿಯುತವಾಗಿ ಪ್ರತಿಭಟಿಸಬೇಕೆಂದು ಕರೆ ನೀಡಿದರು.

ವಾಣಿಜ್ಯೇತರವಾದ ಈ ಫಿಲ್ಮ್‌ನಲ್ಲಿ ಮುಸ್ಲಿಮರ ಧರ್ಮದ ವಿರುದ್ಧ ತೀವ್ರ ವಿಮರ್ಶೆಗಳನ್ನು ಮಾಡಲಾಗಿದ್ದು, ಅದರ ವಿರುದ್ಧ ಅನೇಕ ವಾರಗಳ ತನಕ ನಡೆದ ಹಿಂಸಾತ್ಮಕ ಪ್ರತಿಭಟನೆಗಳ ನಂತರ ಒಟ್ಟಾವ ನಗರದ ಒಂದು ಮುಸ್ಲಿಮ್ ಸಂಘಟನೆ ಶನಿವಾರ ಒಂದು ಸಭೆಯನ್ನು ಸಮಾವೇಶಗೊಳಿಸಿ ಹಿಂಸಾಚಾರಗಳನ್ನು ನಿಲ್ಲಿಸಲು ಮತ್ತು ಅಭಿಪ್ರಾಯ ಸ್ವಾತಂತ್ರ್ಯದ ಪರಿಮಿತಿಗಳನ್ನು ನಿಗದಿಪಡಿಸಲು ಆವಶ್ಯಪಡುವುದು.

ಇಸ್ಲಾಮ್ ಧರ್ಮದ ಪ್ರಚಾರಕರೂ ಸಂಘಟನೆಯ ಹುದ್ದೇದಾರರೂ ಆಗಿರುವ ಇಮ್ತಿಯಾಝ್ ಅಹ್ಮದ್ ಹೀಗೆ ಹೇಳಿದರು:

ಪತಾಕೆಗಳನ್ನು ಸುಡುವುದು, ಸ್ವತ್ತುಗಳಿಗೆ ಬೆಂಕಿ ಹಚ್ಚುವುದು, ರಾಯಭಾರಿಗಳು ಸಮೇತ ನಿರಪರಾಧಿಗಳನ್ನು ಹತ್ಯೆ ಮಾಡುವುದು ಇಸ್ಲಾಮ್ ಧರ್ಮದ ಉಪದೇಶಗಳಿಗೆ ಪೂರ್ಣವಾಗಿ ವಿರುದ್ಧವಾಗಿರುವ ಕೆಲಸಗಳಾಗಿವೆ.

ಅಭಿಪ್ರಾಯ ಸ್ವಾತಂತ್ರ್ಯ ಮತ್ತು ಅನ್ಯರ ಭಾವನೆಗಳನ್ನು ಗೌರವಿಸುವುದರ ಮಧ್ಯೆ ಸೂಕ್ಷ್ಮ ಗಡಿರೇಖೆಗಳಿವೆ. ನಮ್ಮ ಅಭಿಪ್ರಾಯ ಸ್ವಾತಂತ್ರ್ಯದ ಪರಿಣಾಮವಾಗಿ ಅನ್ಯರ ಭಾವನೆಗಳು ನೋಯಿಸಲ್ಪಡುವುದಾದರೆ ನಾವು ಅಭಿಪ್ರಾಯ ಸ್ವಾತಂತ್ರ್ಯದ ಪರಿಮಿತಿಗಳನ್ನು ನಿಗದಿಪಡಿಸಬೇಕಾಗಿದೆ.

ಹಿಂಸಾತ್ಮಕ ಪ್ರತಿಭಟನೆಗಳ ವಿರುದ್ಧ ಧ್ವನಿಯೆತ್ತಲು ಒಟ್ಟಾವದ ಅಹ್ಮದಿಯಾ ಜಮಾಅತ್ ಸಭೆ ಜರಗಿಸುವುದು. ಈ ಜಮಾಅತ್ ಅಲ್ಪ ಸಂಖ್ಯಾತ ಮುಸ್ಲಿಮ್ ಪಂಗಡವಾಗಿದೆ. ಪಾಕಿಸ್ತಾನದಲ್ಲಿ ಈ ಜಮಾಅತ್‌ನೊಂದಿಗೆ ತಾರತಮ್ಯ ಭಾವನೆಯಿಂದ ವರ್ತಿಸಲಾಗುತ್ತದೆ. ಈ ಸಭೆಯಲ್ಲಿ ನಾಲ್ಕುನೂರು ಅಹ್ಮದಿಯರು ಜಮಾಯಿಸುವರೆಂದು ಇಮ್ತಿಯಾಝ್ ಅಹ್ಮದ್ ಹೇಳಿದರು.

ಅವರು ಹೇಳಿದರು: ಇಂತಹ ಕೆಲಸಗಳ ವಿರುದ್ಧ ಪ್ರತಿಭಟಿಸುವ ಉತ್ತಮ ವಿಧಾನ ನಾವು ಅಲ್ಲಾಹನೊಂದಿಗೆ ಪ್ರಾರ್ಥಿಸಿ ಸಹಾಯವನ್ನು ಬೇಡಿಕೊಳ್ಳುವುದು ಮತ್ತು ನಮ್ಮ ನಡೆವಳಿಕೆಗಳಲ್ಲಿ ಇಸ್ಲಾಮೀ ಆದರ್ಶವನ್ನು ಪ್ರಕಟಿಸುವುದಾಗಿದೆ. ಯಾವುದೇ ಸಮಸ್ಯೆ ಹಿಂಸಾಚಾರದಿಂದ ಪರಿಹರಿಸಲ್ಪಡಲಾರದು. ಅಮೇರಿಕದಲ್ಲಿ ನಿರ್ಮಿಸಲಾದ ಫಿಲ್ಮ್ ಮತ್ತು ಫ್ರಾನ್ಸ್‌ನಲ್ಲಿ ಪ್ರಕಟಿಸಲಾದ ವ್ಯಂಗ್ಯ ಚಿತ್ರಗಳನ್ನು ನಾವು ತೀವ್ರವಾಗಿ ಖಂಡಿಸುತ್ತೇವೆ.

ಅಹ್ಮದಿಯಾ ಜಮಾಅತಿನ ಆಧ್ಯಾತ್ಮಿಕ ನಾಯಕ ಹಝ್ರತ್ ಮಿರ್ಝಾ ಮಸ್‌ರೂರ್ ಅಹ್ಮದ್ ಸಾಹಿಬರು ಸೆಪ್ಟಂಬರ್ 21ರ ಖುತ್‌ಬ ಪ್ರವಚನದಲ್ಲಿ "ಅಭಿಪ್ರಾಯ ಸ್ವಾತಂತ್ರ್ಯದ ಪರಿಮಿತಿಗಳನ್ನು ನಿಗದಿಪಡಿಸಬೇಕು. ಎಲ್ಲ ಜನರ ಧಾರ್ಮಿಕ ಭಾವನೆಗಳನ್ನು ಸಂರಕ್ಷಿಸಲು ಹೀಗೆ ಮಾಡಬೇಕಾಗಿದೆ" ಎಂದು ಹೇಳಿದರು.

ಇಮ್ತಿಯಾಝ್ ಅಹ್ಮದ್ ಹೀಗೆ ಹೇಳಿದರು: ನಾವು ಕೆನಡ ಸರಕಾರಕ್ಕೆ ಕೃತಜ್ಞತೆ ಅರ್ಪಿಸುತ್ತೇವೆ. ನಮ್ಮ ಧರ್ಮವನ್ನು ಅನುಸರಿಸಲು ನಮಗೆ ಸಂಪೂರ್ಣ ಸ್ವಾತಂತ್ರ್ಯ ಕೆನಡದ ಸರಕಾರ ನೀಡಿದೆ. ಆದರೆ ನಮ್ಮ ಮೂಲ ದೇಶವಾದ ಪಾಕಿಸ್ತಾನದಲ್ಲಿ ನಮ್ಮನ್ನು ಮುಸ್ಲಿಮರೆಂದು ಕೂಡ ಹೇಳಲು ನಮಗೆ ಅನುಮತಿ ಇರುವುದಿಲ್ಲ. ಪಾಕಿಸ್ತಾನದಲ್ಲಿರುವ ಅಂದಾಜು

ಎರಡರಿಂದ ಐದು ಮಿಲಿಯ ತನಕ ಇರುವ ಅಹ್ಮದಿಯರ ಮೇಲೆ ಮಾಡಲಾಗುವ ವಿವಿಧ ದೌರ್ಜನ್ಯಗಳ ಮತ್ತು ಆಕ್ರಮಣಗಳ ಬಗ್ಗೆ ಸಹ ಅವರು ಪ್ರಸ್ತಾಪಿಸಿದರು. ಅವರು ಹೇಳಿದರು:

**"**ಪ್ರತಿಯೊಂದು ಧರ್ಮ ತನ್ನ ಪ್ರವಾದಿಯನ್ನು ಗೌರವಿಸುತ್ತದೆ. ಕ್ರೈಸ್ತರು ಪ್ರವಾದಿ ಈಸಾ ಮಸೀಹರನ್ನು ಗೌರವಿಸುತ್ತಾರೆ. ಆದರೆ ಕೆಲವು ಸಾರಿ ಅಜ್ಞಾನಿ ಪಾದರಿಗಳು ಜನರ ಭಾವನೆಗಳನ್ನು ಉದ್ರೇಕಿಸಿ ಸ್ವಾರ್ಥ ಸಾಧನೆಗೆ ಬಳಸುತ್ತಾರೆ. ಪ್ರತಿಭಟಿಸಲು ಮಾರ್ಗದಲ್ಲಿ ಮೆರವಣಿಗೆ ಹೊರಡಲು ಮತ್ತು ಹಿಂಸಾಚಾರಕ್ಕಿಳಿಯಲು ಇಸ್ಲಾಮಿನ ಪೈಗಂಬರರು ಎಂದೂ ಉಪದೇಶಿಸಿರಲಿಲ್ಲ.**"**

2012 ಸೆಪ್ಟಂಬರ್ ದಿನಾಂಕ 29ರಂದು ಶನಿವಾರ ಸಾಯಂಕಾಲ 5 ಗಂಟೆಗೆ ಕ್ಯುಂಬರ್‌ಲೇಂಡ್‌ನ ಮಾರ್ಕೆಟ್ ಸ್ಟ್ರೀಟ್‌ನಲ್ಲಿ ಒಂದು ಸಂವಾದದ ವ್ಯವಸ್ಥೆ ಮಾಡಿದ್ದಾರೆ. ಅದರಲ್ಲಿ ಹಿಂಸಾಚಾರ ಭರಿತ ವರ್ತನೆಗಳನ್ನು ಖಂಡಿಸಲಾಗುವುದು.

==========================================

ONE NEWS
ಟಿ.ವಿ. ಚ್ಯಾನಲ್ ವರದಿ

ಯುರೋಪಿನಲ್ಲಿ ಮಿತವಾದಿ ಮುಸ್ಲಿಮ್ ನೇತಾರ ಹಿಂಸಾತ್ಮಕ ಪ್ರತಿಭಟನೆಗಳಿಂದ ತಮ್ಮ ಪ್ರದೇಶವನ್ನು ರಕ್ಷಿಸಲು ಪ್ರಯತ್ನಿಸುತ್ತಿದ್ದಾರೆ. ಯುರೋಪಿನಲ್ಲಿರುವ ನಮ್ಮ ಪ್ರತಿನಿಧಿ ಗಾರ್ತ್ ಬ್ರೇಗೆ ಲಂಡನ್‌ನಲ್ಲಿರುವ ಒಂದು ಮಸ್‌ಜಿದನ್ನು ಪ್ರವೇಶಿಸಲು ವಿಶೇಷ ಅನುಮತಿ ಲಭಿಸಿತು.

ಏಶಿಯಾದಲ್ಲೂ ಮಧ್ಯಪೂರ್ವದಲ್ಲೂ ಅಮೇರಿಕದ ಪತಾಕೆಗಳನ್ನು ಸುಟ್ಟು ಹಾಕಲಾಗುತ್ತಿದೆ. ಪ್ಯಾರಿಸ್‌ನಲ್ಲಿ ಹಝ್ರತ್ ಮುಹಮ್ಮದರ ನಗ್ನ ವ್ಯಂಗ್ಯ ಚಿತ್ರಗಳ ಪ್ರಕಟಣೆಯ ಕಾರಣ, ಶಾಂತರಾಗಿರಬೇಕೆಂಬ ಎಲ್ಲ ಕೋರಿಕೆಗಳು ನಿಷ್ಪ್ರಯೋಜಕವಾಗುತ್ತಿವೆ. ಬ್ರಿಟನ್‌ನಲ್ಲಿ ಸಹ ಹೀಗೆಯೇ ಪರಿಸ್ಥಿತಿ ಇದೆ. “ತನ್ನ ಮಿತವಾದಿ ನಿಲುವುಗಳನ್ನು ನನಗೆ ತಿಳಿಸಲು ನನ್ನನ್ನು ಬಹಳ ಸಂತೋಷದಿಂದ ಸ್ವಾಗತಿಸಲಾಯಿತು ಮತ್ತು ಇಬ್ಬರು ಮಹಿಳೆಯರಾದ ಪತ್ರಕರ್ತೆಯರನ್ನೂ ಬರಮಾಡಿಕೊಳ್ಳಲಾಯಿತು” ಎಂದು ನಮ್ಮ ಪ್ರತಿನಿಧಿ ವರದಿ ಮಾಡಿದ್ದಾರೆ.

ಖಲೀಫರು ಫಿಲ್ಮ್ ಮತ್ತು ವ್ಯಂಗ್ಯ ಚಿತ್ರ ನಿರ್ಮಾಪಕರನ್ನು ಖಂಡಿಸಿ ಹೇಳಿದರು: “ಅಲ್ಲಾಹನು ಖಂಡಿತವಾಗಿಯೂ ಈ ಜನರನ್ನು ನರಕಕ್ಕೆ ಹಾಕುವನು.” ಅದರೊಂದಿಗೆ ಖಲೀಫರು ಹೀಗೆ ಸಹ ಹೇಳಿದರು: “ಕೆಟ್ಟ

ಕೆಲಸ ಮಾಡುವವರಿಗೆ ಶಿಕ್ಷೆ ನೀಡುತ್ತಾ ಅಲೆದಾಡುವುದು ನಮ್ಮ ಕೆಲಸವಲ್ಲ. ನಾವು ಯಾವುದೇ ರೀತಿಯ ಹಿಂಸಾಚಾರದಲ್ಲಿ ವಿಶ್ವಾಸವನ್ನು ಹೊಂದಿಲ್ಲ. ಯಾವುದೇ ಅಹ್ಮದಿ ಹಿಂಸಾತ್ಮಕ ಪ್ರತಿಭಟನೆಯಲ್ಲಿ ಭಾಗವಹಿಸಿದುದನ್ನು ನೀವು ಕಾಣಲಾರಿರಿ."

ಲಂಡನ್ ನಗರದ ದಕ್ಷಿಣ – ಪಶ್ಚಿಮದಲ್ಲಿರುವ ಈ ಮಸ್‌ಜಿದನ್ನು ನಿರ್ಮಿಸಿದವರು ಇದು ಯುರೋಪಿನ ದಕ್ಷಿಣ ಭಾಗದಲ್ಲಿರುವ ಅತ್ಯಂತ ದೊಡ್ಡ ಮಸ್‌ಜಿದೆಂದು ವಾದಿಸುತ್ತಾರೆ. ಈ ಮಸ್‌ಜಿದ್‌ನಲ್ಲಿ ನೀಡಲಾಗುವ ಶುಕ್ರವಾರದ ಖುತ್‌ಬ ಪ್ರವಚನ ಲೋಕದ ನೂರಾರು ದೇಶಗಳ ಜನರು ಆಲಿಸಿರಬಹುದು. ಅದರಲ್ಲಿ ಹೀಗೆ ಒತ್ತಿ ಹೇಳಲಾಗಿತ್ತು: ಫಿಲ್ಮ್ ಮತ್ತು ವ್ಯಂಗ್ಯ ಚಿತ್ರಗಳ ಮೂಲಕ ಧರ್ಮಕ್ಕೆ ಮಾಡಲಾದ ಅಪಮಾನಕ್ಕೆ ಉತ್ತರ ಮಾತಿನ ಮೂಲಕ ಮಾತ್ರ ನೀಡಬೇಕು.

ಆದರೆ ಖಲೀಫರು ಹೇಳಿದರು: ಬಹುತೇಕ ಮುಸ್ಲಿಮರು ಇದಕ್ಕಿಂತ ಹೆಚ್ಚು ಹಿಂಸಾತ್ಮಕ ಪ್ರತಿಭಟನೆ ಮಾಡಲು ಸನ್ನದ್ಧರಾಗಿದ್ದಾರೆ. ಅವರು ಹೇಳಿದರು: ಈ ಹಿಂಸಾತ್ಮಕ ಕೃತ್ಯಗಳು ಕೇವಲ ಪಶ್ಚಿಮದ ಬಗ್ಗೆ ಇರುವ ವಿರೋಧದ ಕಾರಣದಿಂದ ಮಾತ್ರವಲ್ಲ. ಇವುಗಳ ಹಿಂದೆ ಎಂತಹ ಜನರಿದ್ದಾರೆಂದರೆ, ಅವರು ಹಿಂಸಾಕೃತ್ಯಗಳ ಮೂಲಕ ತಮ್ಮ ಹಿಂಬಾಲಕರ ಸಂಖ್ಯೆಯನ್ನು ವರ್ಧಿಸಲು ಇಚ್ಛಿಸುತ್ತಾರೆ.

ಒಂದು ಅಲ್ಪಸಂಖ್ಯಾತ ಪಂಗಡದ ನಾಯಕರಾದ ಕಾರಣ ಅವರ ಉಪದೇಶಗಳಿಗೆ ಬಹಳ ಜನ ಕಿವಿಗೊಡುವರು ಎಂದಾಗಲಿ ಅಥವಾ ಪೇಶಾವರದ ಹಾಗಿರುವ ಪ್ರದೇಶಗಳಲ್ಲಿ ಹಿಂಸಾಚಾರವನ್ನು ಅದುಮಿ ಹಾಕಲು ಯಾವುದೇ ರೀತಿ ಪ್ರಯೋಜನಕರವಾಗುವುದೆಂದಾಗಲಿ ಪ್ರತೀಕ್ಷೆ ಇಲ್ಲ.

==========================================

**ಬಅ್ದ ಅಝ್ ಖುದಾ ಬಇಶ್ಖೇ ಮುಹಮ್ಮದ್ ಮುಖ್ಮರಮ್**
**ಗರ್ ಕುಫ್ರ್ ಈನ್ ಬವದ್ ಬಖುದಾ ಸಖ್ತ್ ಕಾಫಿರಮ್.**

(–ಅಹ್ಮದಿಯಾ ಜಮಾಅತಿನ ಸ್ಥಾಪಕ ಹಝ್ರತ್ ಮಿರ್ಝಾ ಗುಲಾಮ್ ಅಹ್ಮದ್ ಖಾದಿಯಾನಿ ಅಲೈಹಿಸ್ಸಲಾಮ್)

"ಅಲ್ಲಾಹನ ನಂತರ ಹಝ್ರತ್ ಮುಹಮ್ಮದ್ ಸಲ್ಲಲ್ಲಾಹು ಅಲೈಹಿ ವಸಲ್ಲಮರ ಪ್ರೀತಿಯಲ್ಲಿ ನಾನು ಮತ್ತನಾಗಿದ್ದೇನೆ. ಇದು ಕುಫ್ರ್ (ಅವಿಶ್ವಾಸ) ಆಗಿದ್ದರೆ ಅಲ್ಲಾಹನಾಣೆ, ನಾನು ಎಲ್ಲರಿಗಿಂತ ದೊಡ್ಡ ಕಾಫಿರ್ ಆಗಿದ್ದೇನೆ."

**ಹಝ್ರತ್ ಮುಹಮ್ಮದ್ ಪೈಗಂಬರರ ﷺ ಕುರಿತು ಕೆಲವು ಜನನಾಯಕರ, ಚರಿತ್ರೆಗಾರರ ಮತ್ತು ಪೌರಸ್ತ್ಯ ಶಾಸ್ತ್ರಜ್ಞರ ಅಭಿಪ್ರಾಯಗಳು.**

## ಹಝ್ರತ್ ಮುಹಮ್ಮದ್ ಪೈಗಂಬರ್ ﷺ ಬಗ್ಗೆ ಅನ್ಯರ ಶ್ರದ್ಧಾಂಜಲಿಗಳು

**ಜೋರ್ಜ್ ಸೇಲ್** (GEORGE SALE) ಪವಿತ್ರ ಖುರ್‌ಆನನ್ನು ಇಂಗ್ಲಿಷ್‌ಗೆ ಭಾಷಾಂತರ ಮಾಡಿದ ಲೇಖಕರಾಗಿದ್ದಾರೆ. ಅವರು ಭಾಷಾಂತರಕ್ಕೆ ಬರೆದ ದೀರ್ಘ ಮುನ್ನುಡಿಯಲ್ಲಿ ಇನ್ನೊಬ್ಬ ಲೇಖಕನನ್ನು ಉಲ್ಲೇಖಿಸಿ ಹೀಗೆ ಬರೆದಿದ್ದಾರೆ:

"ಮುಹಮ್ಮದ್ ಪರಿಪೂರ್ಣವಾದ ಸಹಜ ಗುಣಗಳಿಂದ ಅಲಂಕೃತರಾಗಿದ್ದರು. ಅವರು ಅತ್ಯಂತ ಸುಂದರ ರೂಪ ಹೊಂದಿದ್ದರು. ಸೂಕ್ಷ್ಮಜ್ಞಾನಿಯೂ ದೀರ್ಘದರ್ಶಿಯೂ ಬುದ್ಧಿಶಾಲಿಯೂ ಆಗಿದ್ದರು. ಅವರ ನಡೆವಳಿಕೆ ಇಷ್ಟಕರವಾಗಿದ್ದುವು. ಬಡವರ ಹಿತೈಷಿಯೂ ಪ್ರತಿಯೊಬ್ಬರಿಗೆ ಗೌರವ ನೀಡುವವರೂ ಆಗಿದ್ದರು. ಶತ್ರುಗಳನ್ನು ಎದುರಿಸುವುದರಲ್ಲಿ ದೃಢಚಿತ್ತನೂ ಶೂರರೂ ಆಗಿದ್ದರು. ಅಲ್ಲಾಹನ ನಾಮವನ್ನು ಅತ್ಯಂತ ಗೌರವಿಸುತ್ತಿದ್ದವರಾಗಿದ್ದರು. ಸುಳ್ಳು ಪ್ರಮಾಣ ಮಾಡುವವರ, ವ್ಯಭಿಚಾರಿಗಳ, ರಕ್ತಪಾತ ಮಾಡುವವರ, ಸುಳ್ಳು ಅಪವಾದ ಮಾಡುವವರ, ದುಂದು ವೆಚ್ಚ ಮಾಡುವವರ, ದುರಾಶೆ ಹೊಂದಿದವರ, ಸುಳ್ಳು ಸಾಕ್ಷಿ ಹೇಳುವವರ ವಿರುದ್ಧ ಕಠಿಣ ನಿಲುವನ್ನು ಹೊಂದಿದವರಾಗಿದ್ದರು. ಸಹಿಷ್ಣುತೆ, ದಾನಧರ್ಮ, ದಯೆವಾತ್ಸಲ್ಯ, ಕೃತಜ್ಞತೆ, ತಂದೆ ತಾಯಂದಿರಿಗೆ ಮತ್ತು ಹಿರಿಯರಿಗೆ ಗೌರವ ನೀಡುವುದು ಮೊದಲಾದವುಗಳ ಬಗ್ಗೆ ಅತ್ಯಂತ ಒತ್ತಿ ಹೇಳುವವರೂ ಅಲ್ಲಾಹನ ಸ್ತುತಿ ಕೀರ್ತನೆಗಳಲ್ಲಿ ಬಹಳ ಹೆಚ್ಚು ಮಗ್ನರಾಗಿರುವವರೂ ಆಗಿದ್ದರು."

(THE KORAN by GEORGE SALE, Gent, Fifth Edition, PHILADELPHIA; J.B. LIPPINCOTT & CO. 1860 page iv)

==========================================

**ಸ್ಟಾನ್ಲೀ ಲೇನ್ ಪೂಲ್** (STANLEY LANE – POOLE)
ಲೇಖಕ ಹೀಗೆ ಬರೆಯುತ್ತಾರೆ:

"ಮುಹಮ್ಮದ್ ತಾನು ಜನಿಸಿದ ನಗರವನ್ನು ಜಯಶಾಲಿಯಾಗಿ ಪ್ರವೇಶಿಸಿದಾಗ ತನ್ನ ಕಠಿಣ ಶತ್ರುಗಳೂ ತನ್ನ ರಕ್ತ ಹೀರಲು ಬಯಸುತ್ತಿದ್ದವರೂ ಆಗಿದ್ದ ನಗರದ ನಿವಾಸಿಗಳೆಲ್ಲರಿಗೂ ಕ್ಷಮೆ ನೀಡಿದರು. ಇದು ಎಂತಹ ಜಯವಾಗಿತ್ತೆಂದರೆ, ಎಂತಹ ಪವಿತ್ರ ಜಯಶಾಲಿ ಪ್ರವೇಶವಾಗಿತ್ತೆಂದರೆ, ಇಂತಹ ಘಟನೆಯ ಉದಾಹರಣೆ ಮಾನವರ ಚರಿತ್ರೆಯಲ್ಲಿ ಎಲ್ಲಿಯೂ ಕಾಣಿಸುವುದಿಲ್ಲ. (The Speeches and Tablets of the Prophet Mohammad by Stanley Lane - Poole, Mac Millan & Co. 1882. Page xlvi - xlvii)

---

**"ದಿ ಔಟ್‌ಲೈನ್ ಆಫ್ ಹಿಸ್ಟರಿ"ಯ ಲೇಖಕ ಎಚ್.ಜಿ. ವೆಲ್ಸ್ (H.G. WELLS)** ಹೀಗೆ ಬರೆಯುತ್ತಾರೆ:

"ಇಸ್ಲಾಮಿನ ಪೈಗಂಬರರ ಸತ್ಯಸಂಧತೆಗೆ ದೊಡ್ಡ ಸಾಕ್ಷ್ಯವೇನೆಂದರೆ, ಅವರ ಬಗ್ಗೆ ಎಲ್ಲರಿಗಿಂತ ಹೆಚ್ಚಾಗಿ ತಿಳಿದವರು ಅವರನ್ನು ಎಲ್ಲರಿಗಿಂತಲೂ ಮುಂಚಿತವಾಗಿ ನಂಬಿದರು... ಮುಹಮ್ಮದ್ ಖಂಡಿತವಾಗಿಯೂ ಸುಳ್ಳುವಾದಿಯಾಗಿರಲಿಲ್ಲ... ಇಸ್ಲಾಮ್‌ನಲ್ಲಿ ಬಹಳ ಒಳಿತುಗಳು ಮತ್ತು ಭವ್ಯ ಗುಣಗಳಿವೆ ಎಂಬ ವಾಸ್ತವಿಕತೆಯನ್ನು ನಿರಾಕರಿಸಲು ಸಾಧ್ಯವಿಲ್ಲ... ಇಸ್ಲಾಮಿನ ಪೈಗಂಬರರು ದೌರ್ಜನ್ಯ ಮತ್ತು ರಕ್ತಪಾತವನ್ನು ಕೊನೆಗೊಳಿಸುವಂತಹ ಸಮಾಜಕ್ಕೆ ಅಸ್ತಿಬಾರ ಹಾಕಿದರು."

(The Outline of History by H.G. WELLS, Part II)

=========================================

**ಡೇ ಲೇಸಿ ಓ'ಲಿಯರಿ (De Lacy O'Leary)** ತನ್ನ ಪುಸ್ತಕ **"ಇಸ್ಲಾಮ್ ಎಟ್ ದಿ ಕ್ರೋಸ್ ರೋಡ್ಸ್"**ನಲ್ಲಿ ಹೀಗೆ ಬರೆಯುತ್ತಾರೆ:

**"**ದೌರ್ಜನ್ಯಗಾರರಾದ ಮುಸ್ಲಿಮರು ಲೋಕವನ್ನು ಜಯಿಸಿದರೆಂದೂ ತಾವು ಸ್ವಾಧೀನಪಡಿಸಿಕೊಂಡ ದೇಶದ ಜನಾಂಗಗಳ ಮೇಲೆ ಖಡ್ಗಬಲದಿಂದ ಇಸ್ಲಾಮನ್ನು ಹೇರಿದರೆಂದೂ ಚರಿತ್ರೆಗಾರರು ಹೇಳಿದುದು ಅವರು ಹೇಳಿದ ಕಥೆಗಳಲ್ಲಿ ಅತ್ಯಂತ ನಿರರ್ಥಕವಾದುದೂ ಅತ್ಯಂತ ವಿಚಿತ್ರವಾದುದೂ ಆಗಿರುವ ಕಥೆಯಾಗಿದೆ.**"**

(Islam at the Cross Roads by De Lacy O'Leary, London 1923 page 8)

==========================================

**ಮಹಾತ್ಮ ಗಾಂಧಿ** ತನ್ನ ಪತ್ರಿಕೆ **"ಯಂಗ್ ಇಂಡಿಯಾ"**ದಲ್ಲಿ ಹೀಗೆ ಬರೆದರು:

"ಯಾವ ಮಹಾನುಭಾವರು ಯಾವುದೇ ಭಿನ್ನಾಭಿಪ್ರಾಯಕ್ಕೆ ಎಡೆ ನೀಡದೆ ಲಕ್ಷಾಂತರ ಜನರ ಮೇಲೆ ಅಧಿಕಾರವನ್ನು ಚಲಾಯಿಸಿದರೋ ಅವರ ಜೀವಿತದ ಬಗ್ಗೆ ನಾನು ಎಲ್ಲವನ್ನೂ ತಿಳಿಯಲು ಇಚ್ಛಿಸುತ್ತಿದ್ದೆ. ಅವರ ಜೀವನ ಚರಿತ್ರೆಯನ್ನು ಅಧ್ಯಯನ ಮಾಡಿದಾಗ ನನಗೆ ಹೆಚ್ಚು ದೃಢವಾಗಿ ಹೀಗೆ ತಿಳಿಯಿತು– ಇಸ್ಲಾಮ್ ಧರ್ಮ ಆ ಕಾಲಘಟ್ಟದಲ್ಲಿ ಜನರ ಹೃದಯಗಳಲ್ಲಿ ಸ್ಥಾನ ಪಡೆದುದು ಖಡ್ಗದ ಕಾರಣದಿಂದಲ್ಲ. ಪೈಗಂಬರರ ಸರಳ ಜೀವನ, ತಾನೆತ್ತಿಕೊಂಡ ಕೆಲಸದಲ್ಲಿ ಮಗ್ನನಾಗಿರುವ ಸ್ವಭಾವ, ಅತ್ಯಂತ ಸೂಕ್ಷ್ಮವಾಗಿ ತನ್ನ ವಾಗ್ದಾನಗಳನ್ನು ಈಡೇರಿಸುವುದು, ತನ್ನ ಸ್ನೇಹಿತರು ಮತ್ತು ಅನುಯಾಯಿಗಳೊಂದಿಗೆ ಅತ್ಯಂತ ನಂಬಿಕೆ ಹೊಂದಿರುವುದು, ನಿರ್ಭಯನಾಗಿರುವುದು, ದೇವನ ಅಸ್ತಿತ್ವದ ಬಗ್ಗೆ ಮತ್ತು ತನ್ನ ಆಗಮನದ ಉದ್ದೇಶದ ಬಗ್ಗೆ ದೃಢ ನಂಬಿಕೆ ಹೊಂದಿರುವುದು ಇವುಗಳೇ ಎಲ್ಲ ಕಷ್ಟಗಳನ್ನು ನಿವಾರಿಸಿ ಎಲ್ಲರನ್ನೂ ತನ್ನ ಜೊತೆಗೆ ಸೇರಿಸಿ ಮುಂದೆ ಸಾಗುವಂತೆ ಮಾಡಿದವು. ಈ ಪೈಗಂಬರರ ಜೀವನ ಚರಿತ್ರೆಯನ್ನು ಬರೆದ ಪುಸ್ತಕ ದ್ವಿತೀಯ ಭಾಗವನ್ನು ಓದಿ ಮುಗಿಸಿದಾಗ ಆ ಪುಸ್ತಕವು ಮುಕ್ತಾಯಗೊಂಡ ಕಾರಣ ಬೇಸರವಾಯಿತು." (Mahatma Gandhi, Statement Published in "Young India", 1924)

==================================================

**ಸರ್ ಜಾನ್ ಬಗಟ್ ಗ್ಲಬ್** (SIR JOHN BAGOT GLUBB) ಸೈನ್ಯದಲ್ಲಿ ಲೆಫ್ಟಿನೆಂಟ್ ಜನರಲ್ ಆಗಿದ್ದರು. ಅವರು 1986ರಲ್ಲಿ ನಿಧನ ಹೊಂದಿದರು. ಅವರು ಹೀಗೆ ಬರೆಯುತ್ತಾರೆ:

**"**ಈ ಗ್ರಂಥದ ವಾಚಕರು ಇದನ್ನು ಓದಿ ಮುಗಿಸಿದ ನಂತರ ಯಾವ ರೀತಿ ಅಭಿಪ್ರಾಯ ಹೊಂದಿದರೂ ಒಂದು ವಿಷಯವನ್ನು ನಿರಾಕರಿಸಲು ಸಾಧ್ಯವಿಲ್ಲ. ಮುಹಮ್ಮದ್ ಪೈಗಂಬರರ ಆಧ್ಯಾತ್ಮಿಕ ಅನುಭವಗಳು ಬೈಬಲಿನ ಹಳೆಯ ಒಡಂಬಡಿಕೆ ಮತ್ತು ಹೊಸ ಒಡಂಬಡಿಕೆಯಲ್ಲಿರುವ ಕಥೆಗಳೊಂದಿಗೆ ಮತ್ತು ಕ್ರೈಸ್ತ ಧರ್ಮದ ಸಂತರ ಆಧ್ಯಾತ್ಮಿಕ ಅನುಭವಗಳೊಂದಿಗೆ ಆಶ್ಚರ್ಯಕರವಾದ ರೀತಿಯಲ್ಲಿ ಸಾದೃಶ್ಯತೆಯನ್ನು ಹೊಂದಿವೆ. ಇದೇ ರೀತಿ ಹಿಂದುಗಳ ಮತ್ತು ಇತರ ಧರ್ಮಗಳ ಜನರ ಅಸಂಖ್ಯಾತ ಸ್ವಪ್ನಗಳೊಂದಿಗೆ ಮತ್ತು ದಿವ್ಯದರ್ಶನಗಳೊಂದಿಗೆ ಸಾದೃಶ್ಯತೆಯನ್ನು ಹೊಂದಿರಬಹುದು. ಇಂತಹ ಅನುಭವಗಳು ಬಹುತೇಕ ಸಂದರ್ಭಗಳಲ್ಲಿ ಪರಿಶುದ್ಧ ಮತ್ತು ಅನುಗ್ರಹಿಸಲ್ಪಟ್ಟ ಜೀವಿತದ ಆರಂಭದ ಚಿಹ್ನೆಗಳಾಗಿರುತ್ತವೆ. ಇಂತಹ ಅನುಭವಗಳನ್ನು ಶಾರೀರಿಕ ವಂಚನೆ ಎಂದು ಹೇಳುವುದು ಯೋಗ್ಯ ವಿಶದೀಕರಣವಾಗಿರುವುದಿಲ್ಲ. ಏಕೆಂದರೆ ಇಂತಹ ಅನುಭವಗಳು ಬಹಳ ಜನರಲ್ಲಿ ಸಮಾನವಾಗಿ ಕಾಣಿಸಿಕೊಂಡಿವೆ. ಈ ಜನರ ಮಧ್ಯೆ ಸಾವಿರಾರು ವರ್ಷಗಳ ಮತ್ತು ಸಾವಿರಾರು ಮೈಲುಗಳ ಅಂತರವಿರುತ್ತದೆ. ಅವರು ಒಬ್ಬರಿನ್ನೊಬ್ಬರ ಕುರಿತು ಅರಿತಿರಲಿಕ್ಕಿಲ್ಲ. ಹೀಗಿದ್ದರೂ ಇಂತಹ ಜನರ ಅನುಭವಗಳಲ್ಲಿ ಅಸಾಧಾರಣವಾದ ಏಕತೆ ಕಾಣಿಸುತ್ತದೆ. ಈ ಜನರೆಲ್ಲರೂ ಸ್ವತಃ ಸ್ವಪ್ನ ಮತ್ತು ದಿವ್ಯದರ್ಶನಗಳನ್ನು ಆಶ್ಚರ್ಯಕರವಾದ ರೀತಿಯಲ್ಲಿ ಸೃಜಿಸಿದರೆಂದು ಹೇಳುವುದು, ಆ ಜನರು ಒಬ್ಬರಿನ್ನೊಬ್ಬರ ಪರಿಚಯವಿಲ್ಲದವರಾಗಿದ್ದರೂ ಹೀಗೆ ಮಾಡಿದರೆಂದು ಹೇಳುವುದು ವಿಚಾರ ಬದ್ಧವಾಗಿರುವುದಿಲ್ಲ.**"**

ಹಝ್ರತ್ ಮುಹಮ್ಮದ್ ಪೈಗಂಬರರ ﷺ ಪ್ರವಾದಿತ್ವದ ಆರಂಭದ ಕಾಲದಲ್ಲಿ ಅಬಿಸೀನಿಯಾ ದೇಶಕ್ಕೆ ವಲಸೆ ಹೋದವರ ಬಗ್ಗೆ ಲೇಖಕರು ಹೀಗೆ ಬರೆಯುತ್ತಾರೆ:

**"**ಅಬಿಸೀನಿಯಾ ದೇಶಕ್ಕೆ ವಲಸೆ ಹೋದವರು ಇಸ್ಲಾಮ್ ಧರ್ಮವನ್ನು ಅಂಗೀಕರಿಸಿದವರಾಗಿದ್ದರು. ಹಝ್ರತ್ ಪೈಗಂಬರರು ಆಗ ಮಕ್ಕದ ನಿಷ್ಠುರ  ನಿವಾಸಿಗಳ ಎಡೆಯಲ್ಲಿ ಬಹಳ ಕಡಿಮೆ ಸಂಖ್ಯೆಯ ಅನುಯಾಯಿಗಳ ಜೊತೆ ಇದ್ದರು. ಇದರಿಂದ ಹಝ್ರತ್ ಪೈಗಂಬರರ ಧೈರ್ಯ ಮತ್ತು ಅವರ ದೃಢ ವಿಶ್ವಾಸದ ಉನ್ನತ ಮಟ್ಟವು ಸಾಬೀತಾಗುತ್ತದೆ.**"**

(The Life and Times of Mohammad)

==========================================

**ಜೋನ್ ವಿಲ್ಲಿಯಮ್ ಡ್ರೇಪರ್** (JOHN WILLIAM DRAPER) ತನ್ನ ಪುಸ್ತಕ **"ಹಿಸ್ಟರಿ ಆಫ್ ದಿ ಇಂಟಲೆಕ್ಚುವಲ್ ಡೆವಲಪ್‌ಮೆಂಟ್ ಆಫ್ ಯುರೋಪ್"**ನಲ್ಲಿ ಹೀಗೆ ಬರೆಯುತ್ತಾರೆ:

**"**ರೋಮ್ ಚಕ್ರವರ್ತಿ ಜಸ್ಟೀನಿಯನ್ ಮೃತನಾಗಿ ನಾಲ್ಕು ವರ್ಷ ದಾಟಿ ಹೋದ ನಂತರ ಕ್ರಿಸ್ತಶಕ 569ರಲ್ಲಿ ಮಕ್ಕ ನಗರದಲ್ಲಿ ಎಂತಹ ಒಬ್ಬ ವ್ಯಕ್ತಿ ಜನಿಸಿದನೆಂದರೆ, ಎಲ್ಲ ವ್ಯಕ್ತಿಗಳಿಗಿಂತ ಮಾನವರ ಮೇಲೆ ತನ್ನ ಪ್ರಭಾವವನ್ನು ಅತ್ಯಂತ ಹೆಚ್ಚು ಬೀರಿದರು. ಆ ವ್ಯಕ್ತಿ ಮುಹಮ್ಮದ್ ಆಗಿದ್ದರು. ಅವರನ್ನು ಕೆಲವು ಯುರೋಪಿಯನರು ಸುಳ್ಳುವಾದಿ ಎಂದು ಹೇಳುತ್ತಾರೆ. ಆದರೆ ಮುಹಮ್ಮದರಲ್ಲಿ ಎಂತಹ ಸದ್ಗುಣಗಳಿದ್ದುವು ಎಂದರೆ ಅವುಗಳ ಕಾರಣದಿಂದ ಜನಾಂಗಗಳ ವಿಧಿಯ ತೀರ್ಪು ಆಯಿತು. ಅವರು ಧರ್ಮ ಪ್ರಚಾರಕ ಯೋಧರಾಗಿದ್ದರು. ಅವರ ಭಾಷಣ ವೇದಿಕೆ ವಾಗ್ಮಯವಾಗಿತ್ತು. ರಣರಂಗದಲ್ಲಿ ಶೂರರಾಗಿದ್ದರು. ಅವರ ಧರ್ಮ ದೇವನೊಬ್ಬನೇ ಎಂದು ಮಾತ್ರವಾಗಿತ್ತು. ಈ ಸತ್ಯವನ್ನು ವಿವರಿಸಲು ಅವರು ವಾಗ್ವಾದಗಳನ್ನು ಅವಲಂಬಿಸಲಿಲ್ಲ. ಅವರು ತನ್ನ ಅನುಯಾಯಿಗಳಿಗೆ ಸ್ವಚ್ಚತೆ, ನಮಾಝ್, ಉಪವಾಸ ಮೊದಲಾದವುಗಳನ್ನು ಉಪದೇಶಿಸಿ ಅವರ ಸಮಾಜ ವ್ಯವಸ್ಥೆಯನ್ನು ಕ್ರಿಯಾತ್ಮಕವಾಗಿ ಉತ್ತಮಗೊಳಿಸಿದರು. ಅವರು ದಾನಧರ್ಮಗಳಿಗೆ ಬೇರೆ ಎಲ್ಲ ಕೆಲಸಗಳ ಮೇಲೆ ಆದ್ಯತೆ ನೀಡಿದರು.**"**

(History of the Intellectual Development of Europe by John William Draper M.D., LL.D., New York: Harper & Brothers, Publishers, Franklin Square 1863, page 244)

=========================================

**ವಿಲಿಯಮ್ ಮೊಂಟ್‌ಗೊಮೆರಿ ವಾಟ್ಟ್** (WILLIAM MONTGOMERY WATT) ಎಂಬ ಪೌರಸ್ತ್ಯ ಸಂಸ್ಕೃತಿ ಶಾಸ್ತ್ರಜ್ಞ ತನ್ನ ಪುಸ್ತಕ **"ಮುಹಮ್ಮದ್ ಎಟ್ ಮದೀನ"**ದಲ್ಲಿ ಹೀಗೆ ಬರೆಯುತ್ತಾರೆ:

"ಮುಹಮ್ಮದ್ ಪೈಗಂಬರ್ ಮತ್ತು ಇಸ್ಲಾಮ್ ಧರ್ಮದ ಆರಂಭಕಾಲದ ಚರಿತ್ರೆಯನ್ನು ಗಾಢವಾಗಿ ಅಧ್ಯಯನ ಮಾಡಿದರೆ ಅದರಲ್ಲಿ ಸಿಗುವ ಅವರ ವಿಜಯದ ವಿಶಾಲತೆಯನ್ನು ನೋಡುವಾಗ ಮನುಷ್ಯನು ಆಶ್ಚರ್ಯಚಕಿತನಾಗುತ್ತಾನೆ. ಬಹಳ ಕಡಿಮೆ ಜನರಿಗೆ ಲಭಿಸುವಂತಹ ಸಂದರ್ಭವನ್ನು ಆ ಕಾಲಘಟ್ಟದ ಪರಿಸ್ಥಿತಿಯು ಅವರಿಗೆ ಒದಗಿಸಿ ಕೊಟ್ಟಿತು. ಅವರು ಆ ಕಾಲಘಟ್ಟಕ್ಕೆ ಅತ್ಯಂತ ಸೂಕ್ತ ವ್ಯಕ್ತಿಯಾಗಿದ್ದರು. ಅವರ ದೂರದರ್ಶಿತ್ವ, ಸರಕಾರ ನಡೆಸಬಲ್ಲ ನೈಪುಣ್ಯತೆ, ಅಲ್ಲಾಹನ ಸಹಾಯದ ಬಗ್ಗೆ ಅವರಿಗಿದ್ದ ಭರವಸೆ, ತನ್ನನ್ನು ಅಲ್ಲಾಹನೇ ಕಳುಹಿಸಿದನೆಂಬ ದೃಢ ವಿಶ್ವಾಸ ಅವರಿಗಿಲ್ಲದಿರುತ್ತಿದ್ದರೆ ಮಾನವ ಚರಿತ್ರೆಯ ಒಂದು ಮುಖ್ಯ ಅಧ್ಯಾಯ ಬರೆಯಲ್ಪಡುತ್ತಿರಲಿಲ್ಲ. ಅವರ ಜೀವನ ಚರಿತ್ರೆಗೆ ಸಂಬಂಧಿಸಿ ಬರೆದ ಈ ಪುಸ್ತಕ ಒಬ್ಬ ವೈಭವಶಾಲಿ ಮನುಷ್ಯನನ್ನು ಅರ್ಥಮಾಡಿಕೊಳ್ಳಲು ಮತ್ತು ಗಮನಿಸಲು ಸಹಾಯಕವಾಗುವುದೆಂದು ನಾನು ಪ್ರತೀಕ್ಷಿಸುತ್ತೇನೆ.

(WILLIAM MONTGOMERY WATT)

=========================================

ಪ್ರಸಿದ್ಧ ಚರಿತ್ರೆಗಾರನಾದ **ರೆಜಿನಾಲ್ಡ್ ಬೋಸ್‌ವರ್ಥ್ ಸ್ಮಿತ್** (REGINALD BOSWORTH SMITH) **"ಮುಹಮ್ಮದ್ ಆ್ಯಂಡ್ ಮುಹಮ್ಮಡಾನಿಸಂ"**ನಲ್ಲಿ ಹೀಗೆ ಬರೆದಿದ್ದಾರೆ:

"ಧರ್ಮ ಮತ್ತು ಸರಕಾರದ ಮಾರ್ಗದರ್ಶಕ ಮತ್ತು ಆಡಳಿತೆಗಾರನೆಂಬ ನೆಲೆಯಲ್ಲಿ ಪೋಪ್ ಮತ್ತು ಸೀಜರ್ ವ್ಯಕ್ತಿತ್ವಗಳನ್ನು ಮುಹಮ್ಮದ್ (ಪೈಗಂಬರ್) ತನ್ನಲ್ಲಿ ಹೊಂದಿದ್ದರು. ಅವರು ಪೋಪ್ ಆಗಿದ್ದರು. ಆದರೆ ಪೋಪ್ ಹೊಂದಿದ್ದ ಬಾಹ್ಯ ಆಡಂಬರ ಅವರಿಗಿರಲಿಲ್ಲ. ಅವರು ಸೀಜರ್ (ದೊರೆ) ಆಗಿದ್ದರು. ಆದರೆ ದೊರೆಯ ವೈಭವ ಅವರಿಗಿರಲಿಲ್ಲ. ಸ್ಥಿರವಾದ ಸೈನ್ಯವನ್ನು ಹೊಂದದೆ, ಅರಮನೆ ಹೊಂದದೆ, ತೆರಿಗೆಗಳಿಲ್ಲದೆ, ಕೇವಲ ದೇವನಾಮದಲ್ಲಿ ಲೋಕದಲ್ಲಿ ಶಾಂತಿಯನ್ನೂ ವ್ಯವಸ್ಥೆಯನ್ನೂ ಯಾರಾದರೂ ಸ್ಥಾಪಿಸಿದ್ದರೆ ಅದು ಮುಹಮ್ಮದ್ (ಪೈಗಂಬರ್) ಮಾತ್ರ. ಅವರಿಗೆ ಈ ಸಾಧನ ಸಲಕರಣೆಗಳಿಲ್ಲದೆ ಎಲ್ಲ ಶಕ್ತಿಗಳು ದೊರಕಿದ್ದುವು."

"ಅವರನ್ನು ಮೊತ್ತ ಮೊದಲು ನಂಬಿದವರು ಅವರ ಬಗ್ಗೆ ಚೆನ್ನಾಗಿ ತಿಳಿದವರಾದ ಅವರ ಪತ್ನಿ, ಅವರ ಗುಲಾಮ, ಅವರ ಚಿಕ್ಕಪ್ಪನ ಮಗ ಮತ್ತು ಅವರ ಹಳೆಯ ಮಿತ್ರರಾಗಿದ್ದರು. ಮುಹಮ್ಮದ್ (ಪೈಗಂಬರ್) ತನ್ನ ಆ ಮಿತ್ರನ ಬಗ್ಗೆ ಹೀಗೆ ಹೇಳಿದರು: ಇಸ್ಲಾಮ್ ಧರ್ಮಕ್ಕೆ ಪ್ರವೇಶಿಸುವವರಲ್ಲಿ ತನ್ನ ಬೆನ್ನು ಎಂದೂ ಬಗ್ಗಿಸದ (ಎಂದರೆ ಕಾರ್ಮಿಕನಾಗಿ ಕೆಲಸ ಮಾಡದ) ಮತ್ತು ಕಷ್ಟವನ್ನನುಭವಿಸದ ಏಕಮಾತ್ರ ವ್ಯಕ್ತಿ ಅವರಾಗಿದ್ದರು. ಸಾಮಾನ್ಯ ಪ್ರವಾದಿಗಳ ಹಾಗೆ ಹಝ್ರತ್ ಮುಹಮ್ಮದರ ಭಾಗ್ಯ ಸಾಮಾನ್ಯವಾಗಿರಲಿಲ್ಲ. ಅವರ ಶ್ರೇಷ್ಠತೆಯನ್ನು ನಿರಾಕರಿಸುವವರು ಅವರ ಬಗ್ಗೆ ಸರಿಯಾದ ಜ್ಞಾನ ಗಳಿಸದವರಾಗಿದ್ದಾರೆ." (ಪುಟ 127)

"ಹಝ್ರತ್ ಮುಹಮ್ಮದ್ (ಪೈಗಂಬರ್) ರದ್ದುಗೊಳಿಸಿದ ಆಚಾರಗಳು ಪೂರ್ಣವಾಗಿ ಅಳಿಸಿಬಿಟ್ಟವು. ನರಬಲಿ, ಹೆಣ್ಣುಶಿಶುಗಳ ಹತ್ಯೆ,

ರಕ್ತಪಾತ ಭರಿತ ಜಗಳ, ಮಿತಿಯಿಲ್ಲದೆ ಮಹಿಳೆಯರೊಂದಿಗೆ ಮದುವೆ, ಗುಲಾಮರೊಂದಿಗೆ ದೌರ್ಜನ್ಯಪೂರ್ಣವಾಗಿ ವರ್ತಿಸುವುದು, ಮದ್ಯಪಾನ, ಜುಗಾರಿ ಆಟ ಇವುಗಳೆಲ್ಲ ಅರಬ್ ದೇಶದಲ್ಲೂ ನೆರೆಹೊರೆಯ ದೇಶಗಳಲ್ಲೂ ಜಾರಿಯಾಗಿದ್ದುವು. ಅವರು ಅವುಗಳನ್ನೆಲ್ಲ ಕೊನೆಗೊಳಿಸಿದರು. (ಪುಟ 125)

"ಮುಹಮ್ಮದ್ (ಪೈಗಂಬರ್) ತನ್ನ ಉದ್ದೇಶ ಶುದ್ಧಿಯ ಬಗ್ಗೆ ದೃಢವಿಶ್ವಾಸ ಹೊಂದಿ ಏನೆಲ್ಲ ಮಾಡಿದ್ದರೋ ಬೇರೆ ವ್ಯಕ್ತಿ ಇಂತಹ ದೃಢನಂಬಿಕೆ ಹೊಂದದೆ ಏನೂ ಮಾಡಲಾರ."

"ಅವರ ಜೀವಿತದ ಪ್ರತಿಯೊಂದು ಘಟನೆ ಅವರನ್ನು ಎಂತಹ ಸತ್ಯವಾದಿ, ಉತ್ಸಾಹಭರಿತ ವ್ಯಕ್ತಿಯೆಂದು ಸಾಬೀತುಗೊಳಿಸುತ್ತದೆ ಎಂದರೆ ಅವರು ತನ್ನ ನಂಬಿಕೆಗಳ ಮತ್ತು ಧ್ಯೇಯಗಳ ಕಡೆಗೆ ನಿಧಾನವಾಗಿ ಕಷ್ಟ ಸಹಿಸಿ ತಲಪಲು ಪ್ರಯತ್ನಿಸುತ್ತಾ ಇದ್ದರು." (ಪುಟ 127)

"ಅರಬ್ ದೇಶಕ್ಕೆ ಕ್ರಾಂತಿಯ ಆವಶ್ಯಕತೆ ಇತ್ತು ಎಂದು ಹೇಳಿದುದರ ಅರ್ಥ ಹೊಸ ಪೈಗಂಬರರ ಆಗಮನದ ಕಾಲ ಸನ್ನಿಹಿತವಾಗಿದೆ ಎಂದಾದರೆ ಮುಹಮ್ಮದರೇ ಆ ಪೈಗಂಬರರಾಗಬಾರದೇಕೆ? ಈ ವಿಷಯದ ಬಗ್ಗೆ ಆಧುನಿಕ ಕಾಲದ ಲೇಖಕ ಸ್ಪ್ರಿಂಗರ್ ಹೀಗೆ ಸಾಬೀತುಗೊಳಿಸಿದ್ದಾರೆ: ಮುಹಮ್ಮದ್ ಆಗಮಿಸುವುದಕ್ಕೆ ಎಷ್ಟೋ ವರ್ಷಗಳ ಹಿಂದೆ ಒಬ್ಬ ಪ್ರವಾದಿ ಆಗಮಿಸುವ ಪ್ರತೀಕ್ಷೆ ಇತ್ತು ಮತ್ತು ಅದರ ಬಗ್ಗೆ ಭವಿಷ್ಯವಾಣಿ ಸಹ ಇತ್ತು." (ಪುಟ 132)

"ಮುಹಮ್ಮದ್ ವಿವಿಧ ಸಂದರ್ಭಗಳಲ್ಲಿ ಹೇಗೆ ವಿವಿಧ ರೀತಿಗಳಲ್ಲಿ ವರ್ತಿಸಿದರು ಎಂಬುದರ ಬಗ್ಗೆ ನನಗೆ ಆಶ್ಚರ್ಯವಾಗುವುದಿಲ್ಲ. ನನಗೆ ಆಶ್ಚರ್ಯವಾಗುವುದು ಅವರ ಸ್ವಂತ ವ್ಯಕ್ತಿತ್ವದಲ್ಲಿ ಎಷ್ಟು ಕಡಿಮೆ ವ್ಯತ್ಯಾಸ ಉಂಟಾಯಿತು ಎನ್ನುವುದರ ಬಗ್ಗೆಯಾಗಿದೆ. ಮರುಭೂಮಿಯಲ್ಲಿ ಕುರಿ ಹಿಂಡುಗಳ ಮೇಲ್ವಿಚಾರಕನಾಗಿರುವಾಗ, ಸಿರಿಯಾ ದೇಶಕ್ಕೆ ವ್ಯಾಪಾರಿಯಾಗಿ ಹೋದಾಗ, ಹಿರಾ ಗುಹೆಯಲ್ಲಿ ಏಕಾಂತ ವಾಸಿಯಾಗಿದ್ದಾಗ, ಅಲ್ಪ ಸಂಖ್ಯೆಯ ಜನರ ಸುಧಾರಕನಾಗಿದ್ದಾಗ, ಮದೀನದಲ್ಲಿ

ಪರದೇಶಿಯಾಗಿದ್ದಾಗ, ಜಯಶಾಲಿಯಾಗಿ ನಗರ ಪ್ರವೇಶ ಮಾಡಿದಾಗ, ಗ್ರೀಸ್ ಮತ್ತು ಇರಾನಿನ ದೊರೆಗಳಿಗೆ ಸಮಾನವಾದ ಅಧಿಕಾರ ಗಳಿಸಿದಾಗ ನಾವು ಅವರ ವ್ಯಕ್ತಿತ್ವದಲ್ಲಿ ಬದಲಾಗದ ಒಂದು ಸ್ಥಿರತೆಯನ್ನು ಕಾಣುತ್ತೇವೆ."

"ಬೇರೆ ಒಬ್ಬನ ಬಾಹ್ಯ ಸ್ಥಿತಿ ಇಷ್ಟು ಅಧಿಕ ವ್ಯತ್ಯಾಸಗೊಂಡಿದ್ದರೆ ಅವನ ವ್ಯಕ್ತಿತ್ವದಲ್ಲಿ ಇಷ್ಟು ಕಡಿಮೆ ವ್ಯತ್ಯಾಸ ಎಂದೂ ಕಾಣಿಸುತ್ತಿರಲಿಲ್ಲ. ಮುಹಮ್ಮದರ ಬಾಹ್ಯ ಸ್ಥಿತಿ ಬದಲಾಯಿಸುತ್ತಲೇ ಇದ್ದುವು. ಆದರೆ ಈ ಎಲ್ಲ ಪರಿಸ್ಥಿತಿಗಳಲ್ಲೂ ಅವರ ವ್ಯಕ್ತಿತ್ವದಲ್ಲಿ ಒಂದೇ ಗುಣ ಇದ್ದುದಾಗಿ ನನಗೆ ಕಾಣಿಸುತ್ತದೆ." (ಪುಟ 133) (Muhammad and Muhammadanism by R. Bosworth Smith, Smith Elder & Co. 1876.)

=========================================

**ವಾಶಿಂಗ್ಟನ್ ಇರ್ವಿಂಗ್** (Washington Irving) ತನ್ನ ಪುಸ್ತಕ **"ಲೈಫ್ ಆಫ್ ಮಹೋಮೆಟ್"**ನಲ್ಲಿ ಹೀಗೆ ಬರೆದಿದ್ದಾರೆ:

"ಅವರು (ಮುಹಮ್ಮದ್ ಪೈಗಂಬರ್) ಗಳಿಸಿದ ಜಯಗಳು ಅವರಲ್ಲಿ ದುರಹಂಕಾರವನ್ನು ಉಂಟುಮಾಡಲಿಲ್ಲ. ಅವರು ಅಹಂಭಾವ ಭರಿತರಾಗಿ ಕೃತ್ರಿಮ ವೈಭವವನ್ನು ಪ್ರಕಟಿಸಲಿಲ್ಲ. ಅವರು ಗಳಿಸಿದ ಜಯಗಳಲ್ಲಿ ಸ್ವಾರ್ಥ ಹಿತಾಸಕ್ತಿಗಳಿರುತ್ತಿದ್ದರೆ ನಿಶ್ಚಯವಾಗಿಯೂ ಅವರು ಹಾಗೆ ವರ್ತಿಸುತ್ತಿದ್ದರು. ಅವರು ಶಕ್ತಿಶಾಲಿಗಳಾಗಿದ್ದಾಗ ತಮ್ಮ ಸ್ವಭಾವಗುಣಗಳಲ್ಲೂ ವೇಷಭೂಷಣಗಳಲ್ಲೂ ತಮ್ಮ ಅತ್ಯಂತ ಕಷ್ಟಕಾಲದಲ್ಲಿ ಹೊಂದಿದ್ದ ಸರಳತೆಯನ್ನೇ ಕಾಪಾಡಿದರು. ಅವರು ದೊರೆಯಾಗಿದ್ದ ಕಾಲದಲ್ಲಿ ಕೂಡ ಅವರ ಕೋಣೆಗೆ ಪ್ರವೇಶಿಸುವಾಗ ಯಾರಾದರೂ ಅನಾವಶ್ಯಕ ಗೌರವವನ್ನು ಪ್ರಕಟಿಸುವುದಾದರೆ ಅವರು ಅದನ್ನು ಇಷ್ಟಪಡುತ್ತಿರಲಿಲ್ಲ."

(The Life of Mahomet by Washington Irving, Leipzig Bernhard Touchritz 1850, Page - 272-273)

========================================

**ಸರ್ ವಿಲ್ಲಿಯಮ್ ಮ್ಯೂರ್** (Sir William Muir) ತನ್ನ ಪುಸ್ತಕ **"ಲೈಫ್ ಆಫ್ ಮಹೋಮೆಟ್"**ನಲ್ಲಿ ಹೀಗೆ ಬರೆಯುತ್ತಾರೆ:

"ಅವರು (ಮುಹಮ್ಮದ್ ಪೈಗಂಬರ್) ತನ್ನ ಪ್ರತಿಯೊಂದು ಕೆಲಸವನ್ನು ಪೂರ್ಣವಾಗಿ ಮಾಡುತ್ತಿದ್ದರು. ಅವರು ಕೈಗೆತ್ತಿಕೊಂಡ ಕೆಲಸವನ್ನು ಮಾಡಿ ಮುಗಿಸುವ ತನಕ ಅದನ್ನು ಕೈಬಿಡುತ್ತಿರಲಿಲ್ಲ. ಸಾಮಾಜಿಕ ಸಂಬಂಧಗಳಲ್ಲೂ ಅವರ ವರ್ತನೆ ಹೀಗೆಯೇ ಆಗಿತ್ತು. ಅವರು ಯಾರೊಂದಿಗಾದರೂ ಮಾತನಾಡಲು ಮುಖ ತಿರುಗಿಸುವಾಗ ಮುಖವನ್ನು ಪೂರ್ಣವಾಗಿ ಮತ್ತು ತನ್ನ ಶರೀರವನ್ನು ಪೂರ್ಣವಾಗಿ ಆ ವ್ಯಕ್ತಿಯ ಕಡೆಗೆ ತಿರುಗಿಸುತ್ತಿದ್ದರು. ಅವರು ಹಸ್ತದಾನ ಮಾಡುವಾಗ ತಮ್ಮ ಕೈಯನ್ನು ಮೊದಲು ಹಿಂತೆಗೆಯುತ್ತಿರಲಿಲ್ಲ. ಯಾವನಾದರೂ ಅಪರಿಚಿತನೊಂದಿಗೆ ಮಾತನಾಡುವಾಗ ಮಧ್ಯದಲ್ಲಿ ನಿಲ್ಲಿಸುತ್ತಿರಲಿಲ್ಲ. ಅವನ ಮಾತನ್ನು ಪೂರ್ಣವಾಗಿ ಆಲಿಸುತ್ತಿದ್ದರು. ಅವರ ಜೀವನದಲ್ಲಿ ಅವರ ಕೌಟುಂಬಿಕ ಸರಳತೆ ಪ್ರಭಾವ ಬೀರುತ್ತಿತ್ತು. ಅವರಿಗೆ ಪ್ರತಿಯೊಂದು ಕೆಲಸ ಸ್ವಯಂ ಮಾಡುವ ಅಭ್ಯಾಸವಿತ್ತು. ಅವರಿಂದ ಯಾರಾದರೂ ಏನನ್ನಾದರೂ ಅಪೇಕ್ಷಿಸಿದರೆ ತನ್ನ ಸ್ವಂತ ಕೈಗಳಿಂದ ನೀಡುತ್ತಿದ್ದರು. ಮನೆ ಕೆಲಸಗಳಲ್ಲಿ ಪತ್ನಿಯರಿಗೆ ಸಹಾಯ ಮಾಡುತ್ತಿದ್ದರು."

"ನದಿಯು ತನ್ನ ದಡದೊಂದಿಗೆ ಯಾವಾಗಲೂ ಸಮೀಪಿಸುವ ಹಾಗೆ ಎಲ್ಲರೂ ಅವರನ್ನು ಸಮೀಪಿಸುತ್ತಿದ್ದರು. ಹೊರಗಿನಿಂದ ಆಗಮಿಸುವ ಪ್ರತಿನಿಧಿ ಸಂಘಗಳನ್ನು ಗೌರವದಿಂದ ಸ್ವಾಗತಿಸುತ್ತಿದ್ದರು. ಪ್ರತಿನಿಧಿ ಸಂಘಗಳ ಆಗಮನ ಮತ್ತು ಇತರ ಆಡಳಿತೆಗೆ ಸಂಬಂಧಿಸಿದ ವಿಷಯಗಳು ಚರಿತ್ರೆಯಿಂದ ತಿಳಿಯುತ್ತದೆ ಮತ್ತು ಮುಹಮ್ಮದ್‌ರಲ್ಲಿ ಒಬ್ಬ ಸಮರ್ಥ ಆಡಳಿತೆಗಾರನ ಎಲ್ಲ ಯೋಗ್ಯತೆಗಳು ಇದ್ದುವೆಂದು ಸಾಬೀತಾಗುತ್ತದೆ. ಎಲ್ಲದಕ್ಕಿಂತಲೂ ಆಶ್ಚರ್ಯಕರವಾದುದು ಏನೆಂದರೆ ಅವರಿಗೆ ಬರೆಯಲು ತಿಳಿದಿರಲಿಲ್ಲ." (ಪುಟ 510 – 513)

ವಿಲ್ಲಿಯಮ್ ಮ್ಯೂರ್ ಪುನಃ ಬರೆಯುತ್ತಾರೆ: “ಅವರ ಮಹತ್ವಪೂರ್ಣವಾದ ಸದ್ಗುಣ, ಅವರು ತೋರಿಸುತ್ತಿದ್ದ ಸಂತೋಷಕರವಾದ ವರ್ತನೆ ಮತ್ತು ಅತ್ಯಂತ ಸಾಮಾನ್ಯ ಅನುಯಾಯಿಯನ್ನು ಕೂಡ ಅವರು ಲಕ್ಷಿಸುತ್ತಾ ಇದ್ದುದಾಗಿದೆ. ಲಜ್ಜೆ, ವಾತ್ಸಲ್ಯ, ಸಹನೆ, ಔದಾರ್ಯ, ವಿನಯ ಅವರ ಸ್ವಭಾವ ಗುಣಗಳ ವೈಶಿಷ್ಟ್ಯಗಳಾಗಿದ್ದುವು. ಈ ಕಾರಣದಿಂದ ಅವರು ತನ್ನ ಸುತ್ತುಮುತ್ತಲಿನ ಎಲ್ಲರನ್ನೂ ತನ್ನನ್ನು ಪ್ರೀತಿಸುವವರನ್ನಾಗಿ ಮಾಡುತ್ತಿದ್ದರು. ಕೋರಿಕೆಗಳನ್ನು ನಿರಾಕರಿಸುವುದು ಅವರಿಗೆ ಇಷ್ಟಕರವಾಗಿರಲಿಲ್ಲ. ಅವರಿಗೆ ಯಾರದಾದರೂ ಬೇಡಿಕೆಯನ್ನು ಈಡೇರಿಸಲು ಸಾಧ್ಯವಿಲ್ಲವಾದರೆ ಅವರು ಮೌನ ಅವಲಂಬಿಸುತ್ತಿದ್ದರು. ಅತ್ಯಂತ ಬಡವನ ಆಮಂತ್ರಣವನ್ನು ಕೂಡ ಅವರು ಎಂದೂ ನಿರಾಕರಿಸುತ್ತಿರಲಿಲ್ಲ. ಯಾರದಾದರೂ ಪಾರಿತೋಷಕ ಅದು ಎಷ್ಟು ಚಿಕ್ಕದಾಗಿದ್ದರೂ ಅವರು ಎಂದೂ ತಿರಸ್ಕರಿಸಲಿಲ್ಲ. ಅವರ ಇನ್ನೊಂದು ಅದ್ವಿತೀಯ ಸದ್ಗುಣವೇನೆಂದರೆ ಅವರ ಅತಿಥಿಗಳಾಗಿ ಆಗಮಿಸಿದ ಪ್ರತಿಯೊಬ್ಬ ತಾನೇ ಮುಖ್ಯ ಅತಿಥಿ ಎಂದು ಭಾವಿಸುವ ಹಾಗೆ ಅವರು ವರ್ತಿಸುತ್ತಿದ್ದರು. ಅವರು ಯಾರನ್ನಾದರೂ ತನ್ನ ಜಯದ ಬಗ್ಗೆ ಸಂತೋಷಗೊಂಡುದಾಗಿ ಕಂಡರೆ ಅವನಿಗೆ ಹಸ್ತದಾನ ಮಾಡುತ್ತಿದ್ದರು ಮತ್ತು ಆಲಿಂಗಿಸುತ್ತಿದ್ದರು. ಕಷ್ಟದಿಂದ ಬಳಲುವ ಜನರೊಂದಿಗೆ ಬಹಳ ಮೃದುವಾಗಿ ಸಹಾನುಭೂತಿ ತೋರಿಸುತ್ತಿದ್ದರು. ಮಕ್ಕಳೊಂದಿಗೆ ವಾತ್ಸಲ್ಯಭರಿತವಾಗಿ ವರ್ತಿಸುತ್ತಿದ್ದರು. ಮಾರ್ಗದಲ್ಲಿ ಆಟವಾಡುತ್ತಿರುವ ಮಕ್ಕಳನ್ನು ಕಂಡರೆ ಅವರಿಗೆ ಸಲಾಮ್ ಹೇಳುತ್ತಿದ್ದರು. ಅದರಿಂದ ತನ್ನ ಗೌರವಕ್ಕೆ ಕುಂದುಂಟಾಗುತ್ತದೆ ಎಂದು ಅವರು ಭಾವಿಸುತ್ತಿರಲಿಲ್ಲ. ಅವರು ಕ್ಷಾಮದ ಕಾಲದಲ್ಲೂ ತನ್ನ ಊಟವನ್ನು ಇತರರಿಗೂ ಹಂಚುತ್ತಿದ್ದರು. ಪ್ರತಿಯೊಬ್ಬರಿಗೆ ಅನುಕೂಲ ಮಾಡಿಕೊಡಲು ಯಾವಾಗಲೂ ಪ್ರಯತ್ನಿಸುತ್ತಿದ್ದರು. ಅವರ ಎಲ್ಲ ನಡೆವಳಿಕೆಗಳಲ್ಲೂ ಮೃದುತ್ವ ಸ್ಪಷ್ಟವಾಗಿ ಕಾಣಿಸುತ್ತಿತ್ತು. ಮುಹಮ್ಮದ್ ಪೈಗಂಬರ್ ನಿಷ್ಠಾವಂತ ಸ್ನೇಹಿತರಾಗಿದ್ದರು. ಅವರು ಅಬೂಬಕರ್‌ರನ್ನು ಸಹೋದರನಿಗಿಂತ ಹೆಚ್ಚಿಗೆ ಪ್ರೀತಿಸಿದರು.

ಅಲಿಗೆ ಪಿತೃ ಪ್ರೇಮ ನೀಡಿದರು. ವಿಮೋಚಿತ ಗುಲಾಮನಾದ ಝೈದ್ ತನ್ನ ತಂದೆಯೊಂದಿಗೆ ತನ್ನ ಊರಿಗೆ ಹೊರಟು ಹೋಗುವುದಕ್ಕಿಂತ ಮಕ್ಕದಲ್ಲಿರುವುದೇ ಉತ್ತಮವೆಂದು ವಾತ್ಸಲ್ಯಭರಿತ ಪ್ರವಾದಿಯೊಂದಿಗೆ ತನಗಿದ್ದ ನಿಕಟ ಸಂಬಂಧದ ಕಾರಣದಿಂದ ನಿರ್ಧರಿಸಿದನು. ತನ್ನ ಯಜಮಾನರೊಂದಿಗೆ ಆತನು ಹೇಳಿದನು: 'ನಾನು ನಿಮ್ಮನ್ನು ಬಿಟ್ಟು ಹೋಗಲಾರೆ. ನೀವೇ ನನ್ನ ತಂದೆ ತಾಯಿ ಆಗಿರುವಿರಿ.' ಈ ಸ್ನೇಹ ಸಂಬಂಧ ಝೈದ್ ಮೃತನಾಗುವ ತನಕ ಮುಂದುವರಿಯಿತು. ಝೈದ್ ಪುತ್ರ ಉಸಾಮನೊಂದಿಗೆ ಅವನ ತಂದೆಯ ಕಾರಣ ಬಹಳ ವಾತ್ಸಲ್ಯದಿಂದ ಮುಹಮ್ಮದ್ ಪೈಗಂಬರ್ ವರ್ತಿಸುತ್ತಿದ್ದರು. ಉಸ್ಮಾನ್ ಮತ್ತು ಉಮರ್ ಸಹ ಮುಹಮ್ಮದರೊಂದಿಗೆ ವಿಶಿಷ್ಟ ಸಂಬಂಧ ಹೊಂದಿದ್ದರು. ಮುಹಮ್ಮದ್ ಪೈಗಂಬರರು ಹುದೈಬಿಯಾದ ರಾಜಿ ಸಂಧಾನದ ಸಂದರ್ಭದಲ್ಲಿ ಬಂಧಿತನಾಗಿದ್ದ ತನ್ನ ಅಳಿಯನನ್ನು ರಕ್ಷಿಸಲು ಜೀವ ನೀಡಲು ಸಹ ಪ್ರತಿಜ್ಞೆ ಮಾಡಿದುದು ಅವರ ಸತ್ಯವಾದ ಸ್ನೇಹಕ್ಕೆ ಒಂದು ಉದಾಹರಣೆಯಾಗಿದೆ. ಬೇರೆ ಅನೇಕ ಸಂದರ್ಭಗಳಲ್ಲಿ ಮುಹಮ್ಮದರು ತನ್ನ ಬದಲಾಗದ ಪ್ರೇಮದ ಪ್ರದರ್ಶನ ಮಾಡಿದ್ದುದನ್ನು ವಿವರಿಸಬಹುದಾಗಿದೆ. ಆದರೆ ಅವರ ಪ್ರೀತಿ ಪ್ರಕಟಿಸಿದುದು ಅನುಚಿತ ಸಂದರ್ಭಗಳಲ್ಲಿ ಆಗಿರಲಿಲ್ಲ. ಪ್ರತಿಯೊಂದು ಸಂಭವ ಅವರ ತೀವ್ರ ಪ್ರೀತಿಯ ಕನ್ನಡಿಯಾಗಿತ್ತು."

ಲೇಖಕ ಪುನಃ ಬರೆಯುತ್ತಾರೆ: "ಅವರು ಅತ್ಯಂತ ಶಕ್ತಿಶಾಲಿಯಾಗಿದ್ದಾಗ ಕೂಡ ಅವರು ಮಿತವಾಗಿಯೂ ನ್ಯಾಯ ಪೂರ್ಣವಾಗಿಯೂ ವರ್ತಿಸುವವರಾಗಿದ್ದರು. ಅವರು ತಮ್ಮ ವಾದಗಳನ್ನು ಅಂಗೀಕರಿಸಿದ ತಮ್ಮ ಹಿಂದಿನ ಶತ್ರುಗಳ ಜೊತೆ ವರ್ತಿಸುವಾಗ ಅವರ ಮೃದುತ್ವದಲ್ಲಿ ಸ್ವಲ್ಪ ಕೂಡ ಕೊರತೆ ಉಂಟಾಗುತ್ತಿರಲಿಲ್ಲ. ಮಕ್ಕದ ಜನರು ದೀರ್ಘಕಾಲ ಹಿಂಸಾಚಾರಗಳಿಗೆ ಗುರಿಪಡಿಸಿದ ಕಾರಣ ಮಕ್ಕವನ್ನು ಜಯಶಾಲಿಯಾಗಿ ಪ್ರವೇಶಿಸುವಾಗ ಸಿಟ್ಟಿನಿಂದ ಬೆಂಕಿ ಮತ್ತು ರಕ್ತದ ಹೋಳಿಯಾಡಬೇಕಾಗಿತ್ತು. ಆದರೆ ಮುಹಮ್ಮದ್ ಕೆಲವು ಅಪರಾಧಿಗಳನ್ನು

ಹೊರತುಪಡಿಸಿ ಎಲ್ಲರಿಗೂ ಕ್ಷಮಾದಾನ ಮಾಡಿದರು. ಹಿಂದಿನ ಕಾಲದ ಎಲ್ಲ ಕಹಿ ನೆನಪುಗಳನ್ನು ಮರೆತುಬಿಟ್ಟರು. ಕಠಿಣ ರೀತಿಯ ಅಪಮಾನ, ಧಿಕ್ಕಾರ, ದೌರ್ಜನ್ಯಗಳನ್ನು ಮಾಡಿದ ಶತ್ರುಗಳೊಂದಿಗೆ ಉತ್ತಮ ರೀತಿಯಲ್ಲಿ ವರ್ತಿಸಿದರು. ಮದೀನದಲ್ಲಿ ಅಬ್ದುಲ್ಲಾ ಮತ್ತು ಇತರ ವಿರೋಧಿ ಸಂಗಡಿಗರು ಹಲವಾರು ವರ್ಷಗಳ ಕಾಲ ಪೈಗಂಬರರ ಯೋಜನೆಗಳಿಗೆ ಅಡ್ಡಿ ಉಂಟುಮಾಡುತ್ತಿದ್ದರೂ ಅವರ ಅಧಿಕಾರವನ್ನು ಎದುರಿಸುತ್ತಿದ್ದರೂ ಅವರ ತಪ್ಪುಗಳನ್ನು ಕಡೆಗಣಿಸಿದುದು ಒಂದು ಪ್ರಕಾಶಮಾನವಾದ ಉದಾಹರಣೆಯಾಗಿದೆ. ಅವರಿಂದ ಸೋಲಿಸಲ್ಪಟ್ಟ ಗೋತ್ರಗಳ ಜನರೊಂದಿಗೆ ಕೂಡ ಅವರು ಮೃದುವಾಗಿ ವರ್ತಿಸಿದರು. ಹಿಂದೆ ಜಯ ಲಭಿಸಿದ ಕಾಲದಲ್ಲಿ ಅವರನ್ನು ಕಠಿಣವಾಗಿ ಎದುರಿಸಿದವರೊಂದಿಗೆ ಸಹ ಸಹಾನುಭೂತಿಯಿಂದ ವರ್ತಿಸಿದರು.” (ಪುಟ 305–307)

ಲೇಖಕ ಪುನಃ ಬರೆಯುತ್ತಾರೆ: “ಮುಹಮ್ಮದರ ಸತ್ಯತೆಗೆ ಬೆಂಬಲ ನೀಡುವ ಒಂದು ಚಿಹ್ನೆ ಯಾವುದೆಂದರೆ ಅವರನ್ನು ಆರಂಭ ಕಾಲದಲ್ಲಿ ನಂಬಿದವರು ಉನ್ನತ ಮಟ್ಟದ ಸ್ವಭಾವದವರಾಗಿದ್ದರು. ಅವರ ಸಮೀಪದ ಸ್ನೇಹಿತ ಮತ್ತು ಕುಟುಂಬದ ಜನರು ಅವರ ವೈಯಕ್ತಿಕ ಜೀವನದ ಬಗ್ಗೆ ಚೆನ್ನಾಗಿ ತಿಳಿದವರಾಗಿದ್ದರು. ಒಬ್ಬ ಕಪಟಿಯಾದ ಮೋಸಗಾರ ಮನುಷ್ಯನ ಮನೆಯ ವರ್ತನೆ ಮತ್ತು ಬಾಹ್ಯ ವರ್ತನೆಯಲ್ಲಿರುವ ನ್ಯೂನತೆಗಳು ಅವರಲ್ಲಿರಲಿಲ್ಲ ಎಂದು ಅವರು ಮನವರಿಕೆ ಮಾಡಿದ್ದರು.”

(ಪುಟ 97–98)

(The Life of Mahomet by William Muir, Vol. IV, London: Smith, Elder and Co., 65 Cornhill, 1861)

===========================================

**ಸರ್ ತೋಮಸ್ ಕಾರ್ಲೈಲ್** (Sir Thomas Carlyle) ಹೀಗೆ ಬರೆಯುತ್ತಾರೆ: "ಒಂದು ವಿಷಯ ನಾವು ಮರೆತು ಬಿಡಬಾರದು. ಅವರಿಗೆ (ಮುಹಮ್ಮದ್ ಪೈಗಂಬರರಿಗೆ) ಶಾಲೆಯ ವಿದ್ಯಾಭ್ಯಾಸ ಲಭಿಸಿರಲಿಲ್ಲ. ಬರೆಯುವ ನೈಪುಣ್ಯ ಅರಬಿಗಳಿಗೆ ಹೊಸತಾಗಿತ್ತು. ಮುಹಮ್ಮದ್ ಸ್ವತಃ ಬರೆಯಲು ತಿಳಿದಿರಲಿಲ್ಲವೆಂಬುದು ಸತ್ಯವಾಗಿದೆ. ಅವರ ವಿದ್ಯಾಭ್ಯಾಸ ಮರುಭೂಮಿಯ ವಾಸ ಮತ್ತು ಅನುಭವಗಳ ಸುತ್ತಲೂ ತಿರುಗುತ್ತಿತ್ತು. ಈ ಅಪರಿಮಿತ ಪ್ರಪಂಚ, ತನ್ನ ಅಂಧಕಾರಮಯ ಪ್ರದೇಶ, ತನ್ನ ಕಣ್ಣುಗಳಿಂದಲೂ ಯೋಚನೆಗಳಿಂದಲೂ ಏನು ಗಳಿಸಲು ಅವರಿಗೆ ಸಾಧ್ಯವಿತ್ತು? ಅವರಿಗೆ ಯಾವ ಪುಸ್ತಕವೂ ಲಭಿಸಿರಲಿಲ್ಲವೆಂದು ತಿಳಿಯುವಾಗ ಇನ್ನಷ್ಟು ಆಶ್ಚರ್ಯವಾಗುತ್ತದೆ. ಅರಬ್ ದೇಶದ ಅಂಧಕಾರಮಯ ಮರುಭೂಮಿಯಲ್ಲಿ ಆಲಿಸಿದ ಮಾತುಗಳು ಮತ್ತು ಸ್ವತಃ ಕಂಡುದರ ಹೊರತು ಅವರಿಗೆ ಬೇರೆ ಜ್ಞಾನ ಲಭಿಸಿರಲಿಲ್ಲ. ಅವರಿಗಿಂತ ಮೊದಲಿನ ರಾಜ್ಯಾಡಳಿತೆಗೆ ಸಂಬಂಧಿಸಿದ ವಿಷಯಗಳು ಅಥವಾ ಅರಬ್ ದೇಶದ ಹೊರಗಿನ ರಾಜ್ಯಾಡಳಿತೆ ವಿಷಯಗಳು ಇವುಗಳ ಬಗ್ಗೆ ಅವರಿಗೆ ಜ್ಞಾನ ಲಭಿಸಿರದ ಕಾರಣ ಅವರಿಗೆ ಸಂಬಂಧಿಸಿ ಅವುಗಳು ಇರಲೇ ಇಲ್ಲ ಎಂಬಂತಾಗಿತ್ತು. ಅಂತಹ ಅಧಿಕಾರಿಗಳಾಗಲಿ ವಿದ್ವಾಂಸರಾಗಲಿ ಈ ಮಹಾನುಭಾವರೊಂದಿಗೆ ನೇರವಾಗಿ ಮಾತನಾಡಿರಲಿಲ್ಲ. ಅವರು ಈ ಮರುಭೂಮಿಯಲ್ಲಿ ಏಕಾಂತದಲ್ಲಿದ್ದರು. ಅವರು ಪ್ರಕೃತಿ ಮತ್ತು ತನ್ನ ಯೋಚನೆಗಳ ಅಕ್ಷದಲ್ಲಿ ತಿರುಗುತ್ತಿದ್ದರು."

ಹಝ್ರತ್ ಮುಹಮ್ಮದ್ ಪೈಗಂಬರರ ﷺ ವಿವಾಹಗಳ ಬಗ್ಗೆ ಮತ್ತು ದಾಂಪತ್ಯ ಜೀವನದ ಬಗ್ಗೆ ಲೇಖಕ ಹೀಗೆ ಬರೆಯುತ್ತಾರೆ:

"ಅವರು ಖದೀಜರ ಜೀವಿತದ ಜೊತೆಗಾರನಾದುದು ಹೇಗೆ? ಅವರು ಶ್ರೀಮಂತೆ ಮತ್ತು ವಿಧವೆಯಾದ ಖದೀಜರ ವ್ಯಾಪಾರದ ನಿರ್ವಾಹಕನಾದುದು ಹೇಗೆ? ಸಿರಿಯಾದ ಸಂತೆಗಳಲ್ಲಿ ಅವರು ಹೇಗೆ ವ್ಯಾಪಾರ ಮಾಡಿದರು? ಅವರು ಇವುಗಳನ್ನೆಲ್ಲ ಹೇಗೆ ನಿರ್ವಹಿಸಿದರು?

ಅವರು ಅತ್ಯಂತ ಪ್ರಾಮಾಣಿಕತೆಯಿಂದಲೂ ನೈಪುಣ್ಯತೆಯಿಂದಲೂ ಈ ಕೆಲಸಗಳನ್ನು ಮಾಡಿದರೆಂದು ಎಲ್ಲರಿಗೂ ತಿಳಿದಿದೆ. ಖದೀಜರ ಹೃದಯದಲ್ಲಿ ಅವರ ಬಗ್ಗೆ ಕೃತಜ್ಞತೆ ಮತ್ತು ಗೌರವ ಭಾವನೆ ಹೇಗೆ ಉಂಟಾಯಿತು? ಅರಬ್ ದೇಶದ ಲೇಖಕರು ಬರೆದ ವಿವಾಹದ ವಿವರಣೆಗಳು ಬಹಳ ಆಕರ್ಷಕವೂ ಮನವರಿಕೆ ಮಾಡಿಕೊಳ್ಳಬೇಕಾದುದೂ ಆಗಿದೆ. ವಿವಾಹದ ಸಂದರ್ಭದಲ್ಲಿ ಮುಹಮ್ಮದರ ಪ್ರಾಯ 25 ಮತ್ತು ಖದೀಜರದು 40 ಆಗಿತ್ತು."

"ಅವರು ಈ ಮಹತಿಯೊಂದಿಗೆ ಅತ್ಯಂತ ಪ್ರೀತಿ, ನೆಮ್ಮದಿಯ ಜೀವನವನ್ನು ನಡೆಸಿದರೆಂದು ತಿಳಿದು ಬರುತ್ತದೆ. ಅವರು ಖದೀಜರನ್ನು ವಾಸ್ತವಿಕವಾಗಿ ಪ್ರೀತಿಸುತ್ತಿದ್ದು ಅವರ ಪ್ರೀತಿಗೆ ಪಾತ್ರರಾಗಿದ್ದರು. ಅವರ ಜೀವಿತದ ಈ ಕಾಲಘಟ್ಟ ಈ ರೀತಿ ದಾಟಿ ಹೋದುದು ಅವರನ್ನು ಸುಳ್ಳುಪ್ರವಾದಿ ಎಂದು ಹೇಳುವುದಕ್ಕೆ ತಡೆಯಾಗಿದೆ. ಆ ಕಾಲಘಟ್ಟದಲ್ಲಿ ಅವರ ವಿರುದ್ಧ ಯಾವ ಆಕ್ಷೇಪ ಕೂಡ ಮಾಡಲು ಸಾಧ್ಯವಿರಲಿಲ್ಲ. ಅದು ಅತ್ಯಂತ ಸರಳವೂ ಸಮಾಧಾನಕರವೂ ಆಗಿದ್ದು ಆ ರೀತಿ ಅವರ ಯೌವ್ವನದ ದಿನಗಳು ದಾಟಿ ಹೋದುವು."

"ಕ್ರೈಸ್ತರಾದ ನಮ್ಮಲ್ಲಿ ಪ್ರಸಿದ್ಧವಾಗಿರುವುದು, ಮುಹಮ್ಮದ್ ನಿಪುಣ ತಂತ್ರಗಾರನಾದ ಸುಳ್ಳು ಪ್ರವಾದಿಯಾಗಿದ್ದಾರೆ ಮತ್ತು ಅವರ ಧರ್ಮ ಭ್ರಾಂತಿ ಮತ್ತು ನಿರರ್ಥಕ ವಿಚಾರಗಳ ದಿಬ್ಬವಾಗಿದೆ ಎಂದಾಗಿದೆ. ಆದರೆ ಇವೆಲ್ಲ ಈಗ ತಪ್ಪೆಂದು ಜನರು ತಿಳಿದುಕೊಳ್ಳುತ್ತಿದ್ದಾರೆ. ಈ ಮನುಷ್ಯನ ಬಗ್ಗೆ ದ್ವೇಷಭರಿತ ಕ್ರೈಸ್ತರು ಸೃಜಿಸಿರುವ ಮಾತುಗಳು ಮತ್ತು ಆರೋಪಗಳು ನಮ್ಮನ್ನು ಅಪಮಾನಕ್ಕೆ ಗುರಿಪಡಿಸುತ್ತವೆ. ಈ ಮನುಷ್ಯನ ಬಾಯಿಯಿಂದ ಹೊರಟ ಮಾತುಗಳು ಹನ್ನೆರಡು ನೂರು ವರ್ಷಗಳಿಂದ ಹದಿನೆಂಟು ಕೋಟಿ ಜನರಿಗೆ ಮಾರ್ಗದರ್ಶನ ನೀಡುತ್ತಿವೆ. ಈಗ ಎಷ್ಟು ಜನರು ಮುಹಮ್ಮದ್ ಪೈಗಂಬರರ ಮೇಲೆ ನಂಬಿಕೆ ಹೊಂದಿದ್ದಾರೋ ಅವರಿಗಿಂತ ಹೆಚ್ಚಿನ ಸಂಖ್ಯೆಯ ಜನರು ಯಾರದೇ ಮಾತನ್ನು ನಂಬುವುದಿಲ್ಲ. ನನ್ನ ದೃಷ್ಟಿಯಲ್ಲಿ, ಒಬ್ಬ ಸುಳ್ಳುವಾದಿ ಈ ಧರ್ಮವನ್ನು

ಪ್ರಚಾರಗೊಳಿಸಿದನೆಂದು ಹೇಳುವುದಕ್ಕಿಂತ ಕೆಟ್ಟದಾದ ದೇವಭಯರಹಿತ ಮಾತು ಬೇರೊಂದಿಲ್ಲ.”

(Six Lectures on Heroes, Hero - Worship and the Heroic in History by Thomas Carlyle, 1846)

==========================================

ಒಬ್ಬ ಫ್ರೆಂಚ್ ದಾರ್ಶನಿಕ **ಲಾಮಾರ್ಟಿನ್** (Lamartine) ತನ್ನ ಪುಸ್ತಕ **"ಹಿಸ್ಟರಿ ಆಫ್ ಟರ್ಕಿ"**ಯಲ್ಲಿ ಹೀಗೆ ಬರೆಯುತ್ತಾರೆ: "ಒಬ್ಬ ಮನುಷ್ಯನ ಯೋಗ್ಯತೆಯನ್ನು ಪರೀಕ್ಷಿಸಲು ಮೂರು ಮಾನದಂಡಗಳನ್ನು ನಿಶ್ಚಯಿಸಬಹುದಾಗಿದೆ. ಅವನ ಉದ್ದೇಶಲಕ್ಷ್ಯ ಎಷ್ಟು ಬೃಹತ್ತಾದುದು, ಅವನ ಸಾಧನ ಸಾಮಗ್ರಿಗಳು ಎಷ್ಟು ಸೀಮಿತವಾಗಿವೆ ಮತ್ತು ಅವನ ಕೆಲಸದ ಪರಿಣಾಮ ಎಷ್ಟು ವೈಭವಶಾಲಿಯಾಗಿದೆ. ಈ ವಿಷಯಗಳಲ್ಲಿ ಮುಹಮ್ಮದ್ ಪೈಗಂಬರರನ್ನು ಎದುರಿಸಲು ಧೈರ್ಯಪಡುವವರು ಯಾರಿದ್ದಾರೆ? ಲೋಕದಲ್ಲಿ ಪ್ರಸಿದ್ಧರಾದವರು ಕೆಲವು ಸೈನ್ಯಗಳನ್ನು, ನಿಯಮಗಳನ್ನು ಮತ್ತು ದೇಶಗಳನ್ನು ಸೋಲಿಸಿದರು. ಅವರು ಲೌಕಿಕ ಸರಕಾರಗಳನ್ನು ಸ್ಥಾಪಿಸಿದರು. ಅವುಗಳಲ್ಲಿ ಕೆಲವು ಅವರ ಕಣ್ಣುಗಳ ಮುಂದೆಯೇ ನುಚ್ಚುನೂರಾದವು. ಆದರೆ ಮುಹಮ್ಮದ್ ಪೈಗಂಬರರು ಮಾತ್ರ ಸೈನ್ಯಗಳನ್ನು, ನಿಯಮಗಳನ್ನು, ಸರಕಾರಗಳನ್ನು, ವಿವಿಧ ಜನಾಂಗಗಳನ್ನು ಮಾತ್ರವಲ್ಲ ಲೋಕದ ಜನ ಸಂಖ್ಯೆಯ ಮೂರನೆಯ ಒಂದು ಭಾಗವನ್ನು ಒಗ್ಗೂಡಿಸಿದರು. ಅದರೊಂದಿಗೆ ಬಲಿಪೀಠಗಳನ್ನು, ದೇವರುಗಳನ್ನು, ಧರ್ಮಗಳನ್ನು, ನಂಬಿಕೆಗಳನ್ನು, ಯೋಚನೆಗಳನ್ನು ಮತ್ತು ಆತ್ಮಗಳನ್ನು ನವೀಕರಿಸಿದರು. ಮುಹಮ್ಮದರ ಅಸ್ತಿಭಾರ ಒಂದು ಗ್ರಂಥ ಮಾತ್ರವಾಗಿತ್ತು. ಅದರ ಪದಾನುಪದ ನಿಯಮಗಳಾದುವು. ಆ ಮಹಾನುಭಾವರು ಪ್ರತಿಯೊಂದು ಭಾಷೆ ಮತ್ತು ಪ್ರತಿಯೊಂದು ವರ್ಗಕ್ಕೆ ಆಧ್ಯಾತ್ಮಿಕ ವೈಶಿಷ್ಟ್ಯತೆಯನ್ನು ನೀಡಿದರು."

"ಮುಹಮ್ಮದ್ ಒಬ್ಬ ದಾರ್ಶನಿಕ, ಒಬ್ಬ ಪ್ರವಚನಕಾರ, ಪೈಗಂಬರ್, ನಿಯಮ ಶಾಸ್ತ್ರಜ್ಞ, ಶೂರ, ಚಿಂತನೆಗಳನ್ನು ಜಯಿಸುವವ, ವೈಚಾರಿಕ ಉಪದೇಶಗಳನ್ನು ನವೀಕರಿಸುವವ, ಹಲವಾರು ಲೌಕಿಕ ಸರಕಾರಗಳನ್ನು ಮತ್ತು ಒಂದು ಆಧ್ಯಾತ್ಮಿಕ ಸರಕಾರವನ್ನು ಸ್ಥಾಪಿಸುವವರಾಗಿದ್ದರು. ಮನುಷ್ಯನ ಶ್ರೇಷ್ಠತೆಯನ್ನು ನಿರ್ಧರಿಸಲು ಯಾವುದೇ ಮಾನದಂಡವನ್ನು

ನಿಗದಿಪಡಿಸಿದರೂ ಮುಹಮ್ಮದರಿಗಿಂತ ಶ್ರೇಷ್ಠರಾದ ಒಬ್ಬ ವ್ಯಕ್ತಿ ಎಂದಾದರೂ ಜನಿಸಿರುವರೇ?"

(History of Turkey by A. De Lamartine, New York: D. Appleton & Co, 346 & 348 Broadway, 1855. Vol 1 page 154-155)

==========================================

**ಜಾನ್ ಡೆವನ್‌ಪೋರ್ಟ್** (John Davenport) ಹೀಗೆ ಬರೆಯುತ್ತಾರೆ:

"ತನ್ನ ದೇಶದ ನಿವಾಸಿಗಳಾದ ಅರಬಿಗಳು ಯಾವ ಕೀಳು ವಿಗ್ರಹಾರಾಧನೆಯಲ್ಲಿ ಮಗ್ನರಾಗಿದ್ದರೋ ಅವರ ನಂಬಿಕೆಗಳನ್ನು ಬದಲಾಯಿಸಿ, ಏಕದೇವನ ಆರಾಧನೆಯನ್ನು ಸ್ಥಾಪಿಸಿ, ಸ್ಥಿರವಾದ ಸುಧಾರಣೆಗಳನ್ನು ಮಾಡಿದವರನ್ನು ಸುಳ್ಳು ಪ್ರವಾದಿ ಎಂದು ಹೇಳಲು ಸಾಧ್ಯವೇ? ನಾವು ಇಂತಹ ಉತ್ಸಾಹಭರಿತ ಸುಧಾರಕನನ್ನು ವಂಚಕನೆಂದು ಹೇಳಲು ಸಾಧ್ಯವೇ? ಅವರ ಎಲ್ಲ ಕೆಲಸಗಳು ವಂಚನೆಯಿಂದ ಕೂಡಿರಲು ಸಾಧ್ಯವೇ? ಇಲ್ಲ, ಖಂಡಿತ ಹಾಗೆ ನಾವು ಹೇಳಲಾರೆವು. ಸಹೃದಯತೆ ಮತ್ತು ವಿಶ್ವಾಸಾರ್ಹತೆ ಹೊರತು ಬೇರೆ ಯಾವುದೇ ಕಾರಣದಿಂದ ಇಷ್ಟು ಸ್ಥಿರಚಿತ್ತನಾಗಿ ದೇವ ಸಂದೇಶವಾಣಿಯ ಅವತೀರ್ಣ ಪ್ರಾರಂಭವಾದ ಮೊದಲುಗೊಂಡು ಕೊನೆಯ ತನಕ ಸನ್ನದ್ಧನಾಗಿರಲು ಸಾಧ್ಯವಿಲ್ಲ. ಅವರ ಜೊತೆಗಿದ್ದ ಜನರಿಗೆ, ಅವರೊಂದಿಗೆ ನಿಕಟ ಸಂಬಂಧ ಹೊಂದಿದವರಿಗೆ ಅವರು ತೋರಿಕೆಯ ವ್ಯಕ್ತಿ ಎಂಬ ಸಂಶಯ ಎಂದೂ ತಲೆದೋರಿರಲಿಲ್ಲ."

ಒಂದು ವಿಷಯದ ಬಗ್ಗೆ ದೃಢವಾಗಿಯೂ ಸತ್ಯಪೂರ್ಣವಾಗಿಯೂ ಹೇಳಬಹುದು. ಪಶ್ಚಿಮದ ದೇಶಗಳ ರಾಜರು, ಮುಸ್ಲಿಮ್ ಹೋರಾಟಗಾರರು ಮತ್ತು ತುರ್ಕಿಗಳ ಬದಲಿಗೆ ಏಶಿಯಾದ ದೊರೆಗಳಾಗುತ್ತಿದ್ದರೆ, ಮುಸ್ಲಿಮರು ಕ್ರೈಸ್ತರೊಂದಿಗೆ ಸೌಹಾರ್ದದಿಂದ ವರ್ತಿಸಿದ ರೀತಿಯಲ್ಲಿ, ಈ ಕ್ರೈಸ್ತ ದೊರೆಗಳು ಮುಸ್ಲಿಮರೊಂದಿಗೆ ವರ್ತಿಸುತ್ತಿರಲಿಲ್ಲ. ಏಕೆಂದರೆ ಕ್ರೈಸ್ತರು ತಮ್ಮೊಂದಿಗೆ ಭಿನ್ನಾಭಿಪ್ರಾಯ ಹೊಂದಿದ ತಮ್ಮದೇ ಧರ್ಮದ ಪಂಗಡಗಳ ವಿರುದ್ಧ ಅತ್ಯಂತ ದ್ವೇಷದಿಂದಲೂ ದೌರ್ಜನ್ಯದಿಂದಲೂ ವರ್ತಿಸಿ ಅವರನ್ನು ಹಿಂಸಾಚಾರಕ್ಕೆ ಗುರಿಪಡಿಸಿದರು."

“ಎಲ್ಲ ನ್ಯಾಯಪಾಲಕರಲ್ಲೂ ಜಯಶಾಲಿಗಳಲ್ಲೂ ಒಬ್ಬನೇ ಒಬ್ಬನ ಜೀವನಚರಿತ್ರೆ ಕೂಡ ಮುಹಮ್ಮದರ ಜೀವನ ಚರಿತ್ರೆಗಿಂತ ವಿಫುಲವೂ ಸತ್ಯವೂ ಆಗಿರುವುದಿಲ್ಲ.”

(An Apology for Mohammed and The Koran by John Davenport, Page 82, Chapter: The Koran, Printed by J. Davy & Sons, London, 1882)

=========================================

**ಮೈಕಲ್ ಎಚ್. ಹಾರ್ಟ್** (Michael H. Hart) **"ದಿ ಹಂಡ್ರೆಡ್: ಏ ರ್‍ಯಾಂಕಿಂಗ್ ಆಫ್ ದಿ ಮೋಸ್ಟ್ ಇನ್‌ಫ್ಲುಯೆನ್‌ಶಿಯಲ್ ಪರ್ಸನ್ಸ್ ಇನ್ ಹಿಸ್ಟರಿ"** ಎಂಬ ಪುಸ್ತಕದಲ್ಲಿ ಹೀಗೆ ಬರೆದಿದ್ದಾರೆ:

"ಲೋಕದ ಮೇಲೆ ಪ್ರಭಾವ ಬೀರಿದ ಜನರಲ್ಲಿ ಮುಹಮ್ಮದರಿಗೆ ಪ್ರಥಮ ಸ್ಥಾನ ನೀಡಿದ ಬಗ್ಗೆ ಕೆಲವು ವಾಚಕರಿಗೆ ಪ್ರಾಯಶಃ ಆಶ್ಚರ್ಯವಾಗಬಹುದು ಮತ್ತು ಕೆಲವರು ಅದರ ಬಗ್ಗೆ ಪ್ರಶ್ನಿಸಲೂಬಹುದು. ಆದರೆ ಚರಿತ್ರೆಯಲ್ಲಿ ಧಾರ್ಮಿಕ ಕ್ಷೇತ್ರದಲ್ಲೂ ಲೌಕಿಕ ಕ್ಷೇತ್ರದಲ್ಲೂ ಅತ್ಯಂತ ಜಯಶಾಲಿಯಾದ ವ್ಯಕ್ತಿ ಅವರೊಬ್ಬರೇ ಆಗಿದ್ದಾರೆ. ಮಾನವನ ಚರಿತ್ರೆಯ ಮೇಲೆ ಮುಹಮ್ಮದ್ ಹೇಗೆ ಪ್ರಭಾವ ಬೀರಿದರು ಎಂದು ಹೇಗೆ ಅಂದಾಜುಮಾಡಬಹುದೆಂದು ಕೇಳಬಹುದಾಗಿದೆ. ಬೇರೆ ಧರ್ಮಗಳ ಹಾಗೆ ಇಸ್ಲಾಮ್ ಧರ್ಮ ಸಹ ತನ್ನ ಅನುಯಾಯಿಗಳ ಜೀವಿತದ ಮೇಲೆ ಗಾಢವಾದೊಂದು ಪ್ರಭಾವ ಬೀರಿದೆ. ಇದೇ ಕಾರಣದಿಂದ ಲೋಕದಲ್ಲಿರುವ ಮಹಾನ್ ಧರ್ಮಗಳ ಸ್ಥಾಪಕರಿಗೆ ಈ ಗ್ರಂಥದಲ್ಲಿ ಮುಖ್ಯ ಸ್ಥಾನ ನೀಡಲಾಗಿದೆ."

"ಒಂದು ಅಂದಾಜಿನ ಪ್ರಕಾರ ಕ್ರೈಸ್ತರ ಜನಸಂಖ್ಯೆ ಮುಸ್ಲಿಮರ ಜನಸಂಖ್ಯೆಗಿಂತ ಇಮ್ಮಡಿಯಾಗಿದೆ. ಈ ಕಾರಣದಿಂದ ಮುಹಮ್ಮದರಿಗೆ ಯೇಸುಗಿಂತ ಮೊದಲ ಸ್ಥಾನ ನೀಡಿದುದು ಪ್ರಾಯಶಃ ನಿಮಗೆ ಆಶ್ಚರ್ಯಕರವಾಗಿ ಕಾಣಿಸಬಹುದು. ಆದರೆ ನನ್ನ ಈ ತೀರ್ಮಾನಕ್ಕೆ ಎರಡು ದೊಡ್ಡ ಕಾರಣಗಳಿವೆ. ಮೊದಲನೆಯ ಕಾರಣವೇನೆಂದರೆ, ಕ್ರೈಸ್ತ ಧರ್ಮಕ್ಕೋಸ್ಕರ ಯೇಸುಕ್ರಿಸ್ತರು ಮಾಡಿದ ಕೆಲಸಗಳಿಗಿಂತ ಮುಹಮ್ಮದರು ಇಸ್ಲಾಮ್ ಧರ್ಮಕ್ಕೋಸ್ಕರ ಮಾಡಿದ ಕೆಲಸಗಳು ಬಹಳ ಹೆಚ್ಚು ಮುಖ್ಯವಾಗಿದ್ದುವು. ಯೇಸು ಕ್ರಿಸ್ತರೇ ಕ್ರೈಸ್ತ ಧರ್ಮದ ಆಧ್ಯಾತ್ಮಿಕ ಮತ್ತು ನೈತಿಕ ಜೀವನ ತತ್ವಗಳ ಕಾರಣಕರ್ತರಾಗಿದ್ದರೂ ಕ್ರೈಸ್ತ ಧರ್ಮವನ್ನು ಅಭಿವೃದ್ಧಿಪಡಿಸುವುದಕ್ಕೆ ಸಂತ ಪೌಲ್ ಅಸ್ತಿಭಾರ ಹಾಕಿದರು. ಕ್ರೈಸ್ತ ಧರ್ಮಕ್ಕೆ ಇಂದಿನ ರೂಪ ನೀಡಿದ್ದು ಮತ್ತು ಹೊಸ ಒಡಂಬಡಿಕೆಯ ಬಹಳ ದೊಡ್ಡ ಭಾಗವನ್ನು ಬರೆದದ್ದು ಸಂತ ಪೌಲ್ ಆಗಿದ್ದರು."

“ಇಸ್ಲಾಮ್ ಧರ್ಮ ಮತ್ತು ಅದರ ಎಲ್ಲ ನೈತಿಕ, ಧಾರ್ಮಿಕ ತತ್ವಗಳಿಗೆ ಹೊಣೆಗಾರರು ಮುಹಮ್ಮದ್ ಆಗಿದ್ದರು. ಮುಹಮ್ಮದ್ ಈ ಹೊಸ ಧರ್ಮಕ್ಕೆ ರೂಪ ನೀಡಿದರು ಮತ್ತು ಇಸ್ಲಾಮ್ ತತ್ವಗಳನ್ನು ಜಾರಿಗೊಳಿಸಲು ತಳಹದಿ ಹಾಕಿದರು. ಮುಸ್ಲಿಮರ ಪವಿತ್ರ ಖುರ್‌ಆನ್ ಮುಹಮ್ಮದರ ಜ್ಞಾನಭರಿತ ಗ್ರಂಥವಾಗಿದ್ದು ಅದನ್ನು ಬರೆದವರು ಅವರೇ ಆಗಿದ್ದರು.”

“ಪವಿತ್ರ ಖುರ್‌ಆನ್ ಬಗ್ಗೆ, ಅದು ತನಗೆ ಅಲ್ಲಾಹನಿಂದ ಅವತೀರ್ಣವಾದ ಸಂದೇಶವಾಣಿ ಎಂದು ಮುಹಮ್ಮದ್ ಹೇಳುತ್ತಾರೆ. ಖುರ್‌ಆನಿನ ಬಹಳ ದೊಡ್ಡ ಭಾಗ ಮುಹಮ್ಮದರ ಜೀವಿತ ಕಾಲದಲ್ಲೇ ಬರೆದು ಸಂರಕ್ಷಿಸಲ್ಪಟ್ಟಿತ್ತು. ಅವರು ನಿಧನ ಹೊಂದಿ ಸ್ವಲ್ಪ ಕಾಲದ ನಂತರ ಅದನ್ನು ಗ್ರಂಥ ರೂಪದಲ್ಲಿ ಸಂಗ್ರಹಿಸಲಾಯಿತು. ಆದುದರಿಂದ ಖುರ್‌ಆನ್ ಮುಹಮ್ಮದರ ಉಪದೇಶಗಳ ಮತ್ತು ಕಲ್ಪನೆಗಳ ವಾಸ್ತವಿಕ ಪ್ರತಿಬಿಂಬವಾಗಿದೆ. ಒಂದು ಅಭಿಪ್ರಾಯದ ಪ್ರಕಾರ ಅದು ಮುಹಮ್ಮದರ ಶಬ್ದಗಳೇ ಆಗಿವೆ. ಆದರೆ ಯೇಸುಕ್ರಿಸ್ತರ ಉಪದೇಶಗಳ ಸಂಗ್ರಹದ ಇಂತಹ ಒಂದು ಪುಸ್ತಕವಿಲ್ಲ. ಕ್ರೈಸ್ತರು ಬೈಬಲ್‌ಗೆ ನೀಡುವ ಮಹತ್ವ ಮುಸ್ಲಿಮರು ಖುರ್‌ಆನಿಗೆ ನೀಡುತ್ತಾರೆ. ಆದುದರಿಂದ ಮುಹಮ್ಮದರು ಖುರ್‌ಆನ್ ಮೂಲಕ ಮುಸ್ಲಿಮರ ಮೇಲೆ ಧಾರಾಳವಾಗಿ ಪ್ರಭಾವ ಬೀರಿದರು. ಯೇಸುಕ್ರಿಸ್ತರು ಮತ್ತು ಸಂತ ಪೌಲರು ಕ್ರೈಸ್ತ ಧರ್ಮದ ಮೇಲೆ ಜೊತೆಯಾಗಿ ಬೀರಿದ ಪ್ರಭಾವಕ್ಕಿಂತ ಮುಹಮ್ಮದರು ಇಸ್ಲಾಮ್ ಧರ್ಮದ ಮೇಲೆ ಬೀರಿದ ಪ್ರಭಾವ ಬಹಳ ಹೆಚ್ಚಿನ ಮಟ್ಟದ್ದು ಆಗಿದೆ. ಧಾರ್ಮಿಕ ದೃಷ್ಟಿಯಿಂದ ಮಾತ್ರ ನೋಡಿದರೂ ಯೇಸುಕ್ರಿಸ್ತರು ಮಾನವ ಚರಿತ್ರೆಯ ಮೇಲೆ ಬೀರಿದ ಪ್ರಭಾವದಷ್ಟು ಮುಹಮ್ಮದರು ಸಹ ಮಾನವ ಚರಿತ್ರೆಯ ಮೇಲೆ ಬೀರಿದ್ದಾರೆ.”

(The 100: A Ranking of the Most Influential Persons in History by Michael H. Hart)

**ಕೆರನ್ ಆರ್ಮ್‌ಸ್ಟ್ರೋಂಗ್** (Karen Armstrong) ತನ್ನ ಪುಸ್ತಕ **"ಏ ಬಯೋಗ್ರಫೀ ಆಫ್ ದಿ ಪ್ರೋಫೆಟ್"**ನಲ್ಲಿ ಹೀಗೆ ಬರೆಯುತ್ತಾರೆ:

"ಏಕದೇವ ವಿಶ್ವಾಸದ ಸಿದ್ಧಾಂತವನ್ನೊಳಗೊಂಡ ಆಧ್ಯಾತ್ಮಿಕತೆಗೆ ತಳಹದಿ ಹಾಕಲು ಮುಹಮ್ಮದರು ಶೂನ್ಯದಿಂದ ಕೆಲಸವನ್ನು ಆರಂಭಿಸಿದರು. ಅವರು ತನ್ನ ಕೆಲಸವನ್ನು ಪ್ರಾರಂಭಿಸಿದಾಗ ತನ್ನ ಕೆಲಸವನ್ನು ಮುಂದುವರಿಸಲು ಯಾರಾದರೂ ಸಂದರ್ಭ ಒದಗಿಸಿಕೊಡುವುದು ಅಸಂಭಾವ್ಯವಾಗಿತ್ತು. ಅರಬ್ ಜನಾಂಗ ಏಕದೇವ ವಿಶ್ವಾಸ ಅಂಗೀಕರಿಸಲು ತೀರಾ ಸಿದ್ಧವಾಗಿರಲಿಲ್ಲ. ಆ ಜನರು ಅಂತಹ ಉನ್ನತ ಮಟ್ಟದ ವಿಚಾರಕ್ಕೆ ಯೋಗ್ಯರಾಗಿರಲಿಲ್ಲ. ಹಿಂಸಾಚಾರಭರಿತ ಮತ್ತು ಭಯಾನಕವಾದ ಆ ಸಮಾಜದಲ್ಲಿ ಈ ವಿಚಾರವನ್ನು ಪ್ರಚಾರಗೊಳಿಸುವುದು ಅಪಾಯಕರವಾಗಬಹುದಿತ್ತು. ಮುಹಮ್ಮದ್ ತನ್ನ ಜೀವವನ್ನು ಆ ಸಮಾಜದಲ್ಲಿ ರಕ್ಷಿಸುವುದಾದರೆ ಅದು ಅತ್ಯಂತ ದೊಡ್ಡ ಭಾಗ್ಯವಾಗುತ್ತಿತ್ತು. ವಾಸ್ತವಿಕವಾಗಿ ಅವರ ಜೀವ ಅನೇಕ ಸಲ ಅಪಾಯಕ್ಕೊಳಪಟ್ಟಿದ್ದಿತು. ಅದರಿಂದ ಅವರು ರಕ್ಷಿಸಲ್ಪಟ್ಟದ್ದು ಒಂದು ರೀತಿಯ ಪವಾಡವೇ ಆಗಿತ್ತು. ಆದರೆ ಮುಹಮ್ಮದರೇ ಜಯಶಾಲಿಯಾದರು. ಮುಹಮ್ಮದರು ತನ್ನ ಜೀವಿತ ಕಾಲಾವಧಿಯಲ್ಲಿಯೇ ಗೋತ್ರಗಳ ಮಧ್ಯೆ ಇದ್ದ ಹಿಂಸಾಚಾರದ ಪುರಾತನ ಆಚಾರಗಳನ್ನು ಕೊನೆಗೊಳಿಸಿದರು. ಅರಬ್ ಸಮಾಜದಲ್ಲಿ ಧರ್ಮರಾಹಿತ್ಯದ ಸಮಸ್ಯೆ ಬಾಕಿಯಾಗಿ ಉಳಿಯಲಿಲ್ಲ. ಅರಬ್ ಜನಾಂಗ ತನ್ನ ಚರಿತ್ರೆಯ ಒಂದು ಹೊಸ ವಲಯವನ್ನು ಪ್ರವೇಶಿಸಲು ಸಿದ್ಧವಾಯಿತು." (ಪುಟ 53, 54)

"ಧಾರ್ಮಿಕ ವಾದ ವಿವಾದಗಳಿಗೆ ನಿರ್ಬಂಧ ಹೇರಿದವರು ಪಶ್ಚಿಮದವರೇ ಹೊರತು ಇಸ್ಲಾಮ್ ಅಲ್ಲ. ಕ್ರುಸೇಡ್ ಯುದ್ಧಗಳ

ಕಾಲದಲ್ಲಿ ಪಶ್ಚಿಮವು ಅನ್ಯರ ಅಭಿಪ್ರಾಯಗಳನ್ನು ಅದುಮಿ ಹಾಕುವ ಅಭಿಲಾಷೆಯಲ್ಲಿ ಭ್ರಾಂತಿ ಹೊಂದಿತ್ತು. ಅದು ಯಾವ ಉತ್ಸಾಹದಿಂದ ತನ್ನ ವಿರೋಧಿಗಳಿಗೆ ಶಿಕ್ಷೆ ನೀಡಿತೆಂದರೆ, ಚರಿತ್ರೆಯಲ್ಲಿ ಅಂತಹ ಬೇರೆ ಉದಾಹರಣೆ ಲಭಿಸುವುದಿಲ್ಲ. ವಿರುದ್ಧಾಭಿಪ್ರಾಯ ಹೊಂದಿದವರ ಮೇಲೆ ದೌರ್ಜನ್ಯ, ಪ್ರೊಟೆಸ್ಟಂಟರ ಮೇಲೆ ಕ್ಯಾಥೋಲಿಕರ ದೌರ್ಜನ್ಯ, ಕ್ಯಾಥೋಲಿಕರ ಮೇಲೆ ಪ್ರೊಟೆಸ್ಟಂಟರ ದೌರ್ಜನ್ಯಕ್ಕೆ ಕಾರಣ ಸಂಕೀರ್ಣ ಧಾರ್ಮಿಕ ನಂಬಿಕೆಗಳಾಗಿದ್ದುವು. ಅವುಗಳ ಬಗ್ಗೆ ಯಹೂದಿ ಮತ್ತು ಇಸ್ಲಾಮ್ ಧರ್ಮಗಳು ವೈಯಕ್ತಿಕವಾಗಿ ಸ್ವಾತಂತ್ರ್ಯ ನೀಡಿದುವು. ಕ್ರೈಸ್ತರ ಧರ್ಮರಹಿತ ನಂಬಿಕೆಗಳಿಗೆ ಯಹೂದಿ ಮತ್ತು ಇಸ್ಲಾಮ್ ಧರ್ಮಗಳಲ್ಲಿ ಯಾವುದೇ ಸಂಬಂಧವಿಲ್ಲ. ದೇವತ್ವದ ಬಗ್ಗೆ ಕ್ರೈಸ್ತರ ಕಲ್ಪನೆಗಳು ಅಂಗೀಕರಿಸಲು ಅಸಾಧ್ಯವಾಗುವ ರೀತಿಯಲ್ಲಿ ಬಹುದೇವಾರಾಧನೆಗೆ ಕೊಂಡೊಯ್ಯುತ್ತವೆ." (ಪುಟ 27) (Muhammad- A Biography of the Prophet by Karen Armstrong)

==========================================

**ಅನ್ನಿ ಬೆಸಂಟ್** (Annie Besant) ತನ್ನ ಪುಸ್ತಕ **"ದಿ ಲೈಫ್ ಆ್ಯಂಡ್ ಟೀಚಿಂಗ್ಸ್ ಆಫ್ ಮುಹಮ್ಮದ್"**ನಲ್ಲಿ ಹೀಗೆ ಬರೆಯುತ್ತಾರೆ:

**"**ಅರಬ್ ದೇಶದ ಈ ಮಹಾನ್ ಪೈಗಂಬರರ ಜೀವನದ ಬಗ್ಗೆ ಮತ್ತು ಅವರ ಕಾರ್ಯಗಳ ಬಗ್ಗೆ ಅಧ್ಯಯನ ಮಾಡಿ ಅವರು ಯಾವ ಉಪದೇಶ ನೀಡಿದರು ಮತ್ತು ಯಾವ ರೀತಿ ಅವರು ಜೀವಿಸಿದರು ಎಂದು ಮನವರಿಕೆ ಮಾಡಿಕೊಂಡ ವ್ಯಕ್ತಿಗೆ ದೇವನ ಪ್ರವಾದಿಗಳಲ್ಲಿ ಒಬ್ಬರಾದ ಈ ಮಹಾನ್ ಪೈಗಂಬರರಿಗೆ ಗೌರವ ನೀಡದಿರಲು ಸಾಧ್ಯವಿಲ್ಲ. ನಾನು ಹೇಳಲು ಬಯಸುವ ವಿಷಯಗಳು ಬಹಳ ಜನರಿಗೆ ಇದರ ಮೊದಲೇ ತಿಳಿದಿರಬಹುದು. ಆದರೆ ನಾನು ಯಾವಾಗಲೆಲ್ಲ ಪೈಗಂಬರರ ಜೀವನ ಚರಿತ್ರೆಯನ್ನು ಓದುತ್ತೇನೋ, ಆಗ ಈ ಅರಬೀ ಗುರುವರ್ಯರನ್ನು ಗೌರವಿಸಲು ಒಂದು ಹೊಸ ಭಾವನೆ ಜನಿಸುತ್ತದೆ ಮತ್ತು ಅವರನ್ನು ಹೊಗಳಲು ಒಂದು ಹೊಸ ಬಣ್ಣ ಕಾಣಿಸುತ್ತದೆ.**"**

(The Life and Teachings of Muhammad, Madras, 1932, page 4)

=========================================

**ರೂಥ್ ಕ್ರಾನ್‌ಸ್ಟನ್** (Ruth Cranston)ತನ್ನ ಪುಸ್ತಕ **"ವರ್ಲ್ಡ್ ಫೇಥ್"**ನಲ್ಲಿ ಹೀಗೆ ಬರೆಯುತ್ತಾರೆ:

"ಮುಹಮ್ಮದ್ (ಪೈಗಂಬರ್) ಎಂದೂ ಯುದ್ಧ ಅಥವಾ ರಕ್ತಪಾತವನ್ನು ಪ್ರಾರಂಭಿಸಲಿಲ್ಲ. ಅವರು ಮಾಡಿದ ಪ್ರತಿಯೊಂದು ಯುದ್ಧ ಪ್ರತಿರೋಧಕವಾಗಿತ್ತು. ಅವರು ತನ್ನ ಜೀವ ರಕ್ಷಿಸಲು ಆ ಕಾಲಘಟ್ಟದ ಆಯುಧಗಳನ್ನು ಮತ್ತು ಯುದ್ಧ ವಿಧಾನಗಳನ್ನು ಅನುಸರಿಸಿ ಯುದ್ಧ ಮಾಡಿದರು. ಒಂದು ವಿಷಯ ಸ್ಪಷ್ಟವಾಗಿ ಹೇಳಬಹುದು – ಹದಿನಾಲ್ಕು ಕೋಟಿ ಕ್ರೈಸ್ತರಲ್ಲಿ ಕೆಲವರು ಇತ್ತೀಚೆಗೆ ಒಂದು ಲಕ್ಷದ ಇಪ್ಪತ್ತು ಸಾವಿರಕ್ಕಿಂತ ಹೆಚ್ಚು ಸಂಖ್ಯೆಯ ಜನರನ್ನು ಒಂದು ಬಾಂಬ್‌ನಿಂದ ನಾಶಮಾಡಿದರು. ಮುಹಮ್ಮದರು ತಮ್ಮ ಎಲ್ಲ ಯುದ್ಧಗಳಲ್ಲಿ ಅತ್ಯಂತ ಕೆಟ್ಟ ಪರಿಸ್ಥಿತಿಗಳಲ್ಲೂ ಕೇವಲ ಐದು ಅಥವಾ ಆರು ನೂರು ಜನರನ್ನು ಕೊಂದಿರಬಹುದು. ಅಂತಹ ಪ್ರವಾದಿಯನ್ನು ಸಂಶಯ ದೃಷ್ಟಿಯಿಂದ ನೋಡುವುದು ಸಮಂಜಸವಾಗದು. ಏಳನೆಯ ಶತಮಾನದ ಅಂಧಕಾರಮಯ ಕಾಲಘಟ್ಟದಲ್ಲಿ ಜನರು ಒಬ್ಬರಿನ್ನೊಬ್ಬರ ರಕ್ತ ಹೀರಲು ಸನ್ನದ್ಧರಾಗುತ್ತಿದ್ದಾಗ ನಡೆದ ಜನರ ನಾಶವನ್ನು ಇಪ್ಪತ್ತನೆಯ ಶತಮಾನದ ವಿನಾಶಗಳೊಂದಿಗೆ ಹೋಲಿಸಿ ಹೇಳುವುದು ತಿಳಿಗೇಡಿತನವೇ ಹೊರತು ಇನ್ನೇನೂ ಅಲ್ಲ. ಇಂಕ್ವಿಝಿಷನ್ ಮತ್ತು ಕ್ರುಸೇಡ್ ಯುದ್ಧಗಳಲ್ಲಿ ನಡೆದ ಹತ್ಯೆಗಳ ಬಗ್ಗೆ ಹೇಳಬೇಕಾಗಿಲ್ಲ. ಆಗಿನ ಕಾಲದ ಕ್ರೈಸ್ತ ಯೋಧರು ಹೀಗೆ ದಾಖಲಿಸಿದ್ದಾರೆ: ಧರ್ಮರಹಿತರ ಗಾಯಗೊಂಡ ಶವಗಳ ಮಧ್ಯೆ ಪಾದದ ಗಂಟಿನ ತನಕ ರಕ್ತದೋಕುಳಿಯಲ್ಲಿ ತಿರುಗಾಡುತ್ತಿದ್ದೆವು."

(World Faith by Ruth Cranston, Harper & Row Publishers, New York, 1949, page 155)

==========================================

**ಗೋಡ್‌ಫ್ರೇ ಹಿಗ್ಗಿನ್ಸ್** (Godfrey Higgins) ಹೀಗೆ ಬರೆಯುತ್ತಾರೆ:

“ಕ್ರೈಸ್ತ ಪಾದರಿಗಳು ಮುಹಮ್ಮದರ ಧರ್ಮವನ್ನು ನಿಂದಿಸುವುದು ಅದರ ದ್ವೇಷಭರಿತ ಸೌಹಾರ್ದರಾಹಿತ್ಯದ ಕಾರಣ ಎಂದು ಎಲ್ಲ ಮಾತುಗಳಿಗಿಂತ ಹೆಚ್ಚಾಗಿ ಹೇಳಲಾಗುತ್ತದೆ. ಇದು ವಿಚಿತ್ರ ವಿವರಣೆ ಮತ್ತು ಕಾಪಟ್ಯವಾಗಿದೆ. ಸ್ಪೈನಿನ ಮುಸ್ಲಿಮರು ಕ್ರೈಸ್ತರಾದರೂ ಅವರು ನಿಜವಾದ ಕ್ರೈಸ್ತರಲ್ಲ ಎಂದು ಆರೋಪಿಸಿ ಹೊಡೆದೋಡಿಸಿದವರು ಯಾರು? ಮೆಕ್ಸಿಕೋ ಮತ್ತು ಪೆರು ದೇಶಗಳಲ್ಲಿ ಲಕ್ಷಾಂತರ ಜನರನ್ನು ಅವರು ಕ್ರೈಸ್ತರಾಗದ ಕಾರಣ ಕೊಂದವರು ಮತ್ತು ಗುಲಾಮರನ್ನಾಗಿ ಮಾಡಿದವರು ಯಾರು? ಆದರೆ ಮುಸ್ಲಿಮರು ಗ್ರೀಸ್ ದೇಶದಲ್ಲಿ ಮಾಡಿದುದು ಎಷ್ಟು ಉತ್ತಮವೂ ವಿಭಿನ್ನವೂ ಆಗಿತ್ತು! ಅವರು ನೂರಾರು ವರ್ಷಗಳ ಕಾಲ ಕ್ರೈಸ್ತರು ಕ್ರೈಸ್ತ ಧರ್ಮವನ್ನು ಅನುಸರಿಸಲು ಬಿಟ್ಟರು. ಅವರ ಪಾದರಿಗಳು, ಅವರ ಬಿಷಪರು, ಅವರ ಆರ್ಚ್ ಬಿಷಪರು, ಅವರ ಸನ್ಯಾಸಿಗಳು ತಮ್ಮ ಚರ್ಚ್‌ಗಳಲ್ಲಿ, ತಮ್ಮ ಜಹಗೀರುಗಳೊಂದಿಗೆ ಸಮಾಧಾನದಿಂದ ಜೀವಿಸಲು ಅನುಮತಿಸಿದರು.”

ಇನ್ನೊಂದು ಕಡೆ ಹೀಗೆ ಬರೆಯುತ್ತಾರೆ: “ಇಸ್ಲಾಮಿನ ಖಲೀಫರ ಆಡಳಿತದ ಕಾಲಘಟ್ಟದಲ್ಲಿ ಇನ್‌ಕ್ವಿಝಿಷನ್ ಎಂಬ ಕುಖ್ಯಾತ ಸಂಭವಗಳಿಗಿಂತ ಅರ್ಧದಷ್ಟು ಕುಖ್ಯಾತವಾದ ಸಂಭವಗಳು ನಮಗೆ ಕಾಣಿಸುವುದಿಲ್ಲ. ಧಾರ್ಮಿಕ ಅಭಿಪ್ರಾಯ ವ್ಯತ್ಯಾಸದ ಕಾರಣ ಸುಟ್ಟು ಹಾಕಿದ ಒಂದೇ ಒಂದು ಘಟನೆಯಾಗಲಿ, ಇಸ್ಲಾಮ್ ಧರ್ಮವನ್ನು ಏಕೆ ಸ್ವೀಕರಿಸಲಿಲ್ಲ ಎಂದು ಆರೋಪಿಸಿ ಮರಣ ದಂಡನೆ ವಿಧಿಸಿದ ಒಂದೇ ಒಂದು ಘಟನೆಯಾಗಲಿ ನಡೆದಿಲ್ಲ.”

(As Cited in Apology for Mohammed by Godfrey Higgins, Lahore, page 123-128)

==========================================

**ಎಡ್ವರ್ಡ್ ಗಿಬ್ಬನ್** (Edward Gibbon) ತನ್ನ **"ಹಿಸ್ಟರಿ ಆಫ್ ದಿ ಸರಾಸಿನ್ ಎಂಪಾಯರ್"** ಎಂಬ ಪುಸ್ತಕದಲ್ಲಿ ಹೀಗೆ ಬರೆಯುತ್ತಾರೆ:

"ಮುಹಮ್ಮದರ ಧರ್ಮದ ಪ್ರಚಾರಕ್ಕಿಂತ ಆ ಧರ್ಮದ ಮುಂದುವರಿಯುವಿಕೆ ನಮಗೆ ಆಶ್ಚರ್ಯಕರವಾಗಿದೆ. ಮುಹಮ್ಮದ್ (ಪೈಗಂಬರ್) ಮಕ್ಕ ಮತ್ತು ಮದೀನದಲ್ಲಿ ಚಿತ್ರಿಸಿದ ಮೂಲ ಚಿತ್ರವನ್ನು ಹನ್ನೆರಡು ನೂರು ವರ್ಷಗಳ ಕ್ರಾಂತಿಯ ನಂತರ ಕೂಡ ಹಿಂದೂಸ್ಥಾನದ, ಆಫ್ರಿಕದ ಮತ್ತು ತುರ್ಕಿಸ್ಥಾನದ ಖುರ್‌ಆನಿನ ವಿಶ್ವಾಸಿಗಳು ಇಂದು ಸಹ ಸಂರಕ್ಷಿಸಿಟ್ಟಿದ್ದಾರೆ. ಮುಹಮ್ಮದರ ಶಿಷ್ಯರು ತಮ್ಮ ಧರ್ಮವನ್ನು ಒಬ್ಬ ಮನುಷ್ಯನ ಕಲ್ಪನೆಯೊಂದಿಗೆ ಜೋಡಿಸುವ ಪರೀಕ್ಷೆ ಮತ್ತು ಪಿಸುಗುಟ್ಟುವಿಕೆಯನ್ನು ಎದುರಿಸುತ್ತಾ ಇದ್ದರು. ಇಸ್ಲಾಮ್ ಧರ್ಮದ ಸರಳ ಮತ್ತು ಬದಲಾಯಿಸಲ್ಪಡದ ಪ್ರತಿಜ್ಞೆ 'ನಾನು ಏಕ ದೇವನನ್ನು ಮತ್ತು ಏಕ ದೇವನ ಸಂದೇಶವಾಹಕನನ್ನು ನಂಬುತ್ತೇನೆ' ಎಂದಾಗಿದೆ. ದೇವನ ಬಗ್ಗೆ ಈ ವೈಚಾರಿಕ ಚಿತ್ರವು ಬದಲಾಯಿಸಲ್ಪಟ್ಟು ವಿಗ್ರಹದ ರೂಪವನ್ನು ಮುಸ್ಲಿಮರಲ್ಲಿ ಉಂಟುಮಾಡಲಿಲ್ಲ. ಇಸ್ಲಾಮಿನ ಪೈಗಂಬರರಿಗೆ ನೀಡಲ್ಪಡುವ ಗೌರವ ಮನುಷ್ಯನ ಗುಣಗಳ ಮಟ್ಟವನ್ನು ಮೀರಲಿಲ್ಲ. ಪೈಗಂಬರರ ಜೀವಂತ ಉಪದೇಶಗಳು ಅವರ ಅನುಯಾಯಿಗಳ ಕೃತಜ್ಞತೆ ಮತ್ತು ಪರೋಪಕಾರ ಮನೋಭಾವನೆಗಳನ್ನು ಬುದ್ಧಿ ಮತ್ತು ಧರ್ಮದ ಪರಿಮಿತಿಗಳೊಳಗೆ ಇರಿಸಿದೆ."

(History of the Saracen Empire by Edward Gibbon, Alex Murray and Sons, London, 1870 - page54)

========================================